
ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪುಸ್ತಕ ಸಂಭ್ರಮ

ಪಂಜಾಬ್‌ನ ಪಟಿಯಾಲದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ದಿವ್ಯಾ ದತ್ತಾ ಅವರು ತಮ್ಮ 'ದಿ ಸ್ಟಾರ್ಸ್ ಇನ್ ಮೈ ಸ್ಕೈ' ಪುಸ್ತಕವನ್ನು ಪ್ರದರ್ಶಿಸಿದರು




‘ಕಾರ್ಮಿಕರಿಗೆ ಉಚಿತ ಬಸ್ ಪಾಸ್: ಶೀಘ್ರ ಆದೇಶ’

ಪ್ರಜಾವಾಣಿ ವಾರ್ತೆ

ಕಾರವಾರ: ರಾಜ್ಯದಾದ್ಯಂತ ಕಾರ್ಮಿಕರು ತಮ್ಮ ವಾಸ್ತವ್ಯದ ಪ್ರದೇಶದಿಂದ ಕೆಲಸದ ಜಾಗಕ್ಕೆ ಪ್ರಯಾಣಿಸಲು ಅನುಕೂಲವಾಗುವಂತೆ ಉಚಿತ ಬಸ್ ಪಾಸ್ ಒದಗಿಸಲು ಕಾರ್ಮಿಕ ಇಲಾಖೆ ಮುಂದಾಗಿದೆ. ಈ ಸಂಬಂಧ ಕೆಲವೇ ದಿನಗಳಲ್ಲಿ ಆದೇಶ ಪ್ರಕಟವಾಗುವ ನಿರೀಕ್ಷೆಯಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಜಾರಿಯಲ್ಲಿರುವ ಈ ಯೋಜನೆಯನ್ನು ಈಗ ರಾಜ್ಯದಾದ್ಯಂತ ವಿಸ್ತರಿಸಲಾಗುತ್ತಿದೆ. ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರ ಪ್ರಯತ್ನದ ಫಲವಾಗಿ ಸಾರಿಗೆ ಇಲಾಖೆ ಜತೆ ಹಲವಾರು ಸುತ್ತಿನ ಮಾತುಕತೆಗಳಾಗಿವೆ. ಅದರ ಫಲವಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿ.ಎಂ.ಟಿ.ಸಿ) ಮೊದಲು ಈ ಯೋಜನೆಯನ್ನು ಜಾರಿಗೊಳಿಸಿತ್ತು.



ಶಿವರಾಮ ಹೆಬ್ಬಾರ್

ಕಾರ್ಮಿಕ ಕಲ್ಯಾಣ ಮಂಡಳಿಯ ನೊಂದಾಯಿತ ಕಾರ್ಮಿಕರು ಯೋಜನೆಯ ಲಾಭ ಪಡೆಯಬಹುದಾಗಿದೆ ಎಂದು ಇಲಾಖೆ ತಿಳಿಸಿದೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸಚಿವ ಹೆಬ್ಬಾರ್, ‘ಬಿ.ಎಂ.ಟಿ.ಸಿ ಮಾದರಿಯಲ್ಲೇ ರಾಜ್ಯದ ಇತರ ಸಾರಿಗೆ ಸಂಸ್ಥೆಗಳಿಂದಲೂ ಕಾರ್ಮಿಕರಿಗೆ ಉಚಿತವಾಗಿ ಬಸ್ ಪಾಸ್‌ಗಳನ್ನು ನೀಡಲಾಗುವುದು. ಈ ಸಂಬಂಧ ನಾಲ್ಕೈದು ದಿನಗಳಲ್ಲಿ ಆದೇಶ ಜಾರಿ ಮಾಡಲಾಗುವುದು’ ಎಂದು ತಿಳಿಸಿದರು.

ಪಾಸ್‌ಗಳ ಸಂಪೂರ್ಣ ವೆಚ್ಚವನ್ನು ಕಾರ್ಮಿಕ ಕಲ್ಯಾಣ ಮಂಡಳಿಯೇ ಭರಿಸುವ ಸಾಧ್ಯತೆಯಿದೆ. ಪಾಸ್ ಪಡೆಯಲು ಇರುವ ಅರ್ಹತೆಗಳು ಮತ್ತು ನಿಯಮಗಳ ಬಗ್ಗೆ ಮಾರ್ಗಸೂಚಿಯು ಇನ್ನಷ್ಟೇ ಪ್ರಕಟವಾಗಬೇಕಿದೆ.

ತ್ವರಿತಗತಿಯಲ್ಲಿ ರಸ್ತೆ ಗುಂಡಿ ಮುಚ್ಚಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿನ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಬಗ್ಗೆ ಶನಿವಾರ ನಡೆದ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ‘ಯಾವುದಾದರೂ ರಸ್ತೆಯಲ್ಲಿ ಗುಂಡಿ ಮುಚ್ಚದೇ ಇರುವುದು ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ನಗರದಲ್ಲಿ ಯಾವ ರಸ್ತೆಗಳನ್ನು ತಕ್ಷಣವೇ ದುರಸ್ತಿಪಡಿಸಬಹುದು ಎಂಬುದನ್ನು ಪಟ್ಟಿ ಮಾಡಿ ಕೂಡಲೇ ಡಾಂಬರೀಕರಣ ಕಾರ್ಯ ಕೈಗೊಳ್ಳಬೇಕು. ಪ್ರತಿ ನಿತ್ಯ ಯಾವ ರಸ್ತೆಗಳಲ್ಲಿ ಕೆಲಸ ಪ್ರಾರಂಭಿಸಲಾಗಿದೆ ಮತ್ತು ಎಷ್ಟು ಕೆಲಸ ಮುಗಿದಿದೆ ಹಾಗೂ ಮರುದಿನ ಯಾವ ರಸ್ತೆಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತದೆ ಎನ್ನುವ ಮಾಹಿತಿ ನೀಡಬೇಕು’ ಎಂದು ಸೂಚಿಸಿದರು.

‘110 ಹಳ್ಳಿಗಳಲ್ಲಿಯೂ ರಸ್ತೆಗಳ ದುರಸ್ತಿ ಕಾರ್ಯವನ್ನೂ ಕೂಡಲೇ ಪ್ರಾರಂಭಿಸಬೇಕು’ ಎಂದು ತಿಳಿಸಿದರು.

ಬೀದಿ ದೀಪಗಳ ನಿರ್ವಹಣೆಗೆ ಸೂಚನೆ: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ವಿಧಾನಸಭಾ ಕ್ಷೇತ್ರವಾರು ಸಮೀಕ್ಷೆ ಮಾಡಿ ಎಲ್‌ಇಡಿ ದೀಪಗಳನ್ನು ಅಳವಡಿಸಬೇಕು. ಹೆಚ್ಚುವರಿಯಾಗಿ ಬೀದಿ ದೀಪಗಳ ಅವಶ್ಯಕತೆಯಿದ್ದರೆ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದರು.

ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರಭಾಕರ್, ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್, ರಸ್ತೆ ಮೂಲ ಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

REQUIRED OFFICE BOYS/ DELIVERY BOYS/ PLUMBERS/ DRIVERS. Candidates Residing in and around Hanumanthhnagar Contact: 99807-99996

A GROWING MSME UNIT INVITES APPLICATION FOR THE ACCOUNTANT POST. JOB DESCRIPTION AS BELOW:
1) MALE / FEMALE :- AGE BETWEEN 25 -35 YEARS
2) QUALIFICATION :- B.COM
3) EXPERIENCE :- MINIMUM 2 TO 3 YEARS
4) SALARY :- RS. 20000.00 + PF (APPROX START OFF). IT WILL BE INCREASED BASED ON PERFORMANCE AND MERITS.
5) OTHER REQUIREMENTS :- KNOWLEDGE OF M.S.OFFICE / TALLY ERP WITH GOOD HAND WRITING.
6) LANGUAGES KNOWN :- ENGLISH & KANNADA.
7) SCOPE OF WORK :- ACCOUNTING , GST / TDS / PF ESI FILING, INVOICE GENERATION, ETC.
8) LOCATION:- BOMMASANDRA, BANGALORE.
SEND YOUR RESUME WITH PHOTOGRAPH AND SALARY EXPECTED WITHIN 7 DAYS TO info@insvi.com

NEED EXPERIENCED Female ACCOUNTANT/ SALES CO-ORDINATOR. Residing around Basavanagudi. Qualification B.Com/ B.Sc. Email: sridhar@vinayaka-Plumbing.com. Contact: 99807-99996

AN ISO 9001 Company requires Senior Accountant with having 5-6 years of experience and accounts assistant. send your resume to info@excelwirecut.com call: 9686198499

REQUIRED
STENOGRAPHERS COMPUTER TYPIST for an Advocate Office. Payment negotiable
V.B. SHIVAKUMAR, Advocate No. 230, II Main Road, Chamarajpet, Bangalore. Mobile: 9886117443 Ph: 080-26678443, 22426644

MANAGER- FINANCE and Accounts for Nightingales Medical Trust at Kasturinagar , Bangalore. Suitable candidate with relevant experience of 10 years and above preferably with NGO's mail resume to hr@nightingaleseldercare.com

Multiple Vacancy

REQUIRED FOR BGAUSS ELECTRIC SCOOTER SHOWROOM
- SALES MANAGER
- EXECUTIVES
- TECHNICIANS

EV MOTO PARK PVT LTD., #70/4, Hosur Main Road, Bommanahalli, Bangalore - 560 068
9972577161
Please send Resume to : bgauss.bommanahalli@gmail.com

Engg/ Production Technical

URGENTLY WANTED experienced QA, QC personnel for Electromagnetic products supplied for Defence and Aerospace. Minimum experience of 10 years. Very competitive remuneration. Vita Technology Pvt. Ltd., Contact: 7899752257 / 9686203434 vitatech@vitatechindia.com

WANTED ELECTRICAL ENGINEERS With Minimum 5 Years Experience Projects at: Belagavi, Salary For DCE 18,000/-, BE 25,000/-. SRS Engineers Pvt. Ltd. #446, 44th Cross, Jayanagar 8th Block, Bangalore-70. Phone: 080-26652223, srsharma_engineers@yahoo.co.in

ENGINEERS FOR Production and Quality- B.E./ Diploma (Mechanical). Experience: 3-5 years. Age below 35 years. STORE ASSISTANT: B.A.,/B.Com. 'VINUMAC' 205A, Peenya 3rd phase, Bangalore-58 Phone: 080-28391959 admin@vinumac.com

MANUFACTURING COMPANY at Peenya is looking for Diploma/ B.E.- MECHANICAL ENGINEERS. ITI-FITTER/ TURNER, Experienced/ Freshers. Send resumes to hrjhpl@gmail.com

REQUIRE: STORE ASSISTANT: Diploma Engineer with knowledge of Computer, CAD & Fabrication for our factory at Hoody Village. SALES ASSISTANT: Diploma in Electrical/ Mechanical Engineering, Experience in E-tendering. STENOGRAPHER: Shorthand with Computer knowledge. ACCOUNTS ASSISTANT: B.Com with Tally knowledge. residing around Seshadripuram, Bangalore-20. Send Resume to sagarsteelblr@yahoo.co.in

WANTED
1. B.E Mech AutoCad & Solidworks Exp
2. SR. Accountant Male
3. ITI Fitters
4. Quality Engineer
Rush resume to alm.hr2005@gmail.com

"WANTED 1) MARKETING/ OFFICE EXECUTIVE with min 3- 5 yrs exp, good communication skills 2) FINANCE EXECUTIVE with min 3- 5 yrs exp at CA (Chartered Accountant) office, for a manufacturing company located at Bommanahalli, near H.S.R.Layout, Bangalore-68. Age limit: within 35 yrs. Salary Rs. 30,000+ ESI, PF and Gratuity. Send CV- to: uppbangalore@gmail.com/ Contact: 9449817703"

Hospital & Medical Jobs

URGENT REQUIREMENT for the post of 1: Dental Assistant 2: Junior dentist (BDS) In a newly opened dental clinic (DENTAL SAGE) in Yelahanka New town (opposite Railway wheel factory). Candidates nearby with a minimum of 1 year Experience will be given preference. Walk-in for interview 11 am to 2 pm or please contact: 7619648784 /9137694984

Part-Time Jobs

PART TIME Job Looking for Retired, VRS, Business, Housewives or Self Employed. Contact: 9945034759

Part Time Jobs INSURANCE & STOCK MARKET SECTOR
No deposit, No target, Work as Freelancer / Part time for Insurance & Share Market.
9019043325

Teachers/ Professors

ENGLISH, SOCIAL Science, PT Teachers Primary/ High School, Bhoruka English School Madanayakanahalli, Tumkur Road. Whatsapp resume. 8088201545

AMC INSTITUTIONS — WE ARE HIRING
Bannerghatta Road, Bengaluru – 560 083
Professors | Associate Professors | Assistant Professors
AMC ENGINEERING COLLEGE: • CSE • CSE Data Science • CSE AI&ML • ISE • English • MBA & MCA
AMC COLLEGE: • Management & Commerce • Computer Applications • Performing Arts • Hotel Management
CAREERS@AMC.AC.IN +91 84311 02749

HARWARD INTERNATIONAL SCHOOL (CBSE) Affiliated No.830335
www.harwardinstitutions.com
Dasanapura, Tumkur Road, Bangalore North - 562162
Walk in interview Regularly @ 10:30 am to 3:00 pm
T.G.T Teachers for SCIENCE & MATHS (B.Sc., B.Ed.,)
Music, Yoga & Karate
HARWARD Pre-University College
Maths & Chemistry NEET Lectures (10 yrs Exp)
ECONOMICS, COMPUTER & COMMERCE (10 Yrs Exp)
*PRO (Marketing Executive)
*Experienced Accountant with Typing skill (Female) Exp in Education institutions
Please send CV to infoharwardints@gmail.com
Ph:9880112833/9986009766

WANTED OFFICE STAFF & NURSING TUTORS
Nursing College requires following staff.
OFFICE STAFF (M.Com / B.Com) & TYPIST (FEMALE) Any Degree with Computer Skill
M.Sc / B.Sc NURSING TUTORS
Experienced / Fresher's residing nearby Nagarabhavi may apply.
Mountcarmelcollegeofnursing@gmail.com
Mccn.admission2020@gmail.com
MCCN-21205

WANTED FOR Young / Fresher Male/Female Hostel Wardens, Librarian, Computer Operator, Residential Office Staff, English, Social Studies English Medium Teachers for School, UG/PG Nursing Faculties & Pharmacy Faculties, Hospital Marketing Executive, Freelancer for Marketing Work, Hospital Assistant Administrator, Night Duty Doctors. Visit with Bio-Data. K.T.G College & Hospital, Hegganhalli Cross, Sunkadakatte, Bangalore -560091 Ph: 9845051023 E-mail: ktgcolleges@gmail.com

URGENTLY REQUIRED: Experience TEACHERS in ALL SUBJECTS for High School, WISDOM INTERNATIONAL SCHOOL, Shantinagar. Walk-in interview immediately. CONTACT: 9663701444, 7676709640

WANTED OFFICE Staffs (Male) with Computer Knowledge To work in Srirampuram, Peenya and Cubbonpet Qualification: SSLC, 2nd PUC. Contact: 9738421001/ 9886683188

Walk-in

SWIGGY FOOD DELIVERY APP
EXCITING JOB OPPORTUNITY IN BANGALORE !
₹ 20,000 to 25,000 Per Month
We want Delivery Executives
Full Time & Part Time
Weekly Payouts
Flexible Working Hours
Walk-in Interview #6, AVS Compound, 80 ft Road, Koramangala, Blr-34 Near Sony Signal, GKB Opticals
Interested? Call: 080-45687736

Marketing & Sales

SALESMAN REQUIRED Anita Synthetics, 1st floor Pancharathna plaza, DS lane, Chickpet Bengaluru. At present we are dealers of Arvind, swastika and Birla century. The candidate must posses at least 2 years of experience in outdoor sales of suiting and shirting fabrics.Preferred languages- Hindi, English and Kannada Interested candidates can contact on: 9611208688/ 080- 42108513.

AGSAR PAINTS PVT LTD., WANTED 'Sales Executives' Posting For Bangalore, Mangalore, Goa. E-Mail: bangalore@agsar.net Contact: 9535910010

General

WANTED ADVISORS/ AGENTS for a leading Co-operative Society in Bangalore.. attractive commission. Contact :9901983850/ 9845597993

Wanted

WANTED CNC Machine Operator with Programming Experience for an SSI-Unit in HAL Industrial area. Contact: 25236522/ 9980543385

WANTED ITI Holders - Ladies/ Gents for Assembly Work & Delivery Boys for a Private Limited Company in Prakash Nagar: 9448481947/ 9448376584 magraa@magraa.in

DH DECCAN HERALD — BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
- LOG INTO WWW.DHCLASSIFIEDS.COM
- CHOOSE THE CATEGORY
- CHOOSE THE AD DATES
- COMPOSE THE MATTER
- CONFIRM AND PAY

TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

MORE Classifieds IN SUPPLEMENT

ವೈವಾಹಿಕ

ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸುಮ ಗೋಪಾಲಕೃಷ್ಣ ದೂರವಾಣಿ: 9886908152

BUSINESS

Business Offers

Finance

APERIO- LOAN 15CRORE TO 150CR @3-6%P.A Against Viable Projects, LAP, Business, Sickunits & Takeover,Mail:aperiofunds@gmail.com Ct 7200418844

ALL LOANS: Property Mortgage, Business, Secured Unsecured, Home Loan, Take over. 6360693097, 6360787210

WANTED BUSINESS PARTNER with 5 Lakhs to 10 Lakhs Investment, Good Returns. Contact: 9606701007/ 8892501007

WANTED BUSINESS Partner For Hotel Investment 2 to 3 Cr Good Returns Contact: 9606701007/ 8892501007

PUBLIC NOTICE

PUBLIC NOTICE

My client intends to purchase the Schedule Property from its Owners Mr. Prabhu Kumar, Subba Reddy, Krishna Reddy, Nagaraj Reddy. The Owners represent that they are the absolute owners of the Schedule Property, having marketable, right, title and interest therein and that apart from them there are no other person/s having any right or claim over the Schedule Property. The Owners further represent that they have not mortgaged, created any lien or encumbered the Schedule Property or part thereof in any manner and that there are no winding up proceedings initiated or pending against them. They have not entered into any Agreement of Sale / Development Agreement / Memorandum of Understanding / Arrangement etc., with any person/s other than my client with regard to the Schedule Property. Any person/s having objection/s or claims shall with documentary evidence lodge their objection / claims within 10 (ten) days from the date of this notice with the undersigned, failing which, my client shall proceed with the above mentioned transaction.

SCHEDULE PROPERTY

All that piece and parcel of converted land bearing Survey Nos. 144/1, 137,144/2,146/1,146/2,146/3,147/1,147/2,145/3,145/1,148/1,150/1,150/2,156/2,184/1,606 part, measuring 6 acres 27 guntas situated at Sarjapura Village, Sarjapura Hobli, Anekal Taluk, Bengaluru Urban District.

Bangalore Date: 10.12.2021

V. Shiva Kumar & Umesh S. Advocate, VSK Law Chambers No. 186, 1st Floor, 1st Cross Wilson Garden, Hosur Road, Bengaluru-27 Mob: 9448516541 / 8861178827

PUBLIC NOTICE

Public are hereby informed that my client has negotiated to purchase the immovable property described in the Schedule hereunder from its owner **Mr. Alam Parveez,** Son of Mr.M.B.Ghani, residing at No.541, Akmal Ghar, Opp. Bethel Church, Pension Mohalla, Chikkamagaluru – 577 101, Karnataka.

Any person/s having or claiming any manner of right, title, lien and interest in respect of the Schedule property may intimate the same in writing to the undersigned with documentary evidence in support thereof within ten days from the date of publication of this notice, failing which the claims of all such person/s shall be deemed to have been waived or abandoned and my client will proceed with the conveyance as if no valid claims are subsisting against the Schedule property.

SCHEDULE

All that piece and parcel of land being a vacant residential site bearing **Municipal Corporation No.27, PID No.87-46-27,** (Earlier bearing Site No.7, carved out of land bearing Survey No.118/1of Lingarajapuram), situated at **Anantharam Layout,** Lingarajapuram, Corporation New Ward No.49, Old Ward No.87, Bangalore and bounded on the: **EAST BY** : Site No.6; **WEST BY** : Site No.8, belonging to Mr.V.K. Ramanathan; **NORTH BY** : Land belonging to Mr. Joseph ; **SOUTH BY** : Road ; and measuring on the : **EAST : 50 feet; WEST : 52 feet; NORTH : 40 feet 6 inches; SOUTH: 40 feet; Totally measuring in all 2052.75 Square feet;**

NISSAR AHMED, Advocate, No.10, Millers Road, Benson Town, Bangalore : 46 Dated:10.12.2021

KARNATAKA REDDYJANA SANGHA — Vemana Institute of Technology
No.1, Mahayogi Vemana Road, 3rd Block, Koramangala, Bangalore - 34. Ph:080-25529874 / 75. Fax:25534943 website: www.vemanait.edu.in / www.reddyjanasangha.org

TENDER NOTICE
Sealed Quotations are invited from reputed firms for the supply of
I. IT Hardwares & Softwares:
1) HP Desktop Computers – 260 Nos
2) RAM's – 85 Nos
3) Sophos Firewall – 1 No.
4) eScan Antivirus – 100 user license
5) 65" Mi Smart TVs – 16 Nos
6) HP LaserJet Printer – 1 No.
7) Altium Software – 10 user license
II. UPS & Batteries
UPS - 1 + 20 Batteries
III. Furniture
Computer Tables - 85 & Chairs - 155
For more details visit: www.vemanait.edu.in or www.reddyjanasangha.org
Quotations should be addressed to "The General Secretary" within 10 days from the date of this Advertisement

MATRIMONIAL

Brides Wanted

Hindu

50 YEAR Entrepreneur Groom, having Own Factory and Business, Looking Entrepreneur or Business Bride, Caste No Bar, Widow/ Divorced. 6366197165.

Grooms Wanted

Christian

SUITABLE MATCH sought from never married Christian groom for Bengali Girl (32 years 5'2" Post Graduate) residing in Bengaluru. Contact 9874303692

Matrimonial Bureaus

USHODHAYA MATRIMONIAL (Estd: 1998)
FOR HIGH CLASS FIRST/ SECOND/ MARRIAGE PROPOSALS, INDIA/ ABROAD, in all age groups
9611919477
9886884291

AUTOMOTIVE

Four Wheelers Selling

Benz

MERCEDES- BENZ GLA 200-2016 Orient Brown KA-03 Well maintained SALE 18 lakhs (Negotiable). Owner leaving foreign- +91 7975072170

Others

SALE, PETROL/DIESEL Tankar 12kl, Ashok Lyland, Model-2016 November, done- 48000 kms, clear documents, excellent condition. Vehicle at Nelamangala. Contact:9986594205

ACCIDENT DAMAGED- EICHER PRO2114XPH HSD/ 2020 KA07 B-1948 is For Sale with RC last date: 18.12.2021. Call: 9844048926.

Mahindra

CAR FOR SALE: 2021 December Mahindra Thar 600 Km Top end, Manual. Contact: 9980966133

OTHERS

Jewellery

'JUST LIKE GOLD' Bangles/ Chains Natural Gem stones, Precious/ semi precious. Lifetime Gaurantee, Pure silver rings/ Sets for Ladies studded with gems. 'Gemex Geo', Koramangala. 55 Years of Experience. gemex@gmail.com; abid.mohiyuddin@icloud.com Ph : 9845499425

Medical

HOME NURSES Available/ Wanted HOME NURSE and CARE GIVER (Home/ Hospital/ Patientcare 24x7)- 7022399993, 6366883838.

PERSONAL

Change of Name

I, SHOBHAREENA, residing at BENGALURU-18 have changed my name as SHOBHA REENA D, vide affidavit dated 10/12/2021 before Notary P.C.Ramaiah, Bengaluru

I, SHANTHI (Service Document), wife of No. JC-640767M Ex-Subedar & Hony Subedar Major A. Sivaraji, residing at #99/2, 10th main, 100 feet road, Dodda Banaswadi, Bangalore- 560043, have changed my name from SHANTHI (Service Document) to SHANTHI .K., vide affidavit dated 17.09.2021, sworn before Notary B. Seshagiri, Bengaluru.

WE, SHIVASHANKAR D.B. and Vathsala V.H., R/a Tumkur District, Kunigal Taluk, Yadiyur Hobli, Nagasandra Post, Devarakannasandra Village, have changed our minor son's name from SATHVIK .S. GOWDA to ARYA SHANKAR, vide affidavit dated 10.12.2021 before Notary B.V. Nagabhushana, Bengaluru

WE, SHIVASHANKAR D.B. and Vathsala V.H., R/a Tumkur District, Kunigal Taluk, Yadiyur Hobli, Nagasandra Post, Devarakannasandra Village, have changed our minor daughter's name from HEMASHREE .S. to HANSHIKA SHANKAR, vide affidavit dated 10.12.2021 before Notary B.V. Nagabhushana, Bengaluru

I, SHOBHA. R. W/o. Late Krishna. K.L. R/a #14, 1st Main Road, Vinayaka Layout, Magadi Main Road, Bangalore- 560079 Have Changed My Son Name From SADANANDA GOWDA. K. to ADHVIK. K. (DOB: 20.07.2010) vide Affidavit Dated: 10.12.2021 Before Notary H.R. Karunakara, Bengaluru-10.

I, SHOBHA. R. W/o. Late Krishna. K.L. R/a #14, 1st Main Road, Vinayaka Layout, Magadi Main Road, Bangalore- 560079 Have Changed My Daughter Name From ANAGHA. K. to ISHA. K. (DOB: 05.01.2012) vide Affidavit Dated: 10.12.2021 Before Notary H.R. Karunakara, Bengaluru-10.


I, BHAVANARUSHI LAXMI DEVI W/o. B. Venkatesulu R/a #1857, 1st Floor, 6th Cross, 20th Main, J.P.Nagar 2nd Phase, Bangalore- 560078 Have Changed My Name to BHAVANARUSHI LAKSHMIDEVI Vide Affidavit Dated: 10.12.2021 Before Notary T.R. Raghavendra Rao, Bangalore.

DEE PARAKASH SHARMA F/o 14862513P- Nk/MT- PAPPU KUMAR SHARMA, R/a Nagwa, Arvindnagar, Saran, Bihar, changed name from DEE PARAKASH SHARMA to DEEP PRAKASH SHARMA notary KV Mani, Bangalore.

WEEKEND CORNER



ಶ್ರವಣ ಸಮಸ್ಯೆಯೇ?
ಹಬ್ಬದ ಕೊಡುಗೆ
25% ವರೆಗೆ ಕಡಿತ
ಎಲ್ಲಾ ಶ್ರವಣ ಸಾಧನಗಳ ಮೇಲೆ
ಕೂಡಲೇ ಬುಕ್ ಮಾಡಿ
ಅಗೋಚರ ಶ್ರವಣ ಸಾಧನಗಳು ಲಭ್ಯ
ಹಿರಿಯ ನಾಗರಿಕರಿಗಾಗಿ ಮನೆ ಭೇಟಿ
T & C Apply
ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ.
ನಿಮ್ಮ ಸಮೀಪದ ಕೇಂದ್ರ ತಿಳಿಯಲು ಸಂಪರ್ಕಿಸಿ
ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್ as
99456 11100
www.hearingc.com
OREVA RS CHAIN OF HEARING CLINICS
HHCC HEARING HEALTH CARE CLINIC



ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆ
ಕೋಟೆ, ಬೆಂಗಳೂರು – 560 002.
Ph : 080-26701027, Email ID : slncharities@gmail.com

ವಿದ್ಯಾರ್ಥಿ ವೇತನಕ್ಕಾಗಿ ಆಹ್ವಾನ

ಜನೋಪಕಾರಿ ಶ್ರೀ. ದೊಡ್ಡಣ್ಣ ಶೆಟ್ಟಿ ಅವರ ಎಸ್.ಎಲ್.ಎನ್. ಚಾರಿಟೀಸ್ 2020–21ನೇ ಶೈಕ್ಷಣಿಕ ವರ್ಷದಲ್ಲಿ ಮೊದಲ ದರ್ಜೆ ಮತ್ತು ಅಧಿಕ ಅಂಕಗಳಲ್ಲಿ ಉತ್ತೀರ್ಣರಾದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ, ಅಂತಿಮ ವರ್ಷದ ಪದವಿ, ಸ್ನಾತಕೋತ್ತರ ಪದವಿ ಮತ್ತು ಮೇಲ್ಪಟ್ಟ ಪರೀಕ್ಷೆಯಲ್ಲಿ ತೇರ್ಗಡೆಯಾದ ಜ್ಯೋತಿನಗರದ ವೈಶ್ಯ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್ http://slncharities.org ನಿಗದಿತ ಅರ್ಜಿಯನ್ನು ಡೌನ್‌ಲೋಡ್ ಮಾಡಿ ಅದನ್ನು ದೃಢೀಕರಿಸಿದ ಅರ್ಜಿ ಮತ್ತು ಅರ್ಹತಾ ಪರೀಕ್ಷೆಯ ಅಂಕಪಟ್ಟಿಯೊಂದಿಗೆ 15–01–2022 ರೊಳಗೆ ಪೋಸ್ಟ್ ಅಥವಾ ವೈಯಕ್ತಿಕವಾಗಿ ಸಲ್ಲಿಸಲು ವಿನಂತಿಸಲಾಗಿದೆ.

ಸಹಿ/–
ಅಧ್ಯಕ್ಷರು ಮತ್ತು ಸದಸ್ಯರು

ಇದಕ್ಕಿಂತ ಮಿಗಿಲಾದುದು ಯಾವುದೂ ಇಲ್ಲ
ಕೈಲಾಸ ಗಿರಿಯ ಮೌನಕ್ಕೆ ಸಮವಾದ ಅತ್ಯುನ್ನತವಾದ ಮೌನವನ್ನು (ಚಿವಂ)
ಬೆಂಗಳೂರಿನಲ್ಲಿರುವ ಮೌನಮಂಟಪದಲ್ಲಿ ಅನುಭವಿಸಬಹುದು. ಮೌನದ ಶಕ್ತಿಯು ಉದ್ವೇಗ, ಒತ್ತಡ, ಭಯ, ಆತಂಕ ಮತ್ತು ನಿದ್ರಾಹೀನತೆಯನ್ನು ತೆಗೆದುಹಾಕುತ್ತದೆ. ಆಧ್ಯಾತ್ಮಿಕವಾಗಿ ಉತ್ಕೃಷ್ಟ ಅನುಭವವನ್ನು ಪಡೆಯಲು ಮೌನಮಂಟಪಕ್ಕೆ ಭೇಟಿ ನೀಡಿ.
ಎಲ್ಲರಿಗೂ ಸ್ವಾಗತ!
ಎಸ್.ಎಸ್.ಬಿ. ಸೋಶಿಯೋ ಸ್ಪಿರಿಚ್ಯುಯಲ್ ಫೌಂಡೇಶನ್
‘ಮೌನಮಂಟಪ’, ನಂ.28/3, ನಾಗದಾಸನಹಳ್ಳಿ, ಯಲಹಂಕ ಹೋಬಳಿ, ಬೆಂಗಳೂರು–560 064
86604 55686 / 90359 19050
ssbssf.com

BHAGWAN ADINATH HOSPITAL SERVICES
No. 182Y, 2nd & 3rd Floor, 3rd Block, 12th Main, Bashyam Circle, Rajajinagar, (Above ICICI Bank), Bengaluru-560010
COMMON GYNAECOLOGICAL PROBLEMS
FREE HEALTH CHECKUP CAMP
Sunday, 12th December 2021
AT HOSPITAL PREMISES



For Appointment Call / Whatsapp: 09362244777
Call: 080-42111313 / 414 / 515

SERVICES

Gardening & Landscape

AGRICULTURE: HORTICULTURE consultant, organic vegetables,drip , North Indian workers available Contact Krishna 9440053113

ಭಾನುವಾರ, ಡಿಸೆಂಬರ್ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 343 | ಪುಟ 20
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ತೋರಣಗಲ್‌ನ ವಿಶ್ವದರ್ಜೆಯ ಕ್ರೀಡಾ ತರಬೇತಿ ಕೇಂದ್ರ ಯುವ ಹೃದಯಗಳ ಪದಕ ಸಾಧನೆಯ ವೇದಿಕೆಯಾಗಿದೆ



‘ಹಾಸ್ಯ ಒಪ್ಪುವ ಔದಾರ್ಯವೇ ಇಲ್ಲ!’ 4
ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆ ಅನುಷ್ಠಾನದ ಹಿನ್ನಡೆ: ಸಂಸತ್ ಸಮಿತಿ ವರದಿ
‘ಬದಲಾಗದ ಬ್ರಿಟಿಷ್ ಕಾಲದ ವ್ಯವಸ್ಥೆ’ 4
‘ರಾಜ್ಯಗಳ ವೆಚ್ಚದ ಮೇಲೆ ಕೇಂದ್ರಕ್ಕೆ ನಿಗಾ ಇಲ್ಲ’ 7

ಲಂಚಾವತಾರ ವಿಸ್ತಾರ

ಟೆಂಡರ್: ಶೇ 40ರಷ್ಟು ಲಂಚ • ಬಿಎಸ್‌ವೈ ಅವಧಿಯಲ್ಲೇ ಪ್ರಧಾನಿಗೆ ದೂರು

• ವೈ.ಗ. ಜಗದೀಶ್

ಬೆಂಗಳೂರು: ಮನುಕುಲವನ್ನೇ ದಂಗು ಬಡಿಸಿದ್ದ ಕೊರೊನಾ ವೈರಾಣು ರೂಪಾಂತರಗೊಳ್ಳುತ್ತಾ ವಿಶ್ವವ್ಯವಸ್ಥೆಯನ್ನೇ ಮಲಗಿಸಿದಂತೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಟೆಂಡರ್‌ನಲ್ಲಿ ನಡೆಯುವ ಶೇಕಡ 40ರಷ್ಟು ಲಂಚದ ಸ್ವರೂಪವೂ ಬದಲಾವಣೆಗೊಳ್ಳುತ್ತಾ ಇಡೀ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ ಎಂಬ ಆರೋಪ ಕೇಳಿಬಂದಿದೆ.

ದಶಕದ ಹಿಂದೆ, ಕಮಿಷನ್ ಪಡೆದು ಟೆಂಡರ್ ಕೊಡಿಸಲು ಮಧ್ಯವರ್ತಿಗಳು ಇರುತ್ತಿದ್ದರು. ಸಚಿವರು–ಶಾಸಕರ ದೂರದ ಸಂಬಂಧಿಕರು ಅಥವಾ ಆಪ್ತರೂ ಈ ವ್ಯವಹಾರ ನಡೆಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಸಚಿವರು, ಶಾಸಕರೇ ನೇರವಾಗಿ ‘ಪರ್ಸೆಂಟೇಜ್’ಗೆ ಬೇಡಿಕೆ ಮಂಡಿಸಿ ಟೆಂಡರ್ ಕೊಡಿಸುವ ಮಧ್ಯವರ್ತಿಯ ಪಾತ್ರ ನಿರ್ವಹಿಸುತ್ತಿದ್ದಾರೆ. ಹೀಗಾಗಿ, ಶೇ 10–20ರಷ್ಟಿದ್ದ ಲಂಚದ ಪ್ರಮಾಣ ಶೇ 40ಕ್ಕೆ ಏರಿತು. ಈಗ ಅದು ಬೇರೆ ಬೇರೆ ರೂಪವನ್ನು ಪಡೆದುಕೊಂಡಿದೆ ಎಂಬ ಚರ್ಚೆ ಅಧಿಕಾರಿಗಳ ವಲಯದಲ್ಲಿದೆ.


2018ರ ವಿಧಾನಸಭೆ ಚುನಾವಣೆ ವೇಳೆ ಕರ್ನಾಟಕದಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಿ ‘ಕಾಂಗ್ರೆಸ್ ಮುಕ್ತ ಭಾರತ’ದ ಕರೆ ಕೊಟ್ಟಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಿದ್ದರಾಮಯ್ಯನವರ ಸರ್ಕಾರವನ್ನು ‘10 ಪರ್ಸೆಂಟ್ ಸರ್ಕಾರ, ಸೀದಾರೂಪಯ್ಯಾ’ ಎಂದು ಹಂಗಿಸಿದ್ದರು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಗುತ್ತಿಗೆದಾರರು ಪ್ರಧಾನಿಗೇ ಬರೆದ ಪತ್ರ, ರಾಜ್ಯದಲ್ಲಿನ ಭ್ರಷ್ಟಾಚಾರದ ವಿಕಾರರೂಪವನ್ನು ಬಯಲಿಗೆ ತಂದಿದೆ.

ಒಳನೋಟ
ಗುತ್ತಿಗೆಗೆ ಕಮಿಷನ್
ಪ್ರತಿಕ್ರಿಯಿಸಿ: 9606038256
feedback@prajavani.co.in


‘ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಬಂದ ಮೇಲಷ್ಟೇ ಭ್ರಷ್ಟಾಚಾರ ಶುರುವಾಯಿತು ಎಂದೇನಲ್ಲ. ಅದಕ್ಕೂ ಹಿಂದಿನ ಕಾಂಗ್ರೆಸ್, ಜೆಡಿಎಸ್ ಸರ್ಕಾರಗಳ ಅವಧಿಯಲ್ಲಿ ಈ ಪ್ರಮಾಣ ಶೇ 15ರಿಂದ ಶೇ 20ರವರೆಗೆ ಇತ್ತು. ಬಿಲ್ ಪಾವತಿಯ ವೇಳೆ ಹಲವು ಹಂತಗಳಲ್ಲಷ್ಟೇ ನೀಡಬೇಕಿತ್ತು. ಈಗ ನಿರ್ದಿಷ್ಟ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಅನುದಾನದ ಹಂಚಿಕೆಗೆ, ಕಾರ್ಯಾದೇಶ ನೀಡುವ ಮೊದಲೇ ಲಂಚ ಕೊಡಬೇಕಾಗಿದೆ’ ಎಂದು ಹೆಸರು ಹೇಳಲು ಬಯಸದ ಗುತ್ತಿಗೆದಾರರೊಬ್ಬರು ತಮ್ಮ ಪಾಡು ವಿವರಿಸುತ್ತಾರೆ.

ರೂಪಾಂತರ: ಶೇ 40ರಷ್ಟು ಲಂಚದ ಜತೆಗೆ ಹೊಸ ತಲೆಮಾರಿನ ರಾಜಕಾರಣಿಗಳು ಕಮಿಷನ್ ಪದ್ಧತಿಯಲ್ಲಿಯೇ ಕೆಲವು ಬದಲಾವಣೆಗಳನ್ನೂ ತಂದಿರುವುದು ಹೊಸ ವಿದ್ಯಮಾನ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6



ತಪ್ಪಾಗಿದ್ದರೆ ತನಿಖಾ ಸಂಸ್ಥೆಯಿಂದ ಸಮಗ್ರ ತನಿಖೆ



ಟೆಂಡರ್‌ಗಳಲ್ಲಿ ‘ಕಮಿಷನ್’ ಪಡೆಯಲಾಗುತ್ತಿದೆ ಎಂದು ಆಪಾದಿಸಿ ಗುತ್ತಿಗೆದಾರರ ಸಂಘವು ಪ್ರಧಾನಿಯವರಿಗೆ ಬರೆದಿರುವ ಪತ್ರ ಆಧಾರ ರಹಿತ. ರಾಜಕೀಯ ವ್ಯಕ್ತಿಗಳಿಂದ ಪ್ರೇರೇಪಿತವಾಗಿರುವ ಪತ್ರ. ಹಾಗಿದ್ದರೂ ಎಲ್ಲ ಟೆಂಡರ್‌ಗಳ ಬಗ್ಗೆ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದೇನೆ. ಸಣ್ಣ ಲೋಪ ಕಂಡುಬಂದರೂ ಸಕ್ಷಮ ತನಿಖಾ ಸಂಸ್ಥೆಗಳಿಂದ ಸಮಗ್ರ ತನಿಖೆ ನಡೆಸಲಾಗುವುದು.

ನನ್ನ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಮೊದಲೇ ಗುತ್ತಿಗೆದಾರರ ಸಂಘ ಪತ್ರ ಬರೆದಿದೆ. ಭ್ರಷ್ಟಾಚಾರದ ಬಗ್ಗೆ ಯಾವುದೇ ಇಲಾಖೆಯ ಮುಖ್ಯಸ್ಥರಿಗೂ ಗುತ್ತಿಗೆದಾರರು ಈ ಹಿಂದೆ ದೂರು ಕೊಟ್ಟಿಲ್ಲ. ಭ್ರಷ್ಟಾಚಾರ ನಿಗ್ರಹ ದಳ ಅಥವಾ ಲೋಕಾಯುಕ್ತರಿಗೆ ದೂರು ದಾಖಲಿಸುವ ಅವಕಾಶ ಗುತ್ತಿಗೆದಾರರಿಗೆ ಇತ್ತು. ಈ ವ್ಯವಸ್ಥೆಯನ್ನು ಬಳಸಿಕೊಳ್ಳದೇ ಪ್ರಧಾನಿಯವರಿಗೆ ಪತ್ರ ಬರೆದಿದೆ. ಇದರ ಹಿಂದೆ ಸದುದ್ದೇಶವಿಲ್ಲ. ಆದರೂ 2013 ರಿಂದ ನನ್ನ ಸರ್ಕಾರದವರೆಗಿನ ಅವಧಿಯಲ್ಲಿ ಬರುವ ಎಲ್ಲ ಟೆಂಡರ್‌ಗಳ ಬಗ್ಗೆ ಪ್ರಾಥಮಿಕ ತನಿಖೆ ನಡೆಸಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವುದಕ್ಕಾಗಿ ₹50 ಕೋಟಿಗಿಂತಲೂ ಹೆಚ್ಚು ಮೊತ್ತದ ಟೆಂಡರ್‌ಗಳನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿ ಪರಿಶೀಲಿಸಿ ಅನುಮೋದನೆ ನೀಡಲಿದೆ. ಯೋಜನೆಗಳ ಅಂದಾಜು ಪತ್ರ ಮತ್ತು ಟೆಂಡರ್ ನಿಯಮಾವಳಿಗಳು ಕೆಟಿಪಿಪಿ ಕಾಯ್ದೆಗೆ ಅನುಗುಣವಾಗಿ ಇರುವ ಬಗ್ಗೆ ಸಮಿತಿ ಪರಿಶೀಲಿಸಲಿದೆ. ಇದು ರಾಜ್ಯದಲ್ಲೇ ಐತಿಹಾಸಿಕ ಮತ್ತು ದಿಟ್ಟ ಹೆಜ್ಜೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಅಧಿವೇಶನಕ್ಕೆ ಪ್ರತಿಭಟನೆಗಳ ಬಿಸಿ

ಬೆಳಗಾವಿ: ಇದೇ 13ರಿಂದ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ವಿಧಾನಮಂಡಲ ಚಳಿಗಾಲ ಅಧಿವೇಶನಕ್ಕೆ ಪ್ರತಿಭಟನೆಗಳ ಬಿಸಿ ತಟ್ಟಲಿದೆ. 4

ಸೇನಾನಿಗಳಿಗೆ ಅಂತಿಮ ನಮನ

ನವದೆಹಲಿ: ತಮಿಳುನಾಡಿನಲ್ಲಿ ಸೇನಾ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ, ಸೇನೆಯ ಆರು ಮಂದಿಯ ಗುರುತನ್ನು ಶನಿವಾರ ಪತ್ತೆಹಚ್ಚಲಾಗಿದ್ದು, ಪಾರ್ಥಿವ ಶರೀರಗಳನ್ನು ತಮ್ಮ ಊರುಗಳಿಗೆ ಒಯ್ದು ಸಂಬಂಧಿಕರು ಅಂತ್ಯಸಂಸ್ಕಾರ ನೆರವೇರಿಸಿದರು. 5

‘ಕೋವಿಡ್ ದೃಢ ಪ್ರಮಾಣ ಶೇ 10ಕ್ಕಿಂತ ಹೆಚ್ಚಿದ್ದರೆ ರಾತ್ರಿ ಕರ್ಫ್ಯೂ’

ನವದೆಹಲಿ: ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 10ಕ್ಕಿಂತ ಹೆಚ್ಚು ಇರುವ ಪ್ರದೇಶಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಿ ಎಂದು ರಾಜ್ಯಗಳಿಗೆ ಕೇಂದ್ರವು ಸೂಚಿಸಿದೆ. 5

ಹಾಕಿ: ಪಂಜಾಬ್ ಪೊಲೀಸ್‌ಗೆ ಪ್ರಶಸ್ತಿ

ಬೆಂಗಳೂರು: ಇಂಡೊ ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ವಿರುದ್ಧ ಭರ್ಜರಿ ಜಯ ಗಳಿಸಿದ ಪಂಜಾಬ್ ಪೊಲೀಸ್ ತಂಡ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತನ್ನದಾಗಿಸಿಕೊಂಡಿತು. 7

ದೆಹಲಿಯ ಸಿಂಘು, ಟಿಕ್ರಿ, ಗಾಜಿಪುರ ಗಡಿ ತೊರೆದ ರೈತರು

ತವರೂರಿಗೆ ರೈತರ ‘ವಿಜಯಯಾತ್ರೆ’

ನವದೆಹಲಿ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಒತ್ತಾಯಿಸಿ ಒಂದು ವರ್ಷದಿಂದ ದೆಹಲಿಯಲ್ಲಿ ಬೀಡುಬಿಟ್ಟಿದ್ದ ರೈತರು ಶನಿವಾರ ಬೆಳಿಗ್ಗೆಯಿಂದ ತಮ್ಮ ಊರುಗಳಿಗೆ ಮರಳಲು ಆರಂಭಿಸಿದ್ದಾರೆ. ರಾಜಧಾನಿಯ ಗಡಿಗಳಲ್ಲಿ ಯಶಸ್ವಿಯಾಗಿ ಕೈಗೊಂಡಿದ್ದ ಸತ್ಯಾಗ್ರಹ ಹಾಗೂ ಈ ಮೂಲಕ ದೊರೆತ ಗೆಲುವಿನ ಸಂಭ್ರಮವನ್ನು ಹೊತ್ತು ಮರಳುತ್ತಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಕೈಬಿಟ್ಟಿದೆ. ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ ನೀಡಲು ಸಮಿತಿಯೊಂದರನ್ನು ರಚಿಸುವುದಾಗಿ ಕೇಂದ್ರವು ಲಿಖಿತ ಭರವಸೆ ನೀಡಿದೆ. ಪ್ರತಿಭಟನೆ ಯಶಸ್ಸು ಕಂಡಿದ್ದು, ದೆಹಲಿಯ ಸಿಂಘು, ಟಿಕ್ರಿ ಹಾಗೂ ಗಾಜಿಪುರ ಗಡಿಯ ಹೆದ್ದಾರಿಗಳಲ್ಲಿ ಹಾಕಿದ್ದ ದಿಗ್ಬಂಧನವನ್ನು ರೈತರು ತೆರವುಗೊಳಿಸಿದ್ದಾರೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶದ ಕಡೆಗೆ ಹೊರಟ ರೈತರು, ಈ ಸಂಭ್ರಮವನ್ನು ‘ವಿಜಯ ಯಾತ್ರೆ’ ಮೂಲಕ ಆಚರಿಸುತ್ತಿದ್ದಾರೆ.

ಒಂದು ವರ್ಷದಿಂದ ಆಶ್ರಯ ನೀಡಿದ್ದ ಟೆಂಟ್‌ಗಳನ್ನು ತೆರವುಗೊಳಿಸಿ, ಸಾಮಗ್ರಿಗಳನ್ನು ಟ್ರ್ಯಾಕ್ಟರ್‌ಗಳಿಗೆ ತುಂಬುತ್ತಿದ್ದ ಚಿತ್ರಣ ಸಿಂಘು, ಗಾಜಿಪುರ ಗಡಿಗಳಲ್ಲಿ ಕಂಡುಬಂದಿತು. ಹೂಗಳಿಂದ ಸಿಂಗಾರಗೊಂಡ ಟ್ರ್ಯಾಕ್ಟರ್‌ಗಳು ಮೆರವಣಿಗೆ ಹೊರಟವು. ವಿಜಯದ ಹಾಡುಗಳು ಮೊಳಗಿದವು. ಬಣ್ಣಬಣ್ಣದ ಟರ್ಬನ್ ಧರಿಸಿದ್ದ ಹಿರಿಯರು ಯಾತ್ರೆಯ ಮಾರ್ಗದಲ್ಲಿ ಯುವಕರ ಜೊತೆ ನೃತ್ಯಕ್ಕೆ ಹೆಜ್ಜೆ ಹಾಕಿದರು. ಶನಿವಾರ ಸಂಜೆ ಹೊತ್ತಿಗೆ ಮುಕ್ಕಾಲು ಭಾಗದಷ್ಟು ಜನರು ಸ್ಥಳವನ್ನು ತೆರವುಗೊಳಿಸಿದ್ದು, ಡಿ. 15ರ ಹೊತ್ತಿಗೆ ಸಂಪೂರ್ಣ ತೆರವುಗೊಳ್ಳುವ ನಿರೀಕ್ಷೆಯಿದೆ.

ಸಾವಿರಾರು ರೈತರು ದೆಹಲಿಯ ಮೂರು ಗಡಿಗಳಲ್ಲಿ ಕಳೆದ ವರ್ಷದ ನ.26ರಿಂದ ಪ್ರತಿಭಟನೆ ನಡೆಸುತ್ತಿದ್ದರು. 2021ರ ನ.29ರಂದು ಕೃಷಿ ಕಾಯ್ದೆ ರದ್ದುಗೊಳಿಸುವ ಮಸೂದೆಯನ್ನು ಸಂಸತ್ತು ಅಂಗೀಕರಿಸಿತು. ಬೆಂಬಲ ಬೆಲೆಗೆ ಕಾನೂನಿನ ಖಾತರಿ ನೀಡುವ ಬಗ್ಗೆ ಲಿಖಿತ ಭರವಸೆ ನೀಡಿದ್ದರಿಂದ ಪ್ರತಿಭಟನೆಗೆ ಅಂತ್ಯ ಹಾಡಲು ರೈತರ ಸಂಘಟನೆಗಳ ಒಕ್ಕೂಟವಾದ ‘ಸಂಯುಕ್ತ ಕಿಸಾನ್ ಮೋರ್ಚಾ’ ಗುರುವಾರ ನಿರ್ಧರಿಸಿತ್ತು.

ಇನ್ನೊಂದು ಸುದ್ದಿ 5

ಬಿಟ್ ಕಾಯಿನ್: ಶ್ರೀಕೃಷ್ಣ ಪರಾರಿ?

ಬೆಂಗಳೂರು: ಬಿಟ್ ಕಾಯಿನ್ ಹಗರಣದ ಪ್ರಮುಖ ಸೂತ್ರಧಾರ, ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ರಾಜ್ಯದಿಂದ ಪರಾರಿಯಾಗಿರುವ ಮಾಹಿತಿ ಪೊಲೀಸ್ ಮೂಲಗಳಿಂದ ಲಭ್ಯವಾಗಿದೆ.

ಜೀವನಬಿಮಾನಗರ ಠಾಣೆಯಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣದ ಆರೋಪಿಯೂ ಆಗಿರುವ ಶ್ರೀಕೃಷ್ಣ, ನ್ಯಾಯಾಲಯದ ಜಾಮೀನು ಮೇಲೆ ಮೂರು ವಾರಗಳ ಹಿಂದೆಯಷ್ಟೇ ಜೈಲಿನಿಂದ ಬಿಡುಗಡೆ ಆಗಿದ್ದ.

3ನೇ ಪುಟ ನೋಡಿ


ಚಿನಕುರಳಿ

ಪ್ರಕಾಶ್ ಶೆಟ್ಟಿ



15 ಸಾವಿರ ಶಿಕ್ಷಕರ ನೇಮಕಾತಿ ಶೀಘ್ರ

ಪ್ರಜಾವಾಣಿ ವಾರ್ತೆ



ಬಿ.ಸಿ. ನಾಗೇಶ್

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು 15 ಸಾವಿರ ಶಿಕ್ಷಕರ ನೇಮಕಕ್ಕೆ ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಬಗ್ಗೆ ಶನಿವಾರ ಟ್ವೀಟ್ ಮಾಡಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ‘ನೇಮಕಾತಿಗೆ ಶೀಘ್ರ ಅಧಿಸೂಚನೆ ಹೊರಡಿಸಲಾಗುವುದು’ ಎಂದಿದ್ದಾರೆ.

‘ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ (6ರಿಂದ 8ನೇ ತರಗತಿ) 10 ಸಾವಿರ ಹುದ್ದೆ ಮತ್ತು ಕಲ್ಯಾಣ ಕರ್ನಾಟಕ ವೃಂದದ 5 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು’ ಎಂದಿದ್ದಾರೆ.

‘ಶಿಕ್ಷಕರ ಕೊರತೆ ನೀಗಿಸಲು ಈಗಾಗಲೇ 23 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಹೆಚ್ಚುವರಿಯಾಗಿ ಇನ್ನೂ 4 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲೂ ನಿರ್ಧರಿಸಲಾಗಿದೆ’ ಎಂದೂ ಅವರು ತಿಳಿಸಿದ್ದಾರೆ.

ಅಂಗವಿಕಲರಿಗೆ ಉದ್ಯೋಗ ಮೇಳ 700ಕ್ಕೂ ಹೆಚ್ಚು ಮಂದಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗವಿಕಲರ ಸಬಲೀಕರಣಕ್ಕೆ ಮುಂದಾಗಿರುವ ಸಮರ್ಥನಂ ಸಂಸ್ಥೆಗೆ ಸರ್ಕಾರದಿಂದ ಸಿಗಬೇಕಿರುವ ಅನುದಾನ ಬಿಡುಗಡೆಗೊಳಿಸಲಾಗುವುದು. ಸಂಸ್ಥೆ ಭರಿಸಿರುವ ವೆಚ್ಚವನ್ನೂ ಭರಿಸಲಾಗುವುದು' ಎಂದು ಕೌಶಲಾಭಿವೃದ್ಧಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಭರವಸೆ ನೀಡಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆಯು ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಅಂಗವಿಕಲರಿಗಾಗಿ ಉದ್ಯೋಗ ಮೇಳ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಂಸ್ಥೆಯು ಅಂಗವಿಕಲ ಉದ್ಯೋಗಾಕಾಂಕ್ಷಿಗಳಿಗೆ ನೆರವಾಗುತ್ತಿದೆ. 2030ರ ವೇಳೆಗೆ 10 ಲಕ್ಷ ಅಂಗವಿಕಲರ ಜೀವನ ಸುಧಾರಿಸುವ ಗುರಿಯನ್ನು ಸಂಸ್ಥೆಯು ಹೊಂದಿರುವುದು ಶ್ಲಾಘನೀಯ' ಎಂದರು.

ಸಂಸ್ಥೆಯ ಸಂಸ್ಥಾಪಕ ಮಹಾಂತೇಶ್ ಜಿ.ಕಿವಡಸಣ್ಣವರ್, 'ಕೋವಿಡ್ ಪರಿಸ್ಥಿತಿಯ ನಂತರ ಮೊದಲ ಬಾರಿ ಉದ್ಯೋಗ ಮೇಳವನ್ನು ಸಂಸ್ಥೆಯು ಆಯೋಜಿಸಿದೆ. ಬರುವ ದಿನಗಳಲ್ಲಿ ಪ್ರಮುಖ ನಗರಗಳಲ್ಲಿ ಉದ್ಯೋಗ ಮೇಳ ಆಯೋಜಿಸುವ ಉದ್ದೇಶವಿದೆ' ಎಂದು ತಿಳಿಸಿದರು.

ಉದ್ಯೋಗ ಮೇಳದಲ್ಲಿ 700ಕ್ಕೂ ಹೆಚ್ಚು ಅಂಗವಿಕಲ ಉದ್ಯೋಗಾಂಕ್ಷಿಗಳು ಹಾಗೂ 40ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದವು.

ಅಂಗವಿಕಲ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ನಿರ್ದೇಶಕ ಮುನಿರಾಜು, ಬೆಂಗಳೂರು ಜಿಲ್ಲಾ ಕೌಶಲ ಅಭಿವೃದ್ಧಿ ಅಧಿಕಾರಿ ಡಿ.ಎಲ್.ಕೃಷ್ಣಮೂರ್ತಿ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಜತೆಗೆ ಚರ್ಚಿಸಿ ಶೀಘ್ರವೇ ತೀರ್ಮಾನ –ಸಚಿವ ಅಶ್ವತ್ಥನಾರಾಯಣ

ಬಿಡಿಎ ಸೇವೆಗಳು 'ಜನಸೇವಕ' ವ್ಯಾಪ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ 79 ಅಗತ್ಯ ಸೇವೆಗಳನ್ನು ಜನರ ಮನೆ ಬಾಗಿಲಿಗೇ ತಲುಪಿಸುವ 'ಜನಸೇವಕ' ಯೋಜನೆಯ ವ್ಯಾಪ್ತಿಗೆ ಸದ್ಯದಲ್ಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸೇವೆಗಳನ್ನೂ ಸೇರಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

'ಜನಸೇವಕ' ಯೋಜನೆ ಕುರಿತ ಕಿರುಹೊತ್ತಗೆ ಬಿಡುಗಡೆ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

ಬಿಡಿಎ ಸೇವೆಗಳನ್ನೂ 'ಜನಸೇವಕ' ವ್ಯಾಪ್ತಿಗೆ ತರಬೇಕೆಂದು ಸ್ಥಳೀಯರು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ಈ ಸಂಬಂಧ ಮುಖ್ಯಮಂತ್ರಿ ಅವರ ಜತೆಗೂ ಚರ್ಚಿಸುತ್ತೇನೆ' ಎಂದರು.

'ಜನರು ತಮಗೆ ಅಗತ್ಯವಿರುವ ಸೇವೆಗೆ ಕೋರಿಕೆ ಸಲ್ಲಿಸಿದರೆ 'ಜನಸೇವಕ' ಸ್ವಯಂಸೇವಕರು ಮನೆ ಬಾಗಿಲಿಗೇ ಬಂದು, ಅಗತ್ಯ ದಾಖಲೆ ಪಡೆದು ನಿಗದಿತ ಅವಧಿಯೊಳಗೆ ಸೇವೆಗಳನ್ನು ತಲುಪಿಸುವರು. ಜನರು ಅನಗತ್ಯವಾಗಿ ಕಚೇರಿಗೆ ಅಲೆಯುವುದು,ಮಧ್ಯವರ್ತಿಗಳಿಂದ ವಂಚನೆಗೆ ಒಳಗಾಗುವುದು ಮತ್ತು ಲಂಚ ಕೊಡುವುದು ತಪ್ಪುತ್ತದೆ. ಈ ಸೇವೆಗಳಿಗೆ ಜನರು ನಿಗದಿತ ಶುಲ್ಕ ಮತ್ತು ಜನಸೇವಕ ಶುಲ್ಕವನ್ನು ನಿಗದಿತ ಖಾತೆಗಳಿಗೆ ಡಿಜಿಟಲ್ ಪಾವತಿ ಮಾಡಿದರೆ ಸಾಕು' ಎಂದು ಅವರು ವಿವರಿಸಿದರು.

ಮಲ್ಲೇಶ್ವರ ಕ್ಷೇತ್ರದ ಮನೆಮನೆಗೂ ಶಾಸಕರ ಕಚೇರಿಯಿಂದ 'ಜನಸೇವಕ ಸಮಗ್ರ ಮಾಹಿತಿ ಕೈಪಿಡಿ' ತಲುಪಿಸುವ ಕಾರ್ಯಕ್ರಮಕ್ಕೂ ಚಾಲನೆ ನೀಡಲಾಯಿತು. ಸಂಗೊಳ್ಳಿ ರಾಯಣ್ಣ ಉದ್ಯಾನದಲ್ಲಿ 'ಜನಸೇವಕ' ಕಾರ್ಯಕ್ರಮದ 79 ಸೇವೆಗಳಿಗೂ ಪ್ರತ್ಯೇಕ ಬೂತ್ ತೆರೆಯಲಾಗಿತ್ತು.

ಕಾರ್ಯಕ್ರಮದಲ್ಲಿ ಇ-ಆಡಳಿತ ಯೋಜನಾಧಿಕಾರಿ ಬಿ.ಎನ್.ವರಪ್ರಸಾದ್ ರೆಡ್ಡಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು 'ಜನಸೇವಕ' ಯೋಜನೆಯ ಕಿರುಹೊತ್ತಗೆಯನ್ನು ಮಹಿಳೆಯೊಬ್ಬರಿಗೆ ವಿತರಿಸಿದರು

ಮುಖ್ಯಾಂಶಗಳು
- ಬಿಡಿಎ ಸೇವೆಗಳನ್ನು ಸೇರಿಸಲು ಜನರ ಆಗ್ರಹ
- ಮನೆಬಾಗಿಲಿಗೆ ಸೇವೆ ತಲುಪಿಸುವ ಸ್ವಯಂ ಸೇವಕರು
- ಜನಸೇವಕ ಸಮಗ್ರಹ ಮಾಹಿತಿ ಕೈಬಿಪಿ ವಿತರಣೆಗೆ ಚಾಲನೆ


'ಹೈ –ಲೈಫ್': ವಿಶಿಷ್ಟ ವಸ್ತ್ರ ವಿನ್ಯಾಸಗಳ ಪ್ರದರ್ಶನ

ಬೆಂಗಳೂರು: ನಗರದ ಹೋಟೆಲ್ ಲಲಿತ್ ಅಶೋಕದಲ್ಲಿ ವಿಶಿಷ್ಟ ವಸ್ತ್ರ ವಿನ್ಯಾಸಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು 'ಹೈ –ಲೈಫ್' ಆಯೋಜಿಸಿದೆ.

10ರಂದು ಆರಂಭವಾಗಿರುವ ಪ್ರದರ್ಶನವು ಭಾನುವಾರ (ಡಿ.12) ಮುಗಿಯಲಿದೆ. ಫ್ಯಾಷನ್ ಲೋಕದ ವಿಶಿಷ್ಟ ಸಂಗ್ರಹಗಳು, ವೈವಿಧ್ಯಮಯ ಆಭರಣ, ಬ್ಯಾಗ್ ಹಾಗೂ ಗೃಹಬಳಕೆ ವಸ್ತುಗಳು ಇಲ್ಲಿ ಲಭ್ಯ. ದೇಶದ ಪ್ರಸಿದ್ಧ ವಸ್ತ್ರ ವಿನ್ಯಾಸಕಾರರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ. ' ಬೆಳಿಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಮಾರಾಟ ಇರುತ್ತದೆ' ಎಂದು ತಿಳಿಸಿದೆ.

ನಗರದಲ್ಲಿ ಇಂದು

ಬೆಂಗಳೂರು ಗಾಯನ ಸಮಾಜದ ಸಂಗೀತ ಸಮ್ಮೇಳನದ ಸಮಾರೋಪ: ಸಮ್ಮೇಳನಾಧ್ಯಕ್ಷ ಎಂ.ಸೂರ್ಯಪ್ರಸಾದ್ ಅವರಿಗೆ 'ಸಂಗೀತ ಕಲಾರತ್ನ' ಬಿರುದು ಹಾಗೂ 'ವಿ.ಟಿ.ಶ್ರೀನಿವಾಸನ್ ಪ್ರಶಸ್ತಿ ಪ್ರದಾನ-ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿಗಳು-ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ಆಯೋಜನೆ ಮತ್ತು ಸ್ಥಳ-ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10.30



ರಾಮಾನುಜ ಜೀಯರ್ ಸ್ವಾಮೀಜಿ

ನೇತ್ರ ಉಚಿತ ತಪಾಸಣೆ ಶಿಬಿರ: ಆಯೋಜನೆ-ಸ್ನೇಹ ಸಮ್ಮಿಲನ ಫೌಂಡೇಷನ್, ನಾರಾಯಣ ನೇತ್ರಾಲಯ, ಸ್ಥಳ-ಕಲಾ ಸಂಗಮ, ಸೇಂಟ್ ಡಾಮಿನಿಕ್ ಶಾಲೆ ಹತ್ತಿರ, ಅತ್ತಿಬೆಲೆ, ಬೆಳಿಗ್ಗೆ 8.30ರಿಂದ ಮಧ್ಯಾಹ್ನ 1

ವಿಶ್ವ ಅಂಗವಿಕಲರ ದಿನಾಚರಣೆ: ಉದ್ಘಾಟನೆ-ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಅತಿಥಿಗಳು-ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್, ಜಿಯಾ ಉಲ್ಲಾ, ಎಸ್.ಎನ್.ಅರುಣ್ ಕುಮಾರ್, ಯು.ಡಿ.ನರಸಿಂಹಯ್ಯ, ಅಧ್ಯಕ್ಷತೆ-ಎನ್. ವೀರಕ್ಯಾತಯ್ಯ, ಆಯೋಜನೆ-ರಾಜ್ಯ ಅಂಧ ನೌಕರರ ಸಹಕಾರ ಸಂಘ ನಿಯಮಿತ, ಸ್ಥಳ-ಜೆ.ಪಿ.ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 9.30

ಕನ್ನಡ ನುಡಿ ಸಮ್ಮೇಳನ: ಬೆಳಿಗ್ಗೆ 10ಕ್ಕೆ ಉದ್ಘಾಟನೆ-ಮಲ್ಲೇಪುರಂ ಜಿ.ವೆಂಕಟೇಶ್, ಅಧ್ಯಕ್ಷತೆ-ವೂಡೇ ಪಿ.ಕೃಷ್ಣ, ಪ್ರಶಸ್ತಿ ಪ್ರದಾನ-ಶೈಲಜಾ ವಿ.ಸೋಮಣ್ಣ, ಸಮ್ಮೇಳನದ ಅಧ್ಯಕ್ಷ-ಪಾಲನೇತ್ರ, ಅತಿಥಿಗಳು-ಎಂ.ತಿಮ್ಮಯ್ಯ, ಟಿ.ಸತೀಶ್ ಜವರೇಗೌಡ, ಮಧ್ಯಾಹ್ನ 12.30ಕ್ಕೆ ಕವಿಗೋಷ್ಠಿ, 3.15ಕ್ಕೆ ಸಂವಾದ-ಕಾಂತರಾಜಪುರ ಸುರೇಶ್, ಉಮೇಶ್ ಚಂದ್ರ, ಎಲ್.ಲೋಕೇಶ್, ಮಂಜುನಾಥ್ ಪಾಂಡವಪುರ, ಸಂಜೆ 4ಕ್ಕೆ ಸಮಾರೋಪ:ಅಧ್ಯಕ್ಷತೆ-ಲೀಲಾ ದೇವಿ ಆರ್.ಪ್ರಸಾದ್, ಭಾಷಣ-ಸಂತೋಷ್ ಹಾನಗಲ್, ಪ್ರಶಸ್ತಿ ಪ್ರದಾನ-ಸಿ.ಕೆ.ರಾಮೇಗೌಡ, ಅತಿಥಿ-ಪಿ.ಮಲ್ಲಿಕಾರ್ಜುನಪ್ಪ, ಆಯೋಜನೆ-ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ-ನಯನ ಸಭಾಂಗಣ, ಕನ್ನಡ ಭವನ

'ಮಿದುಳು ಲೋಕ ಪ್ರತಿಮೆ' ಅನಾವರಣ: ಪ್ರೊ.ಜಿ.ರಾಮಕೃಷ್ಣ, ಬಿ.ಟಿ.ಲಲಿತಾ ನಾಯಕ್, ಸಿ.ಆರ್.ಚಂದ್ರಶೇಖರ್, ಎ.ಎಸ್.ನಟರಾಜ್, ಬೈರಮಂಗಲ ರಾಮೇಗೌಡ, ಅಬ್ದುಲ್ ರೆಹಮಾನ್ ಪಾಷ, ಗೀತಾ ಚಂದ್ರಹಾಸ, ಆಯೋಜನೆ ಮತ್ತು ಸ್ಥಳ-ಮಿದುಳತ್ವ ಸಂಸ್ಥೆ, ಗಿರಿನಗರ 3ನೇ ಹಂತ, ಬೆಳಿಗ್ಗೆ 10

ಸುಧೀರ ಸಾಗರ ಅವರ 'ಆ ಹದಿಮೂರು ದಿನಗಳು' ಪುಸ್ತಕ ಬಿಡುಗಡೆ: ಪ್ರಕಾಶ್ ಬೆಳವಾಡಿ, ಅತಿಥಿಗಳು-ಸ್ಯಾಪರ್ ರಾಮಚಂದ್ರ ಜಿ.ಹೆಗಡೆ, ರ.ವಿ. ಜಹಾಗೀರದಾರ, ಎಸ್.ಎನ್ .ಸೇತುರಾಮ್, ರೋಹಿತ್ ಚಕ್ರತೀರ್ಥ, ನವೀನ್ ಸಾಗರ್, ಸ್ಥಳ-ವ್ಯೋಮ ಆರ್ಟ್ ಸ್ಪೇಸ್ ಆ್ಯಂಡ್ ಸ್ಟುಡಿಯೊ, ಲೀನಸ್ ಆಸ್ಪತ್ರೆ ಕಟ್ಟಡ, ಜೆ.ಪಿ.ನಗರ 3ನೇ ಹಂತ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಡಿ.ವಿ.ಅನನ್ಯಾ, ಅತಿಥಿಗಳು-ವೈಜಯಂತಿ ಕಾಶಿ, ಎಚ್.ಪಿ.ಸುರೇಶ್, ಆರ್.ಕನಕಲತಾ, ಆಯೋಜನೆ-ನೃತ್ಯಗಂಗಾ ಪ್ರದರ್ಶಕ ಕಲಾ ಕೇಂದ್ರ, ಸ್ಥಳ-ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 4.30



ಅಭಿನಂದನಾ ಸಮಾರಂಭ: ಉದ್ಘಾಟನೆ-ಬಿ.ಎಸ್.ಸೋಮಶೇಖರ್, ಅಧ್ಯಕ್ಷತೆ-ಬಿ.ಕೆ.ವೆಂಕಟೇಶ್, ಅತಿಥಿಗಳು-ಎನ್.ಆನಂದ್, ಎಸ್.ಜಯದೇವ್, ಜಿ.ಎ.ಮಂಜುನಾಥ್, ಅಚ್ಚಪ್ಪ ನಾಗರಾಜು, ಆಯೋಜನೆ-ತೊಗಟವೀರ ಕ್ಷತ್ರಿಯ ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿಗಳ ಸಂಘ, ಸ್ಥಳ-ತೊಗಟವೀರ ಕ್ಷತ್ರಿಯ ಸಮುದಾಯ ಭವನ, ಸಂಪಂಗಿರಾಮನಗರ, ಬೆಳಿಗ್ಗೆ 10

'ಬಿಕ್ಕಟ್ಟಿನಲ್ಲಿ ಪ್ರಜಾಪ್ರಭುತ್ವ-ಮುಂದಿನ ಹಾದಿ' ಕುರಿತು ವಿಚಾರ ಸಂಕಿರಣ: ಅತಿಥಿ-ಪತ್ರಕರ್ತ ಆಕಾರ್ ಪಟೇಲ್, ಜಮಾತ್ ಎ ಇಸ್ಲಾಮಿ ಹಿಂದ್ ರಾಷ್ಟ್ರೀಯ ಅಧ್ಯಕ್ಷ ಸೈಯದ್ ಸಾದತ್ ಉಲ್ಲಾ ಹುಸೈನಿ, ಅಧ್ಯಕ್ಷತೆ-ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಆಯೋಜನೆ-ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಎಮಿಟಿ ಕರ್ನಾಟಕ, ಸ್ಥಳ-ಕೆಎಎಸ್ ಅಧಿಕಾರಿಗಳ ಸಂಘದ ಸಭಾಂಗಣ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 10.30

100 ದಿನಗಳ ಜ್ಞಾನ ಯಜ್ಞ: ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಉಪನ್ಯಾಸ ತರಗತಿ, ಆಯೋಜನೆ-ಕಬೀರ್ ಟ್ರಸ್ಟ್, ಸ್ಥಳ-ಕಬೀರ್ ಆಶ್ರಮ, ಜೆ.ಸಿ.ನಗರ, ಬೆಳಿಗ್ಗೆ 6

13, 14ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ಇದೇ 13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಡಿ.13: ಮಾಳಗಾಳ, ರಾಮಕೃಷ್ಣಪ್ಪ ಬಡಾವಣೆ, ಗಾಳಿ ಆಂಜನೇಯ ದೇವಸ್ಥಾನ, ಪಂತರಪಾಳ್ಯ, ಮೈಸೂರು ರಸ್ತೆ, ನಾಯಂಡಹಳ್ಳಿ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಬಿಎಚ್‌ಇಎಲ್ ಬಡಾವಣೆ, ಕೃಷ್ಣ ಗಾರ್ಡನ್, ವಿದ್ಯಾಪೀಠ ರಸ್ತೆ, ಬಿಜಿಎಸ್ ಆಸ್ಪತ್ರೆ ರಸ್ತೆ, ಗಾಂಧಿ ನಗರ, ಉಲ್ಲಾಳ ನಗರ, ಮಾರುತಿ ನಗರ, ಅಮ್ಮ ಆಶ್ರಮ ರಸ್ತೆ.

ಡಿ.14: ದೊಮ್ಮಲೂರು 1 ಮತ್ತು 7ನೇ ಅಡ್ಡ ರಸ್ತೆ, ಕಮಾಂಡೊ ಆಸ್ಪತ್ರೆ, ವಿಕ್ಟೋರಿಯಾ ಬಡಾವಣೆ, ಪಾಮ್ ಗ್ರೋವ್ ರಸ್ತೆ, ಆಸ್ಟಿನ್ ಟೌನ್, ಸೊಣ್ಣೇನಹಳ್ಳಿ, ವಿವೇಕನಗರ, ಮಾಯಾಬಜಾರ್, ಅಯ್ಯಪ್ಪ ದೇವಸ್ಥಾನ ಬ್ಲಾಕ್, ರುದ್ರಪ್ಪ ಗಾರ್ಡನ್, ಜೈರಾಜ್ ನಗರ, ಇನ್ಫೆಂಟ್ ಜೀಸಸ್ ಚರ್ಚ್, ಗ್ರೇಪ್ ಗಾರ್ಡನ್, ನೀಲಸಂದ್ರ, ರಿಚ್‌ಮಂಡ್ ಟೌನ್, ಮಿಷನ್ ರಸ್ತೆ, ಎಸ್.ಆರ್. ನಗರ, ಲಕ್ಷ್ಮಿರೋಡ್, ನಂಜಪ್ಪ ವೃತ್ತ, ಲ್ಯಾಂಗ್‌ಫೋರ್ಡ್, ಶಾಂತಿನಗರ.

ಗೋವಾ: 'ಕನ್ನಡ ಜಾಗೃತಿ ಸಾಂಸ್ಕೃತಿಕ ಉತ್ಸವ' ಇಂದು

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ನಿಮಿತ್ತ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಗೋವಾದಲ್ಲಿ ಡಿ.12ರಂದು 'ಗಡಿ ರಾಜ್ಯದ ಕನ್ನಡ ಕನ್ನಡ ಜಾಗೃತಿ ಸಾಂಸ್ಕೃತಿಕ ಉತ್ಸವ -2021'ವನ್ನು ಏರ್ಪಡಿಸಿದೆ.

ಮೈಸೂರು ಪ್ರಾಂತ್ಯದ ಕಡೆಯಿಂದ ಬರುತ್ತಿದ್ದವರ ಮೇಲೆ ನಿಗಾ ಇಡಲು ಬಳಕೆಯಾಗುತ್ತಿದ್ದ ಕಾವಲು ಚೌಕಿ

150 ವರ್ಷ ಪುರಾತನ 'ಬೆಂಗಳೂರು ಗೇಟ್'

• ಸಂತೋಷ ಜಿಗಳಿಕೊಪ್ಪ



ಚಾಮರಾಜಪೇಟೆಯಲ್ಲಿರುವ 'ಬೆಂಗಳೂರು ಗೇಟ್' ಚೌಕಿ ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌ಜಿ.

ಬೆಂಗಳೂರು: ಬ್ರಿಟಿಷರ ಆಡಳಿತವಿದ್ದ ಕಾಲವದು. ರಾಜರ ಆಳ್ವಿಕೆ ಇದ್ದ ಮೈಸೂರು ಪ್ರಾಂತ್ಯದ ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದವರ ಮೇಲೆ ನಿಗಾ ಇಡಲು ಚಾಮರಾಜಪೇಟೆಯ ಗಡಿಯಲ್ಲಿ 'ಬೆಂಗಳೂರು ಗೇಟ್' ಚೌಕಿ ನಿರ್ಮಿಸಲಾಗಿತ್ತು. 150 ವರ್ಷಗಳಿಗೂ ಹಳೆಯದಾದ ಈ ಗೇಟ್ ಅನ್ನು ಇತ್ತೀಚೆಗಷ್ಟೇ ಪುನರುಜ್ಜೀವನಗೊಳಿಸಲಾಗಿದೆ.

ಬೆಂಗಳೂರಿನಲ್ಲಿ ಆಡಳಿತ ನಡೆಸುತ್ತಿದ್ದ ಬ್ರಿಟಿಷರು, ನಗರದ ಗಡಿ ಪ್ರದೇಶಗಳಲ್ಲಿ ಕಾವಲು ಕಾಯುತ್ತಿದ್ದರು. ಸುತ್ತಮುತ್ತಲ ನಗರಗಳಿಂದ ಬರುವವರ ಮೇಲೆ ನಿಗಾ ವಹಿಸುತ್ತಿದ್ದರು. ಅದರಲ್ಲೂ ಮೈಸೂರು ಪ್ರದೇಶದಿಂದ ಬರುವವರ ಮೇಲೆ ಹೆಚ್ಚಿನ ನಿಗಾ ಇಡಲಾಗುತ್ತಿತ್ತು.

ಆರಂಭದಲ್ಲಿ ಬ್ರಿಟಿಷ್ ಸೈನಿಕರು ಕಾವಲು ಕಾಯಲು ಆರಂಭದಲ್ಲಿ ಬಂಡೆ, ಮರಗಳನ್ನು ಆಶ್ರಯಿಸುತ್ತಿದ್ದರು. ನಂತರ ತಾತ್ಕಾಲಿಕ ಚಪ್ಪರ ನಿರ್ಮಿಸಲಾಯಿತು. 18ನೇ ಶತಮಾನದಲ್ಲಿ ಮೊದಲ ಬಾರಿಗೆ ಸುಸಜ್ಜಿತ ಚೌಕಿ 'ಬೆಂಗಳೂರು ಗೇಟ್' ಅನ್ನು ಚಾಮರಾಜಪೇಟೆ ಗಡಿಯಲ್ಲಿ ನಿರ್ಮಿಸಲಾಗಿತ್ತು.

ಸದ್ಯ, ಬೆಂಗಳೂರು ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಆವರಣದಲ್ಲಿರುವ ಈ ಚೌಕಿ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಯಾರ ಗಮನಕ್ಕೂ ಬಾರದೇ ಪಾಳು ಬಿದ್ದಿತ್ತು. ಬೆಂಗಳೂರು ಕಮಿಷನರ್ ಆಗಿದ್ದ ಭಾಸ್ಕರ್ ರಾವ್, ಸಿಎಆರ್ ಮೈದಾನಕ್ಕೆ 2020ರಲ್ಲಿ ಭೇಟಿ ನೀಡಿದ್ದಾಗ ಪಾಳು ಬಿದ್ದಿದ್ದ ಚೌಕಿಯನ್ನು ಗಮನಿಸಿದ್ದರು.

ಬೆಂಗಳೂರು ನಮ್ಮ ಹೆಮ್ಮೆ...

ಪಾರಂಪರಿಕ ಚೌಕಿಯ ಸಂರಕ್ಷಣೆಗಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಯಾನ ಆರಂಭಿಸಿದ್ದ ಭಾಸ್ಕರ್ ರಾವ್, 'ಚಾಮರಾಜಪೇಟೆಯ ಸಿರ್ಸಿ ವೃತ್ತಕ್ಕೆ ಹೊಂದಿಕೊಂಡಿರುವ ಸಿಎಆರ್ ಮೈದಾನದಲ್ಲಿ 'ಬೆಂಗಳೂರು ಗೇಟ್' ಪಾರಂಪರಿಕ ಚೌಕಿ ಇದೆ. ವಾಸ್ತುಶಿಲ್ಪದ ಮಹತ್ವವನ್ನು ಪರಿಗಣಿಸಿ, ಇದನ್ನು ಸಂರಕ್ಷಿಸಲು ಜನರೆಲ್ಲರೂ ಶಿಫಾರಸು ಮಾಡಬೇಕು' ಎಂದು ಕೋರಿದ್ದರು. ಆಗ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ಕೆ.ರತ್ನಪ್ರಭಾ ಹಾಗೂ ಹಲವರು ಕೈ ಜೋಡಿಸಿದ್ದರು.

ಚೌಕಿಗೆ ಹೊಸ ರೂಪ: ಸಾಮಾಜಿಕ ತಾಣಗಳಲ್ಲಿ ನಡೆದ ಅಭಿಯಾನ ಯಶಸ್ವಿಯಾಗಿತ್ತು. ಬೆಂಗಳೂರು ಗೇಟ್ ಚೌಕಿ ಸಂರಕ್ಷಣೆಗೆ ಸರ್ಕಾರ ಒಪ್ಪಿಗೆ ನೀಡಿತ್ತು. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸಿಎಆರ್ ಪೊಲೀಸ್ ಅಧಿಕಾರಿಗಳು, ಒಂದು ವರ್ಷದಲ್ಲಿ ಚೌಕಿಯನ್ನು ಪುನರುಜ್ಜೀವನಗೊಳಿಸಿದರು.

ಮೈಸೂರು ರಸ್ತೆಗೆ ಹೊಂದಿಕೊಂಡಿರುವ ಚೌಕಿಗೆ ಸುಣ್ಣ–ಬಣ್ಣ ಬಳಿಯಲಾಗಿದೆ. ಚೌಕಿಯ ಇತಿಹಾಸ ಅರಿತಿರುವ ಹಲವರು, ಅದರ ಬಳಿಗೆ ಹೋಗಿ ಫೋಟೊಗಳನ್ನು ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ.

ಗ್ರಂಥಾಲಯಕ್ಕೆ ವ್ಯವಸ್ಥೆ: 'ಪಾರಂಪರಿಕ ಚೌಕಿಯನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸಲಾಗಿದೆ. ಚೌಕಿಯ ಕೊಠಡಿಗಳನ್ನು ಗ್ರಂಥಾಲಯವಾಗಿ ಮಾರ್ಪಡಿಸಲು ತೀರ್ಮಾನಿಸಲಾಗಿದೆ. ಅದಕ್ಕಾಗಿ ಸಿದ್ಧತೆ ನಡೆದಿದೆ' ಎಂದು ಸಿಎಆರ್ ಡಿಸಿಪಿ ಮೊಹಮ್ಮದ್ ಸುಚೇತಾ ಎಂ.ಎಸ್ ತಿಳಿಸಿದರು.

'ವೀಕ್ಷಣೆಗೆ ಅವಕಾಶ ನೀಡಲು ಒತ್ತಾಯ'

'ಪೊಲೀಸ್ ಮೈದಾನಕ್ಕೆ ಹೊಂದಿಕೊಂಡು 'ಬೆಂಗಳೂರು ಗೇಟ್' ಚೌಕಿ ಇದೆ. ಇದರ ವೀಕ್ಷಣೆಗಾಗಿ ಸಿಎಆರ್ ಪೊಲೀಸರ ಅನುಮತಿ ಪಡೆಯಬೇಕು. ಎಲ್ಲ ಸಮಯದಲ್ಲಿ ಮುಕ್ತವಾಗಿ ಹೋಗಿ ಬರಲು ಆಗುವುದಿಲ್ಲ' ಎಂದು ಸಾರ್ವಜನಿಕರು ಬೇಸರ ತೋಡಿಕೊಂಡಿದ್ದಾರೆ.

'150 ವರ್ಷಗಳ ಇತಿಹಾಸವಿರುವ ಚೌಕಿ ವೀಕ್ಷಣೆಗೆ ಮುಕ್ತ ಅವಕಾಶ ನೀಡಬೇಕು. ಚೌಕಿ ಇತಿಹಾಸ ತಿಳಿಸುವ ಫಲಕಗಳನ್ನು ಪ್ರದರ್ಶಿಸಬೇಕು' ಎಂದೂ ಕೋರಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಪಿ ಮೊಹಮ್ಮದ್ ಸುಚೇತಾ ಎಂ.ಎಸ್., 'ಸದ್ಯಕ್ಕೆ ಸಾರ್ವಜನಿಕರ ವೀಕ್ಷಣೆಗೆ ಸಂಪೂರ್ಣವಾಗಿ ಅವಕಾಶ ನೀಡಿಲ್ಲ. ಮುಂದಿನ ದಿನಗಳಲ್ಲಿ ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಬಿಟ್ ಕಾಯಿನ್; ಶ್ರೀಕೃಷ್ಣ ಪರಾರಿ?

ಒಂದನೇ ಪುಟದಿಂದ

ಷರತ್ತಿನ ಪ್ರಕಾರ ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗಬೇಕಿತ್ತು. ಆದರೆ ಆತ ಹಾಜರಾಗದೇ ರಾಜ್ಯವನ್ನೇ ತೊರೆದಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.



ಶ್ರೀಕೃಷ್ಣ

'ಮಾದಕ ವಸ್ತು ಸೇವಿಸಿ ಹೋಟೆಲೊಂದರ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಶ್ರೀಕೃಷ್ಣ ಹಾಗೂ ಉದ್ಯಮಿಯೊಬ್ಬರ ಮಗ ವಿಷ್ಣು ಭಟ್‌ನನ್ನು ನವೆಂಬರ್ 5ರಂದು ಬಂಧಿಸಲಾಗಿತ್ತು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಶ್ರೀಕೃಷ್ಣ, ಜಾಮೀನು ಪಡೆದು ಹೊರಬಂದ ನಂತರ ತಲೆಮರೆಸಿಕೊಂಡಿದ್ದಾನೆ. ಜಾಮೀನು ಷರತ್ತಿನಂತೆ ತನಿಖಾಧಿಕಾರಿ ವಿಚಾರಣೆಗೂ ಆತ ಬಂದಿಲ್ಲ. ಹೀಗಾಗಿ, ಶ್ರೀಕೃಷ್ಣನ ಜಾಮೀನು ರದ್ದುಪಡಿಸುವಂತೆ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸಿದ್ದೇವೆ' ' ಎಂದು ಮೂಲಗಳು ಹೇಳಿವೆ.

ತಂದೆ ಭೇಟಿ ಬಳಿಕ ಸುಳಿವಿಲ್ಲ: 'ಜೈಲಿನಿಂದ ಬಿಡುಗಡೆಯಾಗಿದ್ದ ಶ್ರೀಕೃಷ್ಣ, ತಂದೆ ರಮೇಶ್ ಅವರನ್ನು ಮೊದಲಿಗೆ ಭೇಟಿಯಾಗಿದ್ದ. ಅವರ ಜೊತೆ ಹೆಬ್ಬಾಳದ ಆಸ್ಪತ್ರೆಯೊಂದಕ್ಕೆ ತೆರಳಿದ್ದ. ಮರುದಿನದಿಂದಲೇ ಆತನ ಸುಳಿವಿಲ್ಲ' ಎಂದು ಮೂಲಗಳು ಮಾಹಿತಿ ನೀಡಿವೆ.

'ಬಿಟ್ ಕಾಯಿನ್ ಹಗರಣದ ಸಕಲ ಮಾಹಿತಿ ಇರುವ ಶ್ರೀಕೃಷ್ಣನ ಜೀವಕ್ಕೆ ಅಪಾಯವಿರುವುದಾಗಿ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಇತರರು ದೂರಿದ್ದರು. ಇದೇ ಕಾರಣಕ್ಕೆ ಆತನ ಹಾಗೂ ಕುಟುಂಬಕ್ಕೆ ಭದ್ರತೆ ನೀಡಲು ಇನ್‌ಸ್ಪೆಕ್ಟರ್ ನೇತೃತ್ವದ ತಂಡವನ್ನು ನಿಯೋಜಿಸಲಾಗಿತ್ತು. ಇನ್‌ಸ್ಪೆಕ್ಟರ್ ಅವರ ಸಂಪರ್ಕಕ್ಕೂ ಶ್ರೀಕೃಷ್ಣ ಸಿಕ್ಕಿಲ್ಲ' ಎಂದು ಹೇಳಿವೆ.

ಉತ್ತರ ಭಾರತದಲ್ಲಿ ಸುತ್ತಾಟ ?

'ಬೆಂಗಳೂರಿನ ಹೋಟೆಲೊಂದರಲ್ಲಿ ಎರಡು ದಿನ ಉಳಿದಿದ್ದ ಶ್ರೀಕೃಷ್ಣ, ಪರಿಚಯಸ್ಥರ ಸಹಾಯದಿಂದ ದೆಹಲಿಗೆ ಹೋಗಿರುವ ಮಾಹಿತಿ ಲಭ್ಯವಾಗಿತ್ತು. ಕೆಲದಿನ ದೆಹಲಿಯಲ್ಲಿದ್ದ ಆತ, ಅಲ್ಲಿಂದ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಸುತ್ತಾಡುತ್ತಿರುವ ಮಾಹಿತಿ ಇದೆ' ಎಂದು ಮೂಲಗಳು ತಿಳಿಸಿವೆ.

ಸೈಬರ್ ಸುರಕ್ಷತೆ ಜಾಲದ ವಿಸ್ತರಣೆ ಅಗತ್ಯ

ಕೇಂದ್ರ ಸರ್ಕಾರದ ನೆರವಿನಲ್ಲಿ ಅಗತ್ಯ ಕ್ರಮ: ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧ ಜಾಲ ಬಹಳ ದೊಡ್ಡದಾಗಿ ಬೆಳೆಯುತ್ತಿದೆ. ಅದನ್ನು ನಿಯಂತ್ರಿಸಲು ಸೈಬರ್ ಸುರಕ್ಷತೆಯ ಜಾಲವೂ ವಿಸ್ತರಣೆಯಾಗಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ ಸೈಬರ್ ಸುರಕ್ಷತಾ ಅಭಿಯಾನದಲ್ಲಿ ಅವರು ಮಾತನಾಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾ ಲವನ್ನು ಬಗ್ಗುಬಡಿಯಲು ಕೇಂದ್ರ ಸರ್ಕಾರದ ನೆರವಿನಲ್ಲಿ ಸೈಬರ್ ಸುರಕ್ಷತೆಯನ್ನು ವಿಸ್ತರಿಸಲು ಪ್ರಯತ್ನಿಸಲಾಗುವುದು' ಎಂದರು.



ಮುಖ್ಯಮಂತ್ರಿ ಬೊಮ್ಮಾಯಿ

'ಡಿಜಿಟಲ್ ಸಾಕ್ಷರತೆಯಿಂದ ಸೈಬರ್ ಅಪರಾಧಗಳನ್ನು ತಡೆಯಬಹುದು. ಸೈಬರ್ ಅಪರಾಧಿಗಳು ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಿದಾಗ ಖಾತೆದಾರರ ಮೊಬೈಲ್ ಸಂಖ್ಯೆಗೆ ಸಿಐಆರ್ ಸಂಖ್ಯೆ ಬರುತ್ತದೆ. ತಕ್ಷಣವೇ ಅದರ ಮಾಹಿತಿಯೊಂದಿಗೆ ದೂರು ನೀಡಿದರೆ ಹಣ ಲಪಟಾಯಿಸಿದವರಿಗೆ ಸಂಬಂಧಿಸಿದ ಎಲ್ಲ ಖಾತೆಗಳನ್ನೂ ಸ್ಥಗಿತಗೊಳಿಸಲು ಸಾಧ್ಯವಿದೆ. ಅಂಥ ವ್ಯವಸ್ಥೆಯನ್ನು ಕರ್ನಾಟಕವು ದೇಶದಲ್ಲೇ ಮೊದಲ ಬಾರಿಗೆ ಪರಿಚಯಿಸಿದೆ' ಎಂದು ಹೇಳಿದರು.

'ಪ್ರತಿಯೊಬ್ಬರೂ ಸೈಬರ್ ಸುರಕ್ಷತೆಯ ಬಗ್ಗೆ ಅರಿವು ಹೊಂದಬೇಕು. ತಮ್ಮ ಬ್ಯಾಂಕ್ ಖಾತೆಗಳು, ಡಿಜಿಟಲ್ ಸ್ವರೂಪದ ದಾಖಲೆಗಳ ರಕ್ಷಣೆಗೆ ಎಚ್ಚರಿಕೆ ವಹಿಸಬೇಕು. ಡಿಜಿಟಲೀಕರಣದ ಪ್ರಕ್ರಿಯೆಯಲ್ಲಿ ಕೋಡಿಂಗ್‌ನಲ್ಲಿ ಪ್ರಮಾದಗಳು ಆಗದಂತೆ ಮುನ್ನೆಚ್ಚರಿಕೆ ಇರಬೇಕು' ಎಂದು ಸಲಹೆ ನೀಡಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ, ಸೈಬರ್ ಸುರಕ್ಷತಾ ಅಭಿಯಾನದ ರಾಯಭಾರಿಯಾಗಿರುವ ಚಿತ್ರನಟ ರಮೇಶ್ ಅರವಿಂದ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಇದ್ದರು.

ನೇಪಾಳದ ಪ್ರಜೆ ಬಂಧನ

ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ನೇಪಾಳದ ಪ್ರಜೆ ಭೀಮ್ ಬಹದ್ದೂರ್ ಥಾಪ (35) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಕನಕಪುರ ರಸ್ತೆಯ ಯಲಚೇನಹಳ್ಳಿಯಲ್ಲಿ ವಾಸವಿದ್ದ ಭೀಮ್, ಏಜೆನ್ಸಿಯೊಂದರ ಮೂಲಕ ಭದ್ರತಾ ಸಿಬ್ಬಂದಿ ಆಗಿ ಕೆಲಸ ಮಾಡುತ್ತಿದ್ದರು. ಅವರಿಂದ ₹9 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅ. 8ರಂದು ರಾತ್ರಿ ಕಳ್ಳತನ ನಡೆದಿದ್ದು, ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದಾಗ ಆರೋಪಿ ಸುಳಿವು ಸಿಕ್ಕಿತ್ತು. ಅವರನ್ನು ವಶಕ್ಕೆ ಪಡೆದ ನಂತರ, ತಪ್ಪೊಪ್ಪಿಕೊಂಡರು.'

'ಮನೆ ಸದಸ್ಯರ ಬಗ್ಗೆ ಆರೋಪಿ ತಿಳಿದುಕೊಂಡಿದ್ದ. ಯಾರೂ ಇಲ್ಲದ ವೇಳೆಯಲ್ಲೇ ಮನೆಗೆ ನುಗ್ಗಿ ಕಳ್ಳತನ ಮಾಡಿದ್ದ' ಎಂದೂ ಮೂಲಗಳು ಹೇಳಿವೆ.

ರೌಡಿ ಕಾಲಿಗೆ ಗುಂಡೇಟು, ಬಂಧನ

ಬೆಂಗಳೂರು: ರಾಜಕಾರಣಿ ಆರ್. ವರ್ತೂರು ಪ್ರಕಾಶ್ ಅಪಹರಣ ಪ್ರಕರಣದ ಪ್ರಮುಖ ಆರೋಪಿ ರೌಡಿ ಚಲ್ಲಘಟ್ಟ ಲೋಹಿತ್‌ನನ್ನು ಕಾಲಿಗೆ ಗುಂಡು ಹಾರಿಸಿ ಇಂದಿರಾನಗರ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'2020ರ ನ. 25ರಂದು ಕೋಲಾರದ ಬೆಗ್ಲಿಹೊಸಹಳ್ಳಿ ಗ್ರಾಮ ಬಳಿ ಇರುವ ಫಾರ್ಮ್‌ಹೌಸ್ ಬಳಿಯೇ ವರ್ತೂರು ಪ್ರಕಾಶ್ ಅವರನ್ನು ಎಂಟು ದುಷ್ಕರ್ಮಿಗಳ ತಂಡ ಅಪಹರಿಸಿತ್ತು. ಪ್ರಮುಖ ಆರೋಪಿ ಲೋಹಿತ್ ತಲೆಮರೆಸಿಕೊಂಡಿದ್ದ. ಆತನಿಗಾಗಿ ಬೆಂಗಳೂರು ಹಾಗೂ ಕೋಲಾರ ಪೊಲೀಸರು ಹುಡುಕಾಟ ನಡೆಸುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಇಂದಿರಾನಗರ ಠಾಣೆ ವ್ಯಾಪ್ತಿಯಲ್ಲಿ ಆಟೊ ಚಾಲಕ ವಿಜಯ್‌ಕುಮಾರ್ ಎಂಬುವರನ್ನು ರೌಡಿ ಲೋಹಿತ್ ಹಾಗೂ ಸಹಚರರು ಅಪಹರಿಸಿದ್ದರು. ಹಲ್ಲೆ ಮಾಡಿ ಬಿಡುಗಡೆ ಮಾಡಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ಲೋಹಿತ್ ಪತ್ತೆಗೆ ಎಸಿಪಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.'

'ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯ ಚಲ್ಲಘಟ್ಟ ಬಳಿ ಶನಿವಾರ ಬೆಳಿಗ್ಗೆ ಆರೋಪಿ ಕಾಣಿಸಿಕೊಂಡಿದ್ದ. ಮಾಹಿತಿ ಆಧರಿಸಿ ಪಿಎಸ್‌ಐ ಅಮರೇಶ್ ನೇತೃತ್ವದ ತಂಡ ಹೋಗಿತ್ತು. ಪೊಲೀಸರನ್ನು ನೋಡಿದ್ದ ರೌಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ. ಹಿಡಿಯಲು ಹೋದ ಹೆಡ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದ' ಎಂದರು.

'ಹೆಡ್ ಕಾನ್‌ಸ್ಟೆಬಲ್ ರಕ್ಷಣೆಗೆ ಧಾವಿಸಿದ್ದ ಪಿಎಸ್‌ಐ ಅವರು, ಶರಣಾಗುವಂತೆ ರೌಡಿಗೆ ಎಚ್ಚರಿಕೆ ನೀಡಿದ್ದರು. ಅವರ ಮೇಲೆಯೂ ಹಲ್ಲೆಗೆ ಆತ ಮುಂದಾಗಿದ್ದ. ಆಗ ಪಿಎಸ್‌ಐ ಅವರು ಪಿಸ್ತೂಲ್‌ನಿಂದ ರೌಡಿಯ ಬಲ ಕಾಲಿಗೆ ಗುಂಡು ಹೊಡೆದಿದ್ದು, ಕುಸಿದು ಬಿದ್ದ ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ' ಎಂದೂ ತಿಳಿಸಿದರು.

'ಆತನಿಂದ ಇನ್ನೋವಾ ಕಾರು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಲೈಂಗಿಕ ದೌರ್ಜನ್ಯ: ತಾಯಿ– ಮಕ್ಕಳಿಗೆ ಆಶ್ರಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು ಮನೆಗೆ ಕಾರಿನಲ್ಲಿ ಹೊರಟಿದ್ದ ಮಹಿಳೆಯೊಬ್ಬರ ಮೇಲೆ ಅಪರಿಚಿತನೊಬ್ಬ ಲೈಂಗಿಕ ದೌರ್ಜನ್ಯ ಎಸಗಿದ್ದು, ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಹಿಳೆ ದೂರು ಆಧರಿಸಿ ಅಪರಿಚಿತ ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿದ್ದು, ಆತನ ಪತ್ತೆಗೆ ಘಟನಾ ಸ್ಥಳದಲ್ಲಿರುವ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಗಿದ್ದೇನು: 'ಮಹಿಳೆ, ಮಕ್ಕಳಿಬ್ಬರ ಜೊತೆ ಹೊಸಕೋಟೆಯಲ್ಲಿರುವ ಸಂಬಂಧಿಕರ ಮನೆಗೆ ಶನಿವಾರ ಕಾರಿನಲ್ಲಿ ಹೋಗಿದ್ದು, ರಾತ್ರಿ ಬೆಂಗಳೂರಿಗೆ ಮರಳುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಹೆಬ್ಬಾಳ ವೃತ್ತದ ಬಳಿ ಕಾರು ಪಂಕ್ಚರ್ ಆಗಿತ್ತು. ಮಹಿಳೆ, ಚಕ್ರ ಬದಲಿಸುತ್ತಿದ್ದರು. ಅದೇ ಸಂದರ್ಭದಲ್ಲೇ ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದ ಅಪರಿಚಿತನೊಬ್ಬ ಮಹಿಳೆಯನ್ನು ಮಾತನಾಡಿಸಿದ್ದ. ಅಸಭ್ಯವಾಗಿ ವರ್ತಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ.'

'ಚಕ್ರ ಬದಲಿಸಿದ್ದ ಮಹಿಳೆ, ತಮ್ಮ ಕಾರು ಏರಿ ಸ್ಥಳದಿಂದ ಹೊರಟಿದ್ದರು. ಹೊರ ವರ್ತುಲ ರಸ್ತೆ ಮೂಲಕ ಗೋರಗುಂಟೆಪಾಳ್ಯ ವೃತ್ತಕ್ಕೆ ಬಂದಿದ್ದರು. ಹಿಂಬಾಲಿಸಿದ್ದ ಆರೋಪಿ ಗೊರಗುಂಟೆಪಾಳ್ಯದ ಬಳಿ ಕಾರು ಅಡ್ಡಗಟ್ಟಲು ಯತ್ನಿಸಿದ್ದ. ಹೆದರಿದ ಮಹಿಳೆ, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಸಹಾಯ ಕೋರಿದ್ದರು. ಕೆಲ ನಿಮಿಷಗಳಲ್ಲೇ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಪೊಲೀಸರನ್ನು ನೋಡಿ ಆರೋಪಿ ಪರಾರಿಆಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

'ತಡರಾತ್ರಿಯಾಗಿದ್ದರಿಂದ ಮಹಿಳೆ ಹಾಗೂ ಅವರ ಮಕ್ಕಳನ್ನು ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಆರ್‌ಎಂಸಿ ಯಾರ್ಡ್ ಠಾಣೆಗೆ ಕರೆದೊಯ್ದಿದ್ದರು. ನಸುಕಿನವರೆಗೂ ತಾಯಿ–ಮಕ್ಕಳಿಗೆ ಆಶ್ರಯ ನೀಡಿದ್ದರು. ಮರುದಿನ ಸುರಕ್ಷಿತವಾಗಿ ಮನೆಗೆ ಕಳುಹಿಸಿಕೊಟ್ಟಿದ್ದಾರೆ. ಮಹಿಳೆಯು ಅಮೃತಹಳ್ಳಿ ಠಾಣೆಗೆ ಮಹಿಳೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಗಾಜು ಒಡೆದಿದ್ದ ಇಬ್ಬರು ಚಾಲಕರ ಬಂಧನ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ರಸ್ತೆಯಲ್ಲಿ ನಿಲ್ಲಿಸಿದ್ದ ಐದು ವಾಹನಗಳ ಗಾಜು ಒಡೆದಿದ್ದ ಆರೋಪದಡಿ ಇಬ್ಬರು ಚಾಲಕರನ್ನು ಪೊಲೀಸರು ಬಂಧಿಸಿದ್ದಾರೆ.

'ಶಿವು ಹಾಗೂ ಟೋನಿ ಬಂಧಿತರು. ಸ್ಥಳೀಯ ಶಾಲೆಯೊಂದರ ವಾಹನಗಳ ಚಾಲಕರಾಗಿದ್ದ ಇವರಿಬ್ಬರು, ಶುಕ್ರವಾರ ರಾತ್ರಿ ದೊಣ್ಣೆಗಳಿಂದ ವಾಹನಗಳ ಗಾಜು ಒಡೆದಿದ್ದರು. ಈ ಬಗ್ಗೆ ವಾಹನಗಳ ಮಾಲೀಕರು ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ತಪ್ಪಿಸಿಕೊಳ್ಳಲು ಹೋಗಿ ಅಪಘಾತ; ಇಬ್ಬರಿಗೆ ಗಾಯ

ಬೆಂಗಳೂರು: ವಿಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ವಾಹನಗಳ ತಪಾಸಣೆ ವೇಳೆ ಪೊಲೀಸರಿಂದ ಪಾರಾಗಲು ಯತ್ನಿಸಿ ಬೈಕ್ ಸವಾರರೊಬ್ಬರು ಅಪಘಾತ ಮಾಡಿದ್ದು, ಇಬ್ಬರು ಗಾಯಗೊಂಡಿದ್ದಾರೆ.

'ಕಾಮಾಕ್ಷಿಪಾಳ್ಯ ನಿವಾಸಿ ರಾಧಾಕೃಷ್ಣ, ನ್ಯೂ ಬಿನ್ನಿಪೇಟೆ ನಿವಾಸಿ ಕೌಶಿಕ್ (18) ಗಾಯಗೊಂಡವರು. ಬೈಕ್ ಸವಾರ ಚೇತನ್ ಎಂಬಾತ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪಿಎಸ್‌ಐ ನಿಂಗರಾಜು ಮತ್ತು ಹೆಡ್ ಕಾನ್‌ಸ್ಟೆಬಲ್ ಕೃಷ್ಣಮೂರ್ತಿ ಅವರು ಆರ್‌ಪಿಸಿ ಬಡಾವಣೆ ರಸ್ತೆಯಲ್ಲಿ ಡಿ. 9ರಂದು ವಾಹನಗಳ ತಪಾಸಣೆ ನಡೆಸುವ ವೇಳೆ ಘಟನೆ ನಡೆದಿದೆ'

'ಪೊಲೀಸರನ್ನು ಕಂಡ ಚೇತನ್, ವೇಗವಾಗಿ ಬೈಕ್ ಚಲಾಯಿಸಿ ರಸ್ತೆಯಲ್ಲಿ ನಿಂತಿದ್ದ ಗೃಹ ರಕ್ಷಕ ದಳದ ಸಿಬ್ಬಂದಿ ರಾಧಾಕೃಷ್ಣ ಅವರಿಗೆ ಬೈಕ್ ಗುದ್ದಿಸಿದ್ದ.

ಪತ್ನಿ ಚುಡಾಯಿಸಿದ್ದಕ್ಕೆ ಹಲ್ಲೆ: 2 ಎಫ್‌ಐಆರ್

ಬೆಂಗಳೂರು: ಕೆಂಪೇಗೌಡ ನಗರ ಠಾಣೆ ವ್ಯಾಪ್ತಿಯಲ್ಲಿ ಭದ್ರತಾ ಸಿಬ್ಬಂದಿಗಳಿಬ್ಬರ ನಡುವೆ ಮಾರಾಮಾರಿ ನಡೆದಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಭದ್ರತಾ ಕೆಲಸ ಮಾಡುವ ವಾಸು ಹಾಗೂ ಯತೀಶ್ ನಡುವೆ ಗಲಾಟೆ ಆಗಿದೆ. ಇಬ್ಬರೂ ದೂರು ನೀಡಿದ್ದು, ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಕೆಂಪೇಗೌಡ ನಗರ ಠಾಣೆ ಮೂಲಗಳು ಹೇಳಿವೆ.

ವಾಸು ಅವರ ಪತ್ನಿಯನ್ನು ಚುಡಾಯಿಸುತ್ತಿದ್ದ ಯತೀಶ್, ಮೊಬೈಲ್‌ಗೆ ಅಶ್ಲೀಲ ಸಂದೇಶ ಕಳುಹಿಸಿ ಪೀಡಿಸುತ್ತಿದ್ದರು ಎಂಬುದು ಗಲಾಟೆಗೆ ಕಾರಣ. 'ವಾಸು ಹಲ್ಲೆ ಮಾಡಿದ್ದಾಗಿ ಯತೀಶ್, ಪತ್ನಿಯನ್ನು ಯತೀಶ್ ಚುಡಾಯಿಸುತ್ತಿದ್ದರೆಂದು ಎಂದು ವಾಸು ದೂರು ಕೊಟ್ಟಿದ್ದಾರೆ' ಎಂದು ತಿಳಿಸಿವೆ.

ಸರ್ಕಾರ ರಚಿಸಿದ್ದ ಸಮಿತಿ ಸ್ಪಷ್ಟ ವರದಿ ಸಲ್ಲಿಸಲಿ • ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ

ಸರ್ಕಾರಗಳಿಂದ ಮಾರಕ ‘ಎನ್‌ಪಿಎಸ್’ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೌಕರರಿಗೆ ಮಾರಕ ಹಾಗೂ ಅಪ್ರಯೋಜಕವಾಗಿರುವ ನೂತನ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ಸರ್ಕಾರಗಳೇ ಜಾರಿ ಮಾಡಿರುವುದು ನೋವಿನ ಸಂಗತಿ’ ಎಂದು ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬೇಸರ ವ್ಯಕ್ತಪಡಿಸಿದರು.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು (ಎಐಎಸ್‌ಜಿಇಎಫ್) ಶನಿವಾರ ಆಯೋಜಿಸಿದ್ದ ‘ನೂತನ ಪಿಂಚಣಿ ಯೋಜನೆ ರದ್ದತಿ ಮತ್ತು ಹೊರಗುತ್ತಿಗೆ ಉದ್ಯೋಗ’ ಕುರಿತ ರಾಷ್ಟ್ರೀಯ ಕಾರ್ಯಾಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಎನ್‌ಪಿಎಸ್‌ನ ಸಾಧಕ–ಬಾಧಕಗಳನ್ನು ಅಧ್ಯಯನ ಮಾಡಿ ವರದಿ ನೀಡಲು 2018ರಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ಆದರೆ, ಸಮಿತಿ ಈವರೆಗೆ ವರದಿ ಸಲ್ಲಿಸಿಲ್ಲ. ಸಮಿತಿ ಕಾಲಹರಣ ಮಾಡದೆ, ಸರ್ಕಾರಿ ನೌಕರರ ಒಳಿತಿಗಾಗಿ ಸ್ಪಷ್ಟ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು’ ಎಂದು ಅವರು ಒತ್ತಾಯಿಸಿದರು.

‘ಎನ್‌ಪಿಎಸ್‌ನಲ್ಲಿ ನಿಶ್ಚಿತ ಕುಟುಂಬ ಪಿಂಚಣಿಗೆ ಹಾಗೂ ಪಿಂಚಣಿ ಪರಿಷ್ಕರಣೆಗೆ ಅವಕಾಶ ಇರುವುದಿಲ್ಲ. ನೌಕರರು ಅಕಾಲಿಕ ಮರಣ ಹೊಂದಿದರೆ, ಅವಲಂಬಿತ ಕುಟುಂಬಗಳಿಗೆ ಆರ್ಥಿಕ ಭದ್ರತೆಯೂ ಇರುವುದಿಲ್ಲ. ಸರ್ಕಾರಿ ನೌಕರರಲ್ಲಿ ಎನ್‌ಪಿಎಸ್ ತಾರತಮ್ಯ ಸೃಷ್ಟಿಸುತ್ತದೆ. ಎನ್‌ಪಿಎಸ್ ರದ್ದುಗೊಳಿಸುವ ಕುರಿತು ವಿಧಾನ ಪರಿಷತ್‌ನಲ್ಲಿ ವಿಷಯ ಬಂದರೆ, ಚರ್ಚೆಗೆ ಅವಕಾಶ ಕಲ್ಪಿಸುತ್ತೇನೆ’ ಎಂದು ಭರವಸೆ ನೀಡಿದರು.

ಅಖಿಲ ಕರ್ನಾಟಕ ಸರ್ಕಾರಿ ನೌಕರರ ಒಕ್ಕೂಟದ ಗೌರವಾಧ್ಯಕ್ಷ ಮಹದೇವಯ್ಯ ಮಠಪತಿ, ‘ಎನ್‌ಪಿಎಸ್ ಅನ್ನು ನೂತನ ಪಿಂಚಣಿ ಯೋಜನೆ ಎನ್ನುವ ಬದಲಿಗೆ ‘ಪಿಂಚಣಿ ಇಲ್ಲದ ಯೋಜನೆ’ ಎನ್ನಬೇಕು. ಸರ್ಕಾರಿ ನೌಕರರ ಉಳಿವಿಗೆ ಎನ್‌ಪಿಎಸ್ ರದ್ದಾಗಿ ಹಳೆಯ ಪಿಂಚಣಿ ಯೋಜನೆಯನ್ನೇ (ಒಪಿಎಸ್) ಮತ್ತೆ ಜಾರಿ ಮಾಡಬೇಕು’ ಎಂದು ಆಗ್ರಹಿಸಿದರು.

ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಎನ್.ಇ.ನಟರಾಜ್, ‘ಸರ್ಕಾರಿ ನೌಕರರ ಮೇಲೆ ಹೊರಗುತ್ತಿಗೆ ತೀವ್ರ ಪರಿಣಾಮ ಬೀರುತ್ತಿದೆ. ಸರ್ಕಾರಿ ವಲಯದಿಂದ ಹೊರಗುತ್ತಿಗೆ ಪದ್ಧತಿಯನ್ನು ತೊಲಗಿಸಬೇಕು. ಸದ್ಯ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರನ್ನು ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿದರು.



ಕೋವಿಡ್ ಸೇನಾನಿಗಳಾದ (ಕುಳಿತವರು ಎಡದಿಂದ) ಗಂಗಮ್ಮ, ಚನ್ನಮ್ಮ ರುದ್ರೇಗೌಡ ಚಿಕ್ಕರೆಡ್ಡಿ, ಮಹದೇಶ್ ವರ್ಮಾ, ಲಿಂಗರಾಜು, ಆರ್.ಎಸ್ ದೀಪಕ್ ಸಿಂಗ್ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. (ನಿಂತವರು ಎಡದಿಂದ) ಒಕ್ಕೂಟದ ಸದಸ್ಯ ಕುಳ್ಳೇಗೌಡ, ಕಾರ್ಯದರ್ಶಿ ಶೋಭಾ ಲೋಕನಾಗಣ್ಣ, ಎನ್.ಇ.ನಟರಾಜ್, ಎಐಎಸ್‌ಜಿಇಎಫ್‌ನ ಅಧ್ಯಕ್ಷ ಸುಭಾಷ್ ಲಂಬಾ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ರೋಶಿನಿ ಗೌಡ, ಮಹದೇವಯ್ಯ ಮಠಪತಿ, ಶ್ರೀಕುಮಾರ್, ಶಿಕ್ಷಕಿ ಶೈಲಜಾ, ಸಣ್ಣ ಉಳಿತಾಯ ಇಲಾಖೆ ಸಹಾಯಕ ನಿರ್ದೇಶಕಿ ಎಚ್.ವಿ.ಕಮಲಾಕ್ಷಿ ಮತ್ತು ಅಭಿವೃದ್ಧಿ ಅಧಿಕಾರಿ ಟಿ.ಆರ್.ವೇದವತಿ ಇದ್ದರು ಪ್ರಜಾವಾಣಿ ಚಿತ್ರ

300 ಕುಟುಂಬಗಳಿಗೆ ಪರಿಹಾರ ವಿತರಣೆ

ಬೆಂಗಳೂರು: ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ 300 ಕುಟುಂಬಗಳಿಗೆ ವಸತಿ ಸಚಿವ ವಿ.ಸೋಮಣ್ಣ ಪರಿಹಾರ ಮೊತ್ತದ ಚೆಕ್‌ಗಳನ್ನು ವಿತರಿಸಿದರು.

‘ಕೋವಿಡ್‌ನಿಂದಾಗಿ ಲಕ್ಷಾಂತರ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಇವರಿಗೆ ಆಸರೆಯಾಗಬೇಕೆಂಬ ಉದ್ದೇಶದಿಂದ ಪರಿಹಾರ ನೀಡಲಾಗಿದೆ’ ಎಂದು ಸೋಮಣ್ಣ ತಿಳಿಸಿದರು.

‘ಬಡತನ ರೇಖೆಗಿಂತ ಕೆಳಗಿರುವ ಪಡಿತರ ಚೀಟಿದಾರರ ಪ್ರತಿ ಕುಟುಂಬಕ್ಕೆ ತಲಾ ₹1.5 ಲಕ್ಷ ಮೊತ್ತದ ಚೆಕ್ ವಿತರಿಸಲಾಗಿದೆ. ಎಪಿಎಲ್ ಕಾರ್ಡ್ ಹೊಂದಿದ್ದವರ ಕುಟುಂಬಗಳಿಗೆ ತಲಾ ₹50 ಸಾವಿರದ ಮಂಜೂರಾತಿ ಆದೇಶ ಪತ್ರಗಳನ್ನು ನೀಡಲಾಗಿದೆ. ಕ್ಷೇತ್ರದಲ್ಲಿ 65 ಹಾಸಿಗೆ ಸಾಮರ್ಥ್ಯದ ತೀವ್ರ ನಿಗಾ ಘಟಕದ ವ್ಯವಸ್ಥೆ ಇರುವ ಆಸ್ಪತ್ರೆಯನ್ನೂ ನಿರ್ಮಿಸಲಾಗಿದೆ’ ಎಂದರು.

ನಾಳೆಯಿಂದಲೇ ಹೊಸ ಶುಲ್ಕ ಜಾರಿ: ಪಾಲಿಕೆ ಮುಖ್ಯ ಆಯುಕ್ತ ಆದೇಶ

ಕಟ್ಟಡ ಪರವಾನಗಿ ಶುಲ್ಕ ಪರಿಷ್ಕರಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಪರವಾನಗಿ ಶುಲ್ಕ ಪರಿಷ್ಕರಿಸಲಾಗಿದೆ. ನೆಲ ಬಾಡಿಗೆ ಶುಲ್ಕ, ಪರವಾನಗಿ ಶುಲ್ಕ ಮತ್ತು ನಕ್ಷೆಗಳ ಪ್ರತಿಗಳ ಶುಲ್ಕಗಳನ್ನು ಹಾಗೂ ಇತರೆ ಶುಲ್ಕಗಳನ್ನು ನಿಗದಿಪಡಿಸಿ ಪಾಲಿಕೆ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ನಿವೇಶನ ಅಥವಾ ಸ್ವತ್ತಿನ ಮೌಲ್ಯವನ್ನು ನಿರ್ಧರಿಸುವಾಗ ನಗರದ ಜಿಲ್ಲಾ ಉಪನೋಂದಣಿ ಕಚೇರಿಗಳ ವ್ಯಾಪ್ತಿಯಲ್ಲಿ ಅನ್ವಯಿಸುವ ಸೂಚನೆಗಳನ್ನು ಅನುಸರಿಸಬೇಕು. ಜತೆಗೆ, ಶುಲ್ಕ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ದರಗಳು ಹಾಗೂ ವಿಶೇಷ ಸೂಚನೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಆದೇಶದಲ್ಲಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

ನಕ್ಷೆಗಳ ಪ್ರತಿಗಳ ಪಡೆಯಲು ₹50 ರಿಂದ ₹600ರವರೆಗೆ ನಿಗದಿಪಡಿಸಲಾಗಿದೆ. ತಳ, ನೆಲ ಮತ್ತು ಮೂರು ಅಂತಸ್ತುಗಳವರೆಗಿನ ವಸತಿ ಕಟ್ಟಡಗಳ ದೃಢೀಕರಿಸಿದ ನಕ್ಷೆಗಳ ಪ್ರತಿಗೆ ₹ 50 ಹಾಗೂ ಬಹುಮಹಡಿ ವಸತಿ ಕಟ್ಟಡ ಮತ್ತು ವಸತಿಯೇತರ ಕಟ್ಟಡಗಳ ನಕ್ಷೆಗಳ ಪ್ರತಿಗೆ ₹100 ನಿಗದಿಪಡಿಸಲಾಗಿದೆ.

ವಸತಿ ಸಮುಚ್ಚಯ ಹಾಗೂ ವಸತಿಯೇತರ ಕಟ್ಟಡಗಳ ಮೊದಲ ಐದು ಪ್ರತಿಗಳಿಗೆ ₹400 ಹಾಗೂ 6ನೇ ಮತ್ತು ಅದಕ್ಕಿಂತ ಹೆಚ್ಚು ಪ್ರತಿಗಳಿಗೆ ₹600 ನಿಗದಿಪಡಿಸಲಾಗಿದೆ.

ಪರಿಷ್ಕೃತ ದರಗಳು ಸೋಮವಾರದಿಂದಲೇ ಜಾರಿಗೆ ಬರಲಿವೆ ಎಂದು ಬಿಬಿಎಂಪಿ ನಗರ ಯೋಜನಾ ವಿಭಾಗದ ಹೆಚ್ಚುವರಿ ನಿರ್ದೇಶಕ ರಘು ‘ಪ್ರಜಾವಾಣಿ’ಗೆ ತಿಳಿಸಿದರು.

ಭೂಮಾಲೀಕರಿಂದ, ರಿಯಲ್ ಎಸ್ಟೇಟ್ ಡೆವಲಪರ್‌ಗಳಿಂದ ನೆಲಬಾಡಿಗೆ, ಪರವಾನಗಿ ಶುಲ್ಕ, ಭದ್ರತಾಶುಲ್ಕ, ಭದ್ರತಾ ಠೇವಣಿ ಮತ್ತಿತರ ಶುಲ್ಕಗಳನ್ನು ಸ್ವೀಕರಿಸಲು ಬಿಬಿಎಂಪಿ ಬೈಲಾಗಳಲ್ಲಿ ಅವಕಾಶ ಇಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಆ ಬಳಿಕ ಕಟ್ಟಡ ಯೋಜನೆಗಳಿಗೆ ಮಂಜೂರಾತಿ ನೀಡುವುದನ್ನು ಪಾಲಿಕೆ ಸ್ಥಗಿತಗೊಳಿಸಿತ್ತು. ಹೈಕೋರ್ಟ್ ನಿರ್ದೇಶನ ಪಾಲನೆಗೆ ಸಂಬಂಧಿಸಿದ ಎದುರಾಗಿದ್ದ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಬಿಬಿಎಂಪಿಯು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಹೊಸ ಯೋಜನೆಗಳಿಗೆ ಮಂಜೂರಾತಿ ನೀಡುವುದನ್ನು ಸ್ಥಗಿತಗೊಳಿಸಿತ್ತು.

‘ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವಾಗ ಪಾಲಿಕೆಗಳು ಶುಲ್ಕ ಸಂಗ್ರಹ ಮಾಡಲು ಅವಕಾಶ ಕಲ್ಪಿಸುವ ಸಲುವಾಗಿ ಸರ್ಕಾರ 2020ರ ಬಿಬಿಎಂಪಿ ಕಾಯ್ದೆಗೆ ತಿದ್ದುಪಡಿ ತಂದಿದ್ದು, ಅದರ ಪ್ರಕಾರ ಕಟ್ಟಡ ಯೋಜನೆಗೆ ಮಂಜೂರಾತಿ ನೀಡುವಾಗ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪತ್ರ ನೀಡುವಾಗ, ನಿಗದಿತ ಶುಲ್ಕಗಳನ್ನು ಸಂಗ್ರಹಿಸಲು ಮುಖ್ಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ’ ಎಂದು ಪಾಲಿಕೆಯ ಮೂಲಗಳು ತಿಳಿಸಿವೆ.

ಶುಲ್ಕಗಳ ವಿವರ–ನಕ್ಷೆ ಮಂಜೂರಾತಿ ಹಂತ

ಶುಲ್ಕಗಳ ವಿವರ	ವಸತಿ	ವಸತಿಯೇತರ/ ವಾಣಿಜ್ಯ	ಕೈಗಾರಿ (ಶೇಕಡವ
ೀಲನಾ ಶುಲ್ಕ	0.009	0.014	-
ಬಾಡಿಗೆ	0.09	0.22	-
ಾನಗಿ ಶುಲ್ಕ	0.18	0.28	0.17
ಂಭಿಕ ಪ್ರಮಾಣಪತ್ರ ಶುಲ್ಕ	0.11	0.18	0.18

ಲ್ತಿಯಲ್ಲಿರುವ ಮಾರ್ಗಸೂಚಿ ದರಕ್ಕೆ ಅನುಗುಣವಾಗಿ ಪ್ರತಿ ಚದರ ಮೀಟರ್‌ಗೆ ತಿಸಿಕೊಳ್ಳಬೇಕಾದುದು)



ಮೆಟ್ರೊ ಯೋಜನೆಗೆ ಮರ ಕಡಿಯಲು ವಿರೋಧ

ಬೆಂಗಳೂರು: ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೊ 2ಎ ಮಾರ್ಗದ ಕಾಮಗಾರಿಗೆ 800ಕ್ಕೂ ಹೆಚ್ಚು ಮರಗಳ ನಾಶವಾಗುತ್ತಿದೆ. ಅಗರ ಕೆರೆಯಂಗಳದಲ್ಲಿರುವ 15 ಮರಗಳನ್ನೂ ಕಡಿಯಲಾಗುತ್ತಿದೆ. ಜನಸಾಮಾನ್ಯರ ಅಭಿಪ್ರಾಯವನ್ನು ಸಂಗ್ರಹಿಸದೇ ಕೋವಿಡ್ ಕಾಲದಲ್ಲಿ ಮರ ಕಡಿಯಲು ಒಪ್ಪಿಗೆ ನೀಡಲಾಗಿದೆ’ ಎಂದು ‘ಗ್ರೋಥ್ ವಾಚ್’ ಸಂಸ್ಥೆ ಆರೋಪಿಸಿದೆ.

ಮಾನವ ಹಕ್ಕುಗಳ ದಿನದ ಅಂಗವಾಗಿ ಸಂಸ್ಥೆಯು ಅಗರ ಕೆರೆ ಬಳಿ ಶನಿವಾರ ಆಯೋಜಿಸಿದ್ದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ವಯಂಸೇವಕರು ಬೆಂಗಳೂರು ಮೆಟ್ರೊ ರೈಲು ನಿಗಮದ ಕ್ರಮವನ್ನು ಖಂಡಿಸಿದರು.

ಸಂಸ್ಥೆಯ ಸ್ವಯಂಸೇವಕಿ ಸಂಧ್ಯಾ ‘ಆರೋಗ್ಯಕರ ಪರಿಸರ ಹೊಂದುವುದು ಮಾನವ ಹಕ್ಕು ಎಂದು ವಿಶ್ವ ಸಂಸ್ಥೆಯ 2021ರ ಮಾನವ ಹಕ್ಕುಗಳ ದಿನದ ಘೋಷವಾಕ್ಯ ಹೇಳುತ್ತದೆ. ಆದರೆ, ನಮ್ಮ ಮೆಟ್ರೊ ವಿಸ್ತರಣಾ ಯೋಜನೆಯ ಎರಡನೇ ಹಂತದ ವಿಸ್ತರಣೆಗೆ 4,777ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗುತ್ತಿದೆ. ಇದರಿಂದ ನಗರ ಪರಿಸರಕ್ಕೆ ಹಾನಿಯಾಗುತ್ತದೆ. ಈ ಬಗ್ಗೆ ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳನ್ನು ವಿಚಾರಿಸಿದಾಗ ಮೆಟ್ರೊ ಯೋಜನೆಗಾಗಿ ಮರಗಳನ್ನು ಕಡಿಯುವ ಪ್ರಸ್ತಾವಗಳಿಗೆ 2021ರ ಎಪ್ರಿಲ್‌ನಲ್ಲೆ ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದ್ದಾರೆ. ಮರ ಕಡಿಯುವುದಕ್ಕೆ 776 ಮಂದಿ ಆಕ್ಷೇಪ ಸಲ್ಲಿಸಿದ್ದರು. ಆದರೆ, ಮರ ಕಡಿಯಲು ಅನುಮತಿ ನೀಡುವಾಗ ಸಾರ್ವಜನಿಕರ ಅಭಿಪ್ರಾಯಕ್ಕೆ ಮನ್ನಣೆಯನ್ನೇ ನೀಡಿಲ್ಲ’ ಎಂದು ದೂರಿದರು.

‘ಸ್ಥಳೀಯರಲ್ಲಿ ಪರಿಸರ ಕಾಳಜಿ ಬೆಳೆಸಲು ಜಾಗೃತಿ ನಡಿಗೆಯನ್ನು ಹಮ್ಮಿಕೊಳ್ಳಲಾಗಿತ್ತು’ ಎಂದು ಸಂಸ್ಥೆಯ ಸ್ವಯಂಸೇವಕಿ ರಜನಿ ತಿಳಿಸಿದರು.



ನಮ್ಮ ಮೆಟ್ರೊ ಕಾಮಗಾರಿಗಾಗಿ ಮರಗಳನ್ನು ಕಡಿಯದಂತೆ ಒತ್ತಾಯಿಸಿ ಗ್ರೋಥ್ ವಾಚ್ ಸಂಸ್ಥೆಯ ಸ್ವಯಂಸೇವಕರು ಅಗರ ಕೆರೆ ಬಳಿ ಭಿತ್ತಿಪತ್ರ ಹಿಡಿದು ಜಾಗೃತಿ ಮೂಡಿಸಿದರು

ಬದಲಾವಣೆಗೆ ಭೂಮಿಕೆ ಸಿದ್ಧಪಡಿಸಿ: ರಕ್ಷಾ ರಾಮಯ್ಯ

ಬೆಂಗಳೂರು: ‘ರಾಜ್ಯ ಹಾಗೂ ದೇಶದಲ್ಲಿ ಕಾಂಗ್ರೆಸ್ ಪರ ಒಲವು ವ್ಯಕ್ತವಾಗುತ್ತಿದ್ದು, ಇದನ್ನು ಮುಂಬರುವ ಚುನಾವಣೆಗೆ ಮೆಟ್ಟಿಲುಗಳನ್ನಾಗಿ ಬಳಸಿಕೊಳ್ಳಬೇಕು. ಬದಲಾವಣೆಗೆ ಈಗಿನಿಂದಲೇ ಭೂಮಿಕೆ ಸಿದ್ಧಪಡಿಸಬೇಕು' ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ಹೇಳಿದರು.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಯುವ ಕಾಂಗ್ರೆಸ್‌ನ ವತಿಯಿಂದ ಹಮ್ಮಿಕೊಂಡಿದ್ದ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಕಾಂಗ್ರೆಸ್‌ನತ್ತ ಜನರು ಆಸಕ್ತರಾಗುತ್ತಿದ್ದಾರೆ. ಮಾನಸಿಕವಾಗಿ ಕಾಂಗ್ರೆಸ್ ಪರ ಇರುವವರನ್ನು ಗುರುತಿಸಿ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ದೇಶದ ವಿಕಾಸದಲ್ಲಿ ಕಾಂಗ್ರೆಸ್ಸಿನ ಪಾತ್ರ ಮತ್ತು ಮಹತ್ವದ ಬಗ್ಗೆ ಜಾಗೃತಿ ಮೂಡಿಸಬೇಕು’ ಎಂದರು.



ರಕ್ಷಾ ರಾಮಯ್ಯ

‘ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಳವಾಗುತ್ತಿದೆ. ಹಣದುಬ್ಬರ ದಿನೇ ದಿನೇ ಏರಿಕೆಯಾಗುತ್ತಿದ್ದು, ಅಗತ್ಯ ವಸ್ತುಗಳು ಗಗನಮುಖಿಯಾಗಿವೆ. ದೈನಂದಿನ ಬದುಕು ಕ್ಲಿಷ್ಟಕರವಾಗಿದೆ. ಜನ ಸಹಜವಾಗಿ ಬದುಕಲು ಸಾಧ್ಯವಾಗದ ವಾತಾವರಣ ನಿರ್ಮಾಣ ಮಾಡಲಾಗಿದೆ. ಸಂಕಷ್ಟದಲ್ಲಿರುವವರನ್ನು ಪಕ್ಷದತ್ತ ಸೆಳೆಯಬೇಕು’ ಎಂದು ಮನವಿ ಮಾಡಿದರು.

ನಾಳೆಯಿಂದ ರಕ್ಷಣಾ ಇಲಾಖೆಯ ವಸ್ತುಪ್ರದರ್ಶನ

ಬೆಂಗಳೂರು: ರಕ್ಷಣಾ ಕ್ಷೇತ್ರದ ಉದ್ದಿಮೆಗೆ ಸಂಬಂಧಿಸಿದ ಸರ್ಕಾರಿ ಸಂಸ್ಥೆಗಳು 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ನಗರದಲ್ಲಿ ಡಿ. 13ರಿಂದ 19ರವರೆಗೆ ರಕ್ಷಣಾ ಸಾಮಗ್ರಿಗಳ ಪ್ರದರ್ಶನ ಹಮ್ಮಿಕೊಂಡಿವೆ.

‘ಜಾಲಹಳ್ಳಿ ಸೇರಿದಂತೆ ನಗರದ 9 ಕೇಂದ್ರಗಳಲ್ಲಿ ಪ್ರದರ್ಶನಕ್ಕೆ ನಡೆಯಲಿದೆ. ರಕ್ಷಣಾ ಸಚಿವ ರಾಜನಾಥ ಸಿಂಗ್ ಮಧ್ಯಾಹ್ನ 3.15ಕ್ಕೆ ವರ್ಚುವಲ್ ವೇದಿಕೆ ಮೂಲಕ ಚಾಲನೆ ನೀಡುವರು’ ಎಂದು ಬಿಇಎಲ್ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಜೂಮ್ ಸಂವಾದದ ಮೂಲಕ ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಚಾಲನೆ ನೀಡಿದರು.

ರಾಜ್ಯದ ವಿವಿಧೆಡೆಗಳಿಂದ ಸುಮಾರು 2 ಸಾವಿರಕ್ಕೂ ಹೆಚ್ಚು ಕಡೆಗಳಿಂದ ಬ್ಲಾಕ್ ಮಟ್ಟದಲ್ಲಿ ಕಾಂಗ್ರೆಸ್ ನಾಯಕರು ಜೂಮ್ ಮೂಲಕವೇ ಈ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಭಾಗವಹಿಸಿದರು.

ಸ್ವಗ್ರಾಮ, ಮೈಸೂರು ತಾಲ್ಲೂಕಿನ ಸಿದ್ದರಾಮನ ಹುಂಡಿಯ ಬೂತ್‌ನಲ್ಲಿ ಏರ್ಪಡಿಸಿದ್ದ ಅಭಿಯಾನದಲ್ಲಿ ಸಿದ್ದರಾಮಯ್ಯ ಅವರು ಪಕ್ಷದ ಸದಸ್ಯತ್ವ ಸ್ವೀಕರಿಸಿದರು. ಪುತ್ರ, ಶಾಸಕ ಡಾ. ಯತೀಂದ್ರ ಕೂಡಾ ಇದ್ದರು. ಹಳ್ಳಿಗೆ ಬಂದ ಸಿದ್ದರಾಮಯ್ಯ ಅವರಿಗೆ ಗ್ರಾಮಸ್ಥರು, ಪಕ್ಷದ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿ ಅವರನ್ನು ಎತ್ತಿನ ಗಾಡಿಯಲ್ಲಿ ವೇದಿಕೆಗೆ ಕರೆ ದೊಯ್ದರು.

ಸಂವಾದದಲ್ಲಿ ಮಾತನಾಡಿದ ಶಿವಕುಮಾರ್, ‘ಈ ಅಭಿಯಾನದ ನಂತರ ಬ್ಲಾಕ್, ಜಿಲ್ಲಾ, ಕೆಪಿಸಿಸಿಯ ಚುನಾವಣೆ ನಡೆಯಬಹುದು. ಸದಸ್ಯತ್ವ ಪಡೆದ ನಂತರ ಚುನಾವಣೆಯಲ್ಲಿ ಸ್ಪರ್ಧಿಸಬಹುದು‘ ಎಂದರು.

‘ಸಕ್ರಿಯ ಸದಸ್ಯತ್ವ ಪಡೆಯುವವರು ಕನಿಷ್ಠ 25 ಸದಸ್ಯತ್ವ ಮಾಡಿಸಬೇಕು. ಸಕ್ರಿಯ ಸದಸ್ಯರಿಗೆ ಮಾತ್ರ ವಿವಿಧ ಹಂತಗಳಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು ಇರುತ್ತದೆ. ಸದಸ್ಯರಾಗದೆ ಸ್ಥಾನಮಾನ ಪಡೆಯಲು ಸಾಧ್ಯವಿಲ್ಲ. ‘ಪ್ರತಿ ಬೂತ್‌ಗೆ ಡಿಜಿಟಲ್ ಯೂತ್’ ನೇಮಿಸಿ, ಅಂಥವರ ಮೊಬೈಲ್ ಸಂಖ್ಯೆಯನ್ನು ಎಐಸಿಸಿಗೆ ನೀಡಲಾಗುವುದು. ಅಂಥವರು ಸದಸ್ಯತ್ವ ನೋಂದಣಿಯ ಆ್ಯಪ್ ತೆರೆದು ಡಿಜಿಟಲ್ ಸದಸ್ಯತ್ವ ಮಾಡಿಸಬಹುದು’ ಎಂದರು.

‘ಸದಸ್ಯತ್ವ ಅಭಿಯಾನದಲ್ಲಿ ಭಾಗವಹಿಸುವವರು ಒಂದು ನಿಮಿಷದ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡಬೇಕು’ ಎಂದೂ ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಅವರ ಭೇಟಿ ಮತ್ತು ಅವರು ಕಾಂಗ್ರೆಸ್ ಸದಸ್ಯತ್ವ ಪಡೆಯುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ‘ಇಬ್ರಾಹಿಂ ಅವರು ಸದಸ್ಯತ್ವ ಪಡೆಯಲು ಬಂದಿದ್ದರು. ಆದರೆ, ಗುರುತಿನ ಚೀಟಿ ಇಲ್ಲದ ಕಾರಣ ತಮ್ಮ ಬೂತ್‌ನಲ್ಲೇ ಸದಸ್ಯತ್ವ ಪಡೆಯಲಿದ್ದಾರೆ. ಪಕ್ಷದ ಸಂಘಟನೆ ವಿಚಾರವಾಗಿ ಚರ್ಚಿಸಲು ಅವರು ಬಂದಿದ್ದರು’ ಎಂದರು.



ಯಶವಂತಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ಎಚ್. ಕುಸುಮಾ ಮಾತನಾಡಿದರು.

‘ಕಾಂಗ್ರೆಸ್ ಪಕ್ಷವಲ್ಲ, ಜನರ ಜೀವನಾಡಿ’

ಬೊಮ್ಮನಹಳ್ಳಿ: ‘ಕಾಂಗ್ರೆಸ್ ಪಕ್ಷ ಮಾತ್ರವಲ್ಲ, ಜನರ ಜೀವನಾಡಿ. ಲಕ್ಷಾಂತರ ಕಾರ್ಯಕರ್ತರ ನಿಸ್ವಾರ್ಥ ಸೇವಾ ಮನೋಭಾವದಿಂದ ಪಕ್ಷ ಬೆಳೆದಿದೆ. ದೇಶದ ಸಾರ್ವಭೌಮತೆಯ ಉಳಿವು ಹಾಗೂ ಜನರ ಅಭಿವೃದ್ಧಿಗೆ ಪಕ್ಷದ ಕೊಡುಗೆ ಅಪಾರ’ ಎಂದು ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಕಾಂಗ್ರೆಸ್ ಸದಸ್ಯತ್ವ ಅಭಿಯಾನಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಎಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಟಿ.ವಾಸುದೇವ ರೆಡ್ಡಿ, ಬೊಮ್ಮನಹಳ್ಳಿ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಅನಿಲ್ ರೆಡ್ಡಿ ಹಾಜರಿದ್ದರು.

‘ಬೆದರಿಕೆಗೆ ಜಗ್ಗದೇ ಜನ ಸೇವೆಯಲ್ಲಿ ತೊಡಗಿ’

ರಾಜರಾಜೇಶ್ವರಿ ನಗರ: ‘ಪಕ್ಷದ ಕಾರ್ಯಕರ್ತರು ಯಾರ ಬೆದರಿಕೆಗೂ ಜಗ್ಗದೇ ಜನಸೇವೆಯಲ್ಲಿ ನಿರತರಾಗಬೇಕು. ಭಯ ಬಿಟ್ಟು ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು’ ಎಂದು ರಾಜರಾಜೇಶ್ವರಿ ನಗರ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಎಚ್.ಕುಸುಮಾ ತಿಳಿಸಿದರು.

ಯಶವಂತಪುರ ಬ್ಲಾಕ್ ಕಾಂಗ್ರೆಸ್ ಸಮಿತಿಯು ಯಶವಂತಪುರದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

‘ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡು ಜನಸೇವೆಗೆ ಮುಂದಾದರೆ ಆಡಳಿತ ಪಕ್ಷದ ಬೆಂಬಲಿಗರು ಸುಳ್ಳು ಆರೋಪ ಹೊರೆಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ಅವರಿಗೆ ಅವರ ಪಕ್ಷದ ಮುಖಂಡರ ಬೆಂಬಲವೂ ಇದೆ’ ಎಂದು ಕಾಂಗ್ರೆಸ್ ಕಾರ್ಯಕರ್ತರು ಅಳಲು ತೋಡಿಕೊಂಡರು.

‘ಕ್ಷೇತ್ರದಲ್ಲಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಹೋರಾಡಲು ಮುಂದಾದರೆ ಭಯದ ವಾತಾವರಣ ನಿರ್ಮಿಸಿ, ಧ್ವನಿ ಅಡಗಿಸುವ ಕೆಲಸ ಮಾಡುತ್ತಿದ್ದಾರೆ. ದಯವಿಟ್ಟು ನಮಗೆ ರಕ್ಷಣೆ ನೀಡಿ’ ಎಂದು ಕಣ್ಣೀರು ಹಾಕಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಸುಮಾ, ‘ಗೊಡ್ಡು ಬೆದರಿಕೆಗಳಿಗೆ ಹೆದರಬೇಕಿಲ್ಲ. ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ನಾಯಕರು ನಿಮ್ಮ ರಕ್ಷಣೆಗೆ ಕಟಿಬದ್ಧರಾಗಿದ್ದಾರೆ. ನಾನೂ ಸದಾ ನಿಮ್ಮೊಂದಿಗೆ ಇರುತ್ತೇನೆ’ ಎಂದು ಧೈರ್ಯ ತುಂಬಿದರು.

ಯಶವಂತಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲ್, ಮುಖಂಡರಾದ ಶ್ಯಾಮ್, ಕಿರಣ್, ನಯಾಜ್, ಆಕಾಶ್ ಮಣ್ಣೆ, ಜಯಪಾಲ್ ಭಾಗವಹಿಸಿದ್ದರು.

‘ಕವಿಜೋಡಿಯ ಆತ್ಮಗೀತ’ ಕಥಾಕಾವ್ಯ ಬಿಡುಗಡೆ

‘ಕಾವ್ಯ–ಕಲಾಕೃತಿ ಜೊತೆ ಜೊತೆಯಲಿ ಸಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವ್ಯ ಮತ್ತು ಕಲಾಕೃತಿ ಜೊತೆ ಜೊತೆಯಲಿ ಸಾಗಬೇಕು. ಕಾವ್ಯಕ್ಕೆ ಅರ್ಥವಿದೆಯೊ ಇಲ್ಲವೊ ಗೊತ್ತಿಲ್ಲ. ಆದರೆ ಅದಕ್ಕೊಂದು ಕಲಾಕೃತಿ ಬಳಸಿಕೊಳ್ಳಬೇಕು. ಅದು ನನ್ನ ಸಿದ್ಧಾಂತವೂ ಆಗಿತ್ತು’ ಎಂದು ಲೇಖಕ ಆರ್.ಜಿ.ಹಳ್ಳಿ ನಾಗರಾಜ್ ತಿಳಿಸಿದರು.

ಲೇಖಕ ನಟರಾಜ್ ಹುಳಿಯಾರ್ ಅವರ ‘ಕವಿಜೋಡಿಯ ಆತ್ಮಗೀತ’ ಕಥಾಕಾವ್ಯ ಬಿಡುಗಡೆಗೊಳಿಸಿ ಅವರು ಶನಿವಾರ ಮಾತನಾಡಿದರು.

‘ಕವಿತೆಯಂತೆ ಕಲಾಕೃತಿಯೂ ಅಮೂರ್ತವಾಗಿ ಕಾಡುತ್ತಿರಬೇಕು’ ಎಂದರು.

‘ಕನ್ನಡದ ಕಾವ್ಯ ಪ್ರಕಾರದಲ್ಲೇ ವಿಶಿಷ್ಟವಾದ ಕಾವ್ಯವೊಂದನ್ನು ನಟರಾಜ್ ರಚಿಸಿದ್ದಾರೆ. ದಂಪತಿಗಳ ಕಥೆಯನ್ನು ಪ್ರಸ್ತುತಪಡಿಸಿರುವ ರೀತಿಯೂ ವಿಭಿನ್ನವಾಗಿದೆ. ಕವಯತ್ರಿ ಅಮೆರಿಕದ ಸಿಲ್ವಿಯಾ ಪ್ಲಾತ್ 31ನೇ ವಯಸ್ಸಿನಲ್ಲೇ ಅಸುನೀಗಿದ್ದಳು. ಆಕೆ ರಚಿಸಿರುವ ‘ಡ್ಯಾಡಿ’ ಎಂಬ ಪದ್ಯ ತುಂಬಾ ಚೆನ್ನಾಗಿದೆ’ ಎಂದು ಕವಯತ್ರಿ ಎಚ್.ಎಲ್. ಪುಷ್ಪಾ ಹೇಳಿದರು.

‘ಪಾತ್ರಗಳನ್ನು ಕವಿ ಸೃಷ್ಟಿಸುವುದಿಲ್ಲ. ಪಾತ್ರಗಳೇ ಕವಿಯನ್ನು ಸೃಷ್ಟಿ-ಮಾಡುತ್ತವೆ’ ಎಂದು ನಟರಾಜ್ ಹುಳಿಯಾರ್ ಅವರು ಅಭಿಪ್ರಾಯಪಟ್ಟರು.

‘ಕವಿ ಬದುಕಿನ ಕಮ್ಮಟದಲ್ಲಿ ಅರಳಿದ ಅಮೂಲ್ಯ ಪ್ರತಿಭೆಗಳಾದ ಅಮೆರಿಕದ ಸಿಲ್ವಿಯಾ ಪ್ಲಾತ್ ಮತ್ತು ಇಂಗ್ಲೆಂಡ್‌ನ ಟೆಡ್ ಹ್ಯೂಸ್ ಅವರ ಅನನ್ಯ ರೂಪಕಗಳು, ಕುಸಿದ ಅವರ ಬದುಕು, ಬರೆಸಿದ ಕಥಾ ಕಾವ್ಯವೇ ‘ಕವಿಜೋಡಿಯ ಆತ್ಮಗೀತ’. ಈ ಪುಸ್ತಕ ಸಿಕ್ಕಿದ್ದು ಆಕಸ್ಮಿಕ. ಅದು ಸಿಗದೆ ಹೋಗಿದ್ದರೆ ನಾನು ಟೆಡ್‌ಹ್ಯೂಸ್ ಬೆನ್ನತ್ತಿ ಹೋಗುತ್ತಿರಲಿಲ್ಲ’ ಎಂದು ಹೇಳಿದರು.

‘ಕಾವ್ಯವೇ ಬದುಕೆಂಬಂತೆ ಕಂಡಿದ್ದ ಈ ದಂಪತಿ ಕವಿತೆ, ಕತೆ, ನಾಟಕ ಹೀಗೆ ಹಲವು ಪ್ರಕಾರಗಳಲ್ಲಿ ಬರೆದರು. ಕ್ರಮೇಣ ಅವರ ಬದುಕಿನಲ್ಲಿ ಏರುಪೇರುಗಳಾದವು. ಟೆಡ್‌ಹ್ಯೂಸ್‌ನಿಂದ ಬೇರೆಯಾದ ಸಿಲ್ವಿಯಾ, ಒಂದು ರಾತ್ರಿ ತನ್ನೆರಡು ಪುಟ್ಟ ಮಕ್ಕಳನ್ನು ಬಿಟ್ಟು ಬದುಕು ಕೊನೆಗಾಣಿಸಿಕೊಂಡಳು’ ಎಂದು ಹೇಳಿದರು.



ಎಚ್.ಎಲ್.ಪುಷ್ಪಾ (ಎಡದಿಂದ ಎರಡನೆಯವರು) ಮತ್ತು ಆರ್.ಜಿ.ಹಳ್ಳಿ ನಾಗರಾಜ್ ಅವರು ‘ಕವಿಜೋಡಿಯ ಆತ್ಮಗೀತ’ ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) ಪಲ್ಲವ ಪ್ರಕಾಶನದ ಪಲ್ಲವ ವೆಂಕಟೇಶ್, ನಟರಾಜ್ ಹುಳಿಯಾರ್, ನಟಿ ಸೌಮ್ಯ ಕೋಡೂರು, ಹಾಗೂ ನಟ ಸಿದ್ಧಾರ್ಥ ಮಾಧ್ಯಮಿಕಾ ಇದ್ದರು ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

- ಹೆಸರು: ಕವಿಜೋಡಿಯ ಆತ್ಮಗೀತ
- ಲೇಖಕ: ನಟರಾಜ್ ಹುಳಿಯಾರ್
- ಪ್ರಕಾಶನ: ಪಲ್ಲವ
- ಪುಟ: 130
- ಬೆಲೆ: ₹120




‘ಹಾಸ್ಯ ಒಪ್ಪುವ ಔದಾರ್ಯವೇ ಇಲ್ಲ!’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸ್ಟ್ಯಾಂಡ್ ಅಪ್ ಕಾಮೆಡಿಯನ್‌ಗಳು, ದೇಶದ ಕಲಾವಿದರು ವ್ಯವಸ್ಥೆಯ ಹುಳುಕು ತೋರಿಸುತ್ತಿದ್ದಾರೆ. ಜನರ ಪರವಾಗಿ ಮಾತನಾಡುತ್ತಿದ್ದಾರೆ. ಎಲ್ಲಿ ವ್ಯವಸ್ಥೆ ಹದಗೆಟ್ಟಿರುತ್ತದೆಯೋ ಅಲ್ಲಿ ಕಲೆಯು ಪ್ರತಿಭಟಿಸಬೇಕಾಗುತ್ತದೆ. ಆದರೆ, ಭಾರತದಲ್ಲಿನ ಯಾವುದೇ ವ್ಯವಸ್ಥೆಗೆ ಕಲಾವಿದರ ವಿಮರ್ಶೆಯನ್ನು ತಾಳಿಕೊಳ್ಳುವ ಶಕ್ತಿ ಇಲ್ಲ. ಸರ್ಕಾರದ ಅಕಾಡೆಮಿ, ಸಂಸ್ಥೆಗಳಲ್ಲೂ ಪಕ್ಷದ ಸಿದ್ಧಾಂತವನ್ನು ಒಪ್ಪಿ ಬರುವವರೇ ತುಂಬಿಕೊಳ್ಳುತ್ತಿದ್ದಾರೆ....’

–ಶನಿವಾರ ನಡೆದ ‘ಪ್ರಜಾವಾಣಿ’ ಸೆಲೆಬ್ರಿಟಿ ಲೈವ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹಾಸ್ಯ ಭಾಷಣಕಾರ ಪ್ರೊ.ಎಂ.ಕೃಷ್ಣೇಗೌಡ, ಎಂದಿನ ಹಾಸ್ಯ ದಾಟಿಯಲ್ಲಿಯೇ ದೇಶದ ಸದ್ಯದ ಆಗು–ಹೋಗುಗಳ ಕುರಿತೂ ಗಂಭೀರವಾದ ಚಿಕಿತ್ಸಕ ಮಾತುಗಳನ್ನಾಡಿದರು.



ಪ್ರೊ.ಎಂ.ಕೃಷ್ಣೇಗೌಡ

ಪ್ರಜಾವಾಣಿ ಸೆಲೆಬ್ರಿಟಿ LIVE

‘ನಾವು ಮಾತು ಸೋತ ಭಾರತದಲ್ಲಿದ್ದೇವೆ. ಜನರಲ್ಲಿ ಔದಾರ್ಯ, ಪ್ರಾಮಾಣಿಕತೆ ಮಾಯವಾಗಿದೆ. ಮಾತಿಗೆ ತಕ್ಕ ಹಾಗೆ ಬದುಕುತ್ತಿಲ್ಲ. ಜನರು ಮನಸ್ಸನ್ನು ಉದಾರವಾಗಿಟ್ಟುಕೊಂಡಾಗ ಸಮಾಜ ಸೌಖ್ಯವಾಗಿರುತ್ತದೆ’ ಎಂದು ಪ್ರತಿಪಾದಿಸಿದರು.

‘ವಿಮರ್ಶಕರಲ್ಲಿ ಜನಪರರು ಕಡಿಮೆ. ಅವರಿಗೆ ಸಂಘಟನೆಯಾಗಿ ಚಾಚಿಕೊಳ್ಳುವ ಶಕ್ತಿ ಇಲ್ಲ. ಇರುವ ಮೂರ್ನಾಲ್ಕು ಜನರಿಗೆ ಪ್ರತಿಕ್ರಿಯೆ ನೀಡಲು ಆಗುತ್ತಿಲ್ಲ– ಬಿಡುತ್ತಿಲ್ಲ. ನಾನು ಸುಪ್ರಭಾತದ ಟ್ಯೂನ್‌ನಲ್ಲಿ ಅಣಕು ಹಾಸ್ಯ ಹೇಳಿದಾಗ ವಿರೋಧ ವ್ಯಕ್ತವಾಯಿತು. ಹಾಡು– ಸಂಗೀತವೊಂದು ಇಡೀ ಸಂಸ್ಕೃತಿ, ಪರಂಪರೆಯನ್ನು ನಾಶ ಮಾಡುತ್ತದೆ ಎನ್ನುವುದೇ ಬಾಲಿಶ. ಅಂಥವರಿಗೆ ಪ್ರತಿಕ್ರಿಯೆ ನೀಡಬೇಕು ಎಂದು ನನಗೆ ಅನಿಸುವುದೂ ಇಲ್ಲ. ಸ್ವವಿಮರ್ಶೆ ಇಲ್ಲದಿದ್ದರೆ ಯಾವುದೇ ಪಕ್ಷ, ಗುಂಪು, ಸಂಘಟನೆ ಉದ್ಧಾರವಾಗುವುದಿಲ್ಲ’ ಎಂದು ಹೇಳಿದರು.

’ರಾಜಕೀಯದಿಂದ ದೂರ ಇರಬೇಕಿದ್ದ ಸಾಹಿತಿ ಕಲಾವಿದರೂ ಒಂದು ಪಕ್ಷದ ಬಾವುಟ ಹಿಡಿದಿದ್ದಾರೆ. ಅವರಿಗೆ ಪಕ್ಷದ ಹುಳುಕುಗಳು ಕಾಣುವುದೇ ಇಲ್ಲ. ನಮ್ಮ ಚೌಕಟ್ಟನ್ನು ದಾಟುವ ಪ್ರಯತ್ನ ಮಾಡುತ್ತಿಲ್ಲ. ಪೂರ್ವಗ್ರಹಗಳಲ್ಲಿ ಹೂತು ಹೋಗಿದ್ದೇವೆ. ಮನುಷ್ಯ ವಾಸ್ತವವಾದಿಯಾಗುತ್ತಿದ್ದಾನೆ. ಏನು ಮಾಡಿದರೂ ಅಧಿಕಾರಕ್ಕಾಗಿಯೇ. ಎಲ್ಲವೂ ವಾಣಿಜ್ಯಮಯವಾಗಿದೆ. ವಾಣಿಜ್ಯ ಯಶಸ್ಸನ್ನು ಪಡೆದರೆ ಸಾಕು ಎಂಬ ಮನೋಭಾವ ಹಾಸ್ಯಗಾರರು ಸೇರಿದಂತೆ ಎಲ್ಲರಿಗೂ ಬಂದಿದೆ’ ಎಂದರು.

‘ಜನಪದರ ವಿವೇಕವು ಸಾಕ್ಷರತೆಯ ಆಚೆಗೂ ಇದೆ. ಶ್ರಮ ಸಮಾಜದ ಜ್ಞಾನದ ಹರಿವು ಅವರ ಭಾಷಾ ಸೊಗಡಿನಲ್ಲಿದೆ. ಶುದ್ಧ ಕನ್ನಡವೆನ್ನುವವರ ಮಾತನ್ನು ಕೇಳಲು ಆಗುವುದಿಲ್ಲ. ಕಿವಿ ಉರಿಯುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಾಸ್ಯ ಮಾಡದ ಸ್ಥಿತಿ...

‘ಯಾರು ಯಾರನ್ನೂ ಹಾಸ್ಯ ಮಾಡದ ಸ್ಥಿತಿಗೆ ಬಂದಿದ್ದೇವೆ. ಯಾರು ಬೇಜಾರಾಗುತ್ತಾರೋ.. ಯಾರಿಗೆ ನೋವಾಗುತ್ತದೋ.. ಎನ್ನುವಂತೆ ಮಾತನಾಡುತ್ತಿದ್ದೇವೆ. ಬಿಡುಬೀಸಾಗಿ ಹಾಸ್ಯ ಮಾಡುವವರು, ತಾಳಿಕೊಂಡು ಆನಂದಿಸುವವರು ಇಲ್ಲವಾಗಿದ್ದಾರೆ. ಈಗಿರುವುದೆಲ್ಲ ಲೆಕ್ಕಾಚಾರದ ಹಾಸ್ಯ. ಧರ್ಮ, ಜಾತಿ, ಪಂಥದ ಕುರಿತು ಪ್ರಶ್ನಿಸಿದರೆ, ಹಾಸ್ಯ ಮಾಡಿದರೆ ತಡೆದುಕೊಳ್ಳುವವರು ಈಗಿಲ್ಲ. ವಿದೇಶದಲ್ಲಿರುವ ಕನ್ನಡಿಗರಲ್ಲೂ ಭಿನ್ನಭೇದ ನುಸುಳಿದೆ’ ಎಂದು ಕೃಷ್ಣೇಗೌಡ ಹೇಳಿದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

18ರಿಂದ ‘ಕಪ್ಪೆ ಹಬ್ಬ’

ಶಿವಮೊಗ್ಗ: ಅಳಿವಿನಂಚಿನಲ್ಲಿರುವ ಪಶ್ಚಿಮಘಟ್ಟದ ಕಪ್ಪೆ ಪ್ರಭೇದಗಳ ಉಳಿವಿಗೆ ಜಾಗೃತಿ ಮೂಡಿಸಲು ಅರಣ್ಯ ಇಲಾಖೆಯು ಸಾಗರ ತಾಲ್ಲೂಕಿನ ಮುಪ್ಪಾನೆಯಲ್ಲಿ ಡಿ. 18 ಹಾಗೂ 19ರಂದು ‘ಕಪ್ಪೆ ಹಬ್ಬ’ ಆಯೋಜಿಸಿದೆ.

ಒಕ್ಕಲಿಗರ ಸಂಘ: ಚುನಾವಣೆ ಇಂದು

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಯ 35 ಸ್ಥಾನಗಳಿಗೆ ಭಾನುವಾರ (ಡಿ. 12) ಚುನಾವಣೆ ನಡೆಯಲಿದೆ. ಬೆಳಿಗ್ಗೆ 7 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ, ಡಿ. 15ರಂದು ಮತ ಎಣಿಕೆ ನಡೆಯಲಿದೆ.

ಒಕ್ಕಲಿಗ ಸಮುದಾಯದ ಘಟಾನುಘಟಿ ಮುಖಂಡರು ‘ಗುಂಪು’ ಕಟ್ಟಿಕೊಂಡು ಅಖಾಡಕ್ಕೆ ಇಳಿದಿದ್ದಾರೆ. ವಿಧಾನ ಪರಿಷತ್ ಬಿಜೆಪಿ ಸದಸ್ಯ ಅ. ದೇವೇಗೌಡ, ನಿವೃತ್ತ ಕುಲಪತಿ ಕೆ. ನಾರಾಯಣಗೌಡ, ವೈದ್ಯರಾದ ಡಾ. ಆಂಜಿನಪ್ಪ, ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಕೆಂಚಪ್ಪಗೌಡ, ಸಂಘದ ಮಾಜಿ ನಿರ್ದೇಶಕ ಪ್ರೊ. ನಾಗರಾಜ್, ನಿವೃತ್ತ ಪೊಲೀಸ್ ಅಧಿಕಾರಿ ಎಸ್. ಕೆ. ಉಮೇಶ್, ವಕೀಲ ಎನ್.ಎಂ. ಸೊಣ್ಣೇಗೌಡ ಮೊದಲಾದವರು ತಮ್ಮದೇ ಸಿಂಡಿಕೇಟ್ ಮಾಡಿಕೊಂಡು ಸ್ಪರ್ಧೆಯಲ್ಲಿದ್ದಾರೆ.

ಸಂಘದಲ್ಲಿ ರಾಜ್ಯದಾದ್ಯಂತ ಅರ್ಹ 5.21 ಲಕ್ಷ ಸದಸ್ಯರಿದ್ದಾರೆ. ಬೆಂಗಳೂರು ಮಹಾನಗರ ಸೇರಿ ಮೂರು ಜಿಲ್ಲೆಗಳಲ್ಲಿ 15 ಸ್ಥಾನಗಳಿಗೆ 1.92 ಲಕ್ಷ ಮತದಾರರು ಮತ ಚಲಾಯಿಸಲಿದ್ದಾರೆ. ಉಳಿದ 20 ಸ್ಥಾನಗಳಿಗೆ ಇತರೆ ಜಿಲ್ಲೆಗಳಿಂದ ಆಯ್ಕೆ ನಡೆಯಲಿದೆ.

ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯನ್ನು ಒಳಗೊಂಡಂತೆ 15 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈ ಮೂರೂ ಜಿಲ್ಲೆಗಳಿಂದ ಒಟ್ಟು 141 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಹಿಂದಿನ ಅವಧಿಯಲ್ಲಿ 3–4 ಬಾರಿ ಸಮಿತಿಯಲ್ಲಿ ಇದ್ದವರ ಜೊತೆಗೆ, ಈ ಬಾರಿ ಹೊಸಬರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿದಿದ್ದಾರೆ.

ಶಿಕ್ಷಕನ ಕಾಲಿಗೆ ಬಿದ್ದು ಕ್ಷಮೆ ಕೋರಿದ ಪುಂಡ ವಿದ್ಯಾರ್ಥಿಗಳು

ಚನ್ನಗಿರಿ: ತಾಲ್ಲೂಕಿನ ನಲ್ಲೂರು ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಹಿಂದಿ ಶಿಕ್ಷಕ ಪ್ರಕಾಶ್ ಭೋಗೇರ್ ಅವರ ತಲೆಗೆ ಕಸದ ಬುಟ್ಟಿ ಹಾಕಿ ಪುಂಡಾಟಿಕೆ ನಡೆಸಿದ್ದ ಆರು ವಿದ್ಯಾರ್ಥಿಗಳು ಶನಿವಾರ ಶಾಲೆಯಲ್ಲಿ ಶಿಕ್ಷಕರ ಕಾಲಿಗೆ ಬಿದ್ದು ಕ್ಷಮೆಕೋರಿದ್ದಾರೆ.

‘ಶಾಲಾ ಕೊಠಡಿಯೊಳಗೆ ಗುಟ್ಕಾ ತರುವುದು ಸರಿಯಲ್ಲ’ ಎಂದು ಡಿಸೆಂಬರ್ 3ರಂದು ಬುದ್ಧಿವಾದ ಹೇಳಿದ್ದ ಶಿಕ್ಷಕರ ತಲೆ ಮೇಲೆಯೇ ಕಸದ ಬುಟ್ಟಿಯನ್ನು ಹಾಕಿ ಕೀಟಲೆ ಮಾಡಿದ್ದ ವಿಡಿಯೊ ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಇದೀಗ ಗ್ರಾಮದ ಮುಖಂಡರು ಹಾಗೂ ಪೋಷಕರ ಸಮ್ಮುಖದಲ್ಲಿ ಪುಂಡ ವಿದ್ಯಾರ್ಥಿಗಳು ಶಿಕ್ಷಕರ ಕಾಲಿಗೆರಗಿ ಕ್ಷಮೆಯಾಚಿಸಿದ ವಿಡಿಯೊ ಸಹ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಘಟನೆ ಬೆಳಕಿಗೆ ಬಂದ ಬಳಿಕ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ ನೇತೃತ್ವದಲ್ಲಿ ಶುಕ್ರವಾರ ಶಾಲೆಯಲ್ಲಿ ಗ್ರಾಮಸ್ಥರು ಸಭೆ ನಡೆಸಿದ್ದರು. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಶಾಲೆಯಿಂದ ಉಚ್ಚಾಟಿಸಬಾರದು ಎಂದು ಪೋಷಕರು ಮನವಿ ಮಾಡಿದ್ದರು. ಹೀಗಾಗಿ ‘ಪೊಲೀಸ್ ಠಾಣೆಗೆ ದೂರು ನೀಡಿ, ವಿದ್ಯಾರ್ಥಿಗಳಿಗೆ ಎಚ್ಚರಿಕೆ ಕೊಡಬೇಕು’ ಎಂದು ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಪುಂಡಾಟಿಕೆ ನಡೆಸಿದ್ದ ವಿದ್ಯಾರ್ಥಿಗಳನ್ನು ಗ್ರಾಮದ ಮುಖಂಡರು ಹಾಗೂ ಪೋಷಕರು ಶನಿವಾರ ಬೆಳಿಗ್ಗೆ ಹಿಂದಿ ಶಿಕ್ಷಕ ಪ್ರಕಾಶ್ ಬೋಗೇರ್ ಅವರ ಬಳಿಗೆ ಕರೆ ತಂದರು. ವಿದ್ಯಾರ್ಥಿಗಳನ್ನು ತರಾಟೆಗೆ ತೆಗೆದುಕೊಂಡ ಗ್ರಾಮದ ಮುಖಂಡರು, ಕ್ಷಮೆ ಕೋರುವಂತೆ ಸೂಚಿಸಿದರು. ‘ನಾವು ಮಾಡಿದ್ದು ತಪ್ಪು. ನಮ್ಮನ್ನು ಕ್ಷಮಿಸಿ’ ಎಂದು ವಿದ್ಯಾರ್ಥಿಗಳು ಶಿಕ್ಷಕರ ಕಾಲಿಗೆ ಬಿದ್ದು ಕ್ಷಮೆ ಕೋರಿದರು.

ಶಿಕ್ಷಕ ಪ್ರಕಾಶ್ ಭೋಗೇರ್ ಮಾತನಾಡಿ, ‘ವಿದ್ಯಾರ್ಥಿಗಳು ಶಾಲೆಗೆ ಓದುವುದಕ್ಕಾಗಿ ಬರುತ್ತಾರೆ. ಶಾಲೆ ಗುಡಿ ಇದ್ದಂತೆ. ಗುಡಿಯನ್ನು ಅಪವಿತ್ರ ಮಾಡಿದಾಗ ಶಿಕ್ಷಕರು ಬೈಯುವುದು ಸಹಜ. ಇದನ್ನು ಅರಿತುಕೊಳ್ಳದೇ ಹುಡುಗಾಟಿಕೆ ಬುದ್ಧಿಯನ್ನು ಹೊಂದಿರುವ ಈ ವಿದ್ಯಾರ್ಥಿಗಳು ನನಗೆ ಕಿರುಕುಳ ನೀಡಿದ್ದಾರೆ. ಮುಂದಿನ ಭವಿಷ್ಯದ ದೃಷ್ಟಿಯಿಂದ ಅವರ ತಪ್ಪನ್ನು ಮನ್ನಿಸಿದ್ದೇನೆ. ಮುಂದೆ ಇಂತಹ ಘಟನೆಗಳು ನಡೆಯಬಾರದು’ ಎಂದು ಹೇಳಿದರು.

ಸಂವಿಧಾನ ರಕ್ಷಣೆಗೆ ನ್ಯಾಯಾಂಗ ಕ್ರಿಯಾಶೀಲವಾಗಿರಬೇಕು: ನಿವೃತ್ತ ನ್ಯಾ. ಕೆ. ಚಂದ್ರು

‘ಬದಲಾಗದ ಬ್ರಿಟಿಷ್ ಕಾಲದ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನ ರಕ್ಷಿಸುವ ಮತ್ತು ಅದರ ಆಶಯಗಳನ್ನು ಎತ್ತಿ ಹಿಡಿಯುವ ಕೆಲಸದಲ್ಲಿ ನ್ಯಾಯಾಂಗ ಯಾವತ್ತೂ ಕ್ರಿಯಾಶೀಲವಾಗಿರಬೇಕು’ ಎಂದು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಚಂದ್ರು ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ ‘ಮಾನವ ಹಕ್ಕುಗಳು’ ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಜೈಭೀಮ್’ ಚಲನಚಿತ್ರಕ್ಕೆ ಸ್ಫೂರ್ತಿಯಾಗಿರುವ ಚಂದ್ರು ಅವರು, ಸಮಾಜದ ಮೇಲೆ ಚಲನಚಿತ್ರವೊಂದು ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದನ್ನು ವಿವರಿಸಿದರು.

‘ದೇಶದಲ್ಲಿ ಬ್ರಿಟಿಷರ ಕಾಲದಲ್ಲಿದ್ದ ವ್ಯವಸ್ಥೆಗಳನ್ನು ಇನ್ನೂ ಮುಂದುವರಿಸಲಾಗಿದೆ. ಹೀಗಾಗಿಯೇ ಪೊಲೀಸ್ ಠಾಣೆಗಳು ನ್ಯಾಯಾಲಯಗಳಾಗುತ್ತಿವೆ ಮತ್ತು ಇನ್‌ಸ್ಪೆಕ್ಟರ್‌ಗಳು ನ್ಯಾಯಾಧೀಶರ ರೀತಿ ವರ್ತಿಸುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಬ್ರಿಟಿಷರು 120ಕ್ಕೂ ಹೆಚ್ಚು ರೀತಿಯಲ್ಲಿ ಚಿತ್ರಹಿಂಸೆ ನೀಡುವ ಪದ್ಧತಿ ಅನುಸರಿಸುತ್ತಿದ್ದರು. ಜೈಭೀಮ್ ಚಲನಚಿತ್ರದಲ್ಲಿ ತೋರಿಸಿರುವುದು ಶೇಕಡ 10ರಷ್ಟು ಹಿಂಸೆಯ ಚಿತ್ರಣ ಮಾತ್ರ. ಪೊಲೀಸರ ಮನಸ್ಥಿತಿ ಬದಲಾಗಬೇಕಾಗಿದೆ. ಆದರೆ, ಪೊಲೀಸರಿಗೆ ಸತ್ಯವನ್ನು ಶೋಧಿಸುವುದು ಬೇಕಾಗಿಲ್ಲ’ ಎಂದರು.

‘ಬ್ರಿಟಿಷರ ಕಾಲದಲ್ಲಿ ಅನೇಕ ಬುಡಕಟ್ಟು ಸಮುದಾಯಗಳನ್ನು ಕ್ರಿಮಿನಲ್ ಪಟ್ಟಿಗೆ ಸೇರಿಸಲಾಗಿತ್ತು. ಯಾವುದೇ ಅಪರಾಧಗಳು ನಡೆದಾಗ ಈ ಸಮುದಾಯದ ಎಲ್ಲರೂ ಪೊಲೀಸ್ ಠಾಣೆಗೆ ಬರಬೇಕಾಗುತ್ತಿತ್ತು. ಠಾಣೆಗೆ ಬರದಿದ್ದರೆ ಅಂತಹ ವ್ಯಕ್ತಿಯನ್ನೇ ಅಪರಾಧಿ ಎಂದು ಬಿಂಬಿಸಲಾಗುತ್ತಿತ್ತು. ಸ್ವಾತಂತ್ರ್ಯ ದೊರೆತ ಬಳಿಕವೂ ಇದೇ ರೀತಿಯ ಪರಿಸ್ಥಿತಿ ಮುಂದುವರಿದಿದೆ. ಬುಡಕಟ್ಟು ಸಮುದಾಯದ ಜನರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುವುದು, ಎನ್‌ಕೌಂಟರ್ ಮಾಡುವುದು, ಲಾಕಪ್‌ನಲ್ಲಿ ಹಿಂಸಿಸುವುದು ನಿರಂತರವಾಗಿ ನಡೆಯುತ್ತಲೇ ಇದೆ’ ಎಂದರು.

1990ರಲ್ಲಿ ನಡೆದ ಮಹಿಳೆಯೊಬ್ಬರ ಅತ್ಯಾಚಾರ ಮತ್ತು ಆಕೆಯ ಪತಿಯ ಹತ್ಯೆಯ ಪ್ರಕರಣ ವಿವರಿಸಿದ ಅವರು, ’ಮಹಿಳೆ ಮದ್ರಾಸ್ ಹೈಕೋರ್ಟ್‌ನಲ್ಲಿ ನ್ಯಾಯಕ್ಕಾಗಿ ಅರ್ಜಿ ಸಲ್ಲಿಸಿದ್ದರಿಂದ ಆಗ ನ್ಯಾಯಮೂರ್ತಿಯಾಗಿದ್ದ ಪಿ.ಎಸ್. ಮಿಶ್ರಾ ಅವರು ತನಿಖೆಗೆ ಆದೇಶಿಸಿದರು. ಬಳಿಕ, ಪೊಲೀಸರ ವಿರುದ್ಧ ಆರೋಪಪಟ್ಟಿ ಹೊರಿಸಲಾಯಿತು. ಜತೆಗೆ, ಮಹಿಳೆಗೆ ಸರ್ಕಾರಿ ಉದ್ಯೋಗ ಮತ್ತು ಪರಿಹಾರ ನೀಡಲಾಯಿತು. ಇದು ಅಪರೂಪದ ಪ್ರಕರಣ. ಏಕೆಂದರೆ ತಪ್ಪು ಮಾಡಿದ್ದರೂ ಪೊಲೀಸರಿಗೆ ಶಿಕ್ಷೆ ನೀಡಿರುವುದು ವಿರಳ’ ಎಂದರು.

ಜನಪ್ರಕಾಶನ, ಅಖಿಲ ಭಾರತ ವಕೀಲರ ಸಂಘ, ದಲಿತ ಸಂಘರ್ಷ ಸಮಿತಿ, ದಲಿತ ಹಕ್ಕುಗಳ ಸಮಿತಿ ಕಾರ್ಯಕ್ರಮ ಆಯೋಜಿಸಿತ್ತು.



‘ಮಾನವ ಹಕ್ಕುಗಳು’ ಕೃತಿಯನ್ನು ಬಿಡುಗಡೆ ಮಾಡಿದ ನಿವೃತ್ತ ನ್ಯಾ. ಕೆ. ಚಂದ್ರು ಅವರು ಪ್ರತಿಯನ್ನು ಕೃತಿಯ ಲೇಖಕ ನಿವೃತ್ತ ನ್ಯಾ.ಎಚ್.ಎನ್. ನಾಗಮೋಹನ ದಾಸ್ ಅವರಿಗೆ ನೀಡಿದರು. (ಎಡದಿಂದ) ರಾಜಶೇಖರ ಮೂರ್ತಿ, ಡಿಎಸ್‌ಎಸ್ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಲೇಖಕಿ ಬಿ.ಟಿ. ಲಲಿತಾ ನಾಯಕ್, ಅಖಿಲ ಭಾರತ ವಕೀಲರ ಸಂಘದ ರಾಜ್ಯ ಸಮಿತಿ ಅಧ್ಯಕ್ಷ ಎಸ್. ಶಂಕರಪ್ಪ, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಇದ್ದಾರೆ –ಪ್ರಜಾವಾಣಿ ಚಿತ್ರ

‘ದುಂದು ವೆಚ್ಚದ ತುಂಗಾ ಆರತಿ ಬೇಡ’

ದಾವಣಗೆರೆಯ ಹರಿಹರದಲ್ಲಿ ತುಂಗಾ ಆರತಿ ನಡೆಸಲು ₹30 ಕೋಟಿ ವೆಚ್ಚದಲ್ಲಿ ಮಂಟಪಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿರುವ ಹೇಳಿಕೆಗೆ ಲೇಖಕಿ ಬಿ.ಟಿ. ಲಲಿತಾ ನಾಯಕ್ ಆಕ್ಷೇಪ ವ್ಯಕ್ತಪಡಿಸಿದರು. ‘ಸರ್ಕಾರದ ಹಣ ಈ ರೀತಿ ಪೋಲು ಮಾಡುವುದು ಸರಿಯೇ? ಯಾವುದೋ ಮಠಾಧೀಶರ ಬಗ್ಗೆ ಪ್ರೀತಿ ತೋರಿಸಲು ಸಾರ್ವಜನಿಕರ ಹಣವನ್ನು ಖರ್ಚು ಮಾಡುವುದು ಏಕೆ? ಮುಖ್ಯಮಂತ್ರಿ ಅವರು ತಕ್ಷಣ ಈ ಯೋಜನೆ ಕೈಬಿಡಬೇಕು’ ಎಂದು ಆಗ್ರಹಿಸಿದರು.

ಸತತ ಹೋರಾಟದ ಬಳಿಕ ಮೂಢನಂಬಿಕೆ ನಿಷೇಧ ಕಾಯ್ದೆ ಜಾರಿಗೆ ಬಂತು. ಆದರೆ, ಒಂದೇ ಒಂದು ಪ್ರಕರಣವೂ ಈ ಕಾಯ್ದೆಯಡಿ ದಾಖಲಾಗಿಲ್ಲ

ಎಚ್.ಎನ್. ನಾಗಮೋಹನ ದಾಸ್
ನಿವೃತ್ತ ನ್ಯಾಯಮೂರ್ತಿ

ಸಂಕ್ಷಿಪ್ತ ಸುದ್ದಿ

ಕ್ರೈಸ್ತ ಧರ್ಮಗುರು ಮೇಲೆ ಹಲ್ಲೆ ಯತ್ನ

ಬೆಳಗಾವಿ: ಇಲ್ಲಿನ ಬಾಕ್ಸೈಟ್ ರಸ್ತೆಯ ಸಂತ ಜೋಸೆಫ್ ದಿ ವರ್ಕರ್ ಚರ್ಚ್‌ನ ಧರ್ಮಗುರು ಫಾ. ಫ್ರಾನ್ಸಿಸ್ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ಶನಿವಾರ ತಲ್ವಾರ್‌ನಿಂದ ಹಲ್ಲೆಗೆ ಯತ್ನಿಸಿದ್ದಾನೆ.

ಫಾದರ್ ಅಪಾಯದಿಂದ ಪಾರಾಗಿದ್ದಾರೆ. ವ್ಯಕ್ತಿ ಬೀಸಿದ ತಲವಾರ್‌ನಿಂದ ತಪ್ಪಿಸಿಕೊಂಡ ಫಾದರ್ ಮೊದಲ ಮಹಡಿಯಿಂದ ಕೆಳಕ್ಕೆ ಓಡಿ ಬಂದಿದ್ದಾರೆ. ಕೂಡಲೇ ಅಲ್ಲಿದ್ದವರು ರಕ್ಷಣೆಗೆ ಬರುತ್ತಿದ್ದಂತೆಯೇ ಆ ವ್ಯಕ್ತಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತಾಂತರ ನಿಷೇಧ ಮಸೂದೆಗೆ ಕಾಂಗ್ರೆಸ್ ವಿರೋಧ:ಡಿಕೆಶಿ

ಬೆಂಗಳೂರು: ‘ಮತಾಂತರ ನಿಷೇಧ ಕಾಯ್ದೆ ತರಲು ತಯಾರಿ ನಡೆಸಿರುವ ರಾಜ್ಯ ಸರ್ಕಾರ, ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡಿಸಲು ನಿರ್ಧರಿಸಿದೆ. ಸರ್ಕಾರದ ಈ ನಡೆಯನ್ನು ಪಕ್ಷ ವಿರೋಧಿಸಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.


ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಮಸೂದೆಯನ್ನು ಬಿಜೆಪಿ ಅಧಿಕೃತವಾಗಿ ಅಥವಾ ಖಾಸಗಿ ಯಾಗಿ ಮಂಡಿಸಲು ಮುಂದಾಗಿದೆ’ ಎಂದು ದೂರಿದರು.

ಸುದ್ದಿ 2 ನಿಮಿಷ

ಮೊಟ್ಟೆ: ಯಾರ ಮೇಲೂ ಒತ್ತಡ ಹೇರಿಲ್ಲ– ಸಚಿವ ನಾಗೇಶ್

ಮಂಡ್ಯ: ‘ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆ ಜೊತೆಗೆ ಬಾಳೆಹಣ್ಣನ್ನೂ ವಿತರಿಸಲಾಗುತ್ತಿದೆ. ರಾಜ್ಯದ ವಿವಿಧೆಡೆ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದ ವರದಿ ಹೇಳಿದೆ. ಹೀಗಾಗಿ ಪೌಷ್ಟಿಕಾಂಶವನ್ನು ಹೆಚ್ಚಿಸುವುದು ಅವಶ್ಯ’ ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮಕ್ಕಳ ಅಪೌಷ್ಟಿಕತೆಯನ್ನು ಹೋಗಲಾಡಿಸಲು ತಜ್ಞರ ಸಲಹೆ ಮೇರೆಗೆ ಮೊಟ್ಟೆ ವಿತರಿಸಲಾಗುತ್ತಿದೆ. ಯಾರ ಮೇಲೂ ಒತ್ತಡ ಹೇರಿಲ್ಲ. ಮೊಟ್ಟೆ, ಬಾಳೆಹಣ್ಣಿನೊಂದಿಗೆ ಇತರ ಪೌಷ್ಟಿಕಾಂಶವುಳ್ಳ ಪದಾರ್ಥಗಳನ್ನೂ ಆಯ್ಕೆ ಮಾಡಲಾಗಿದ್ದು, ತಜ್ಞರು ಒಪ್ಪಿದರೆ ಅವುಗಳನ್ನು ನೀಡಲಾಗುವುದು’ ಎಂದರು.



ಬೋಧಕ ಹುದ್ದೆ ನೇಮಕಕ್ಕೆ ತಡೆ

ಹೊಸಪೇಟೆ (ವಿಜಯನಗರ): 17 ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಸದಂತೆ ಧಾರವಾಡ ಹೈಕೋರ್ಟ್ ಸಂಚಾರಿ ಪೀಠವು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸೂಚಿಸಿದೆ.

ಹುದ್ದೆಗಳ ಭರ್ತಿಯಲ್ಲಿ ಮೀಸಲಾತಿ, ಮಹಿಳಾ ಮೀಸಲಾತಿ ನಿಯಮ ಪಾಲಿಸಿಲ್ಲ ಎಂದು ವೈಶಾಲಿಬಾಯಿ, ಖಾನಂ ಅಕ್ತರ್ ಎಂಬುವರು ನ್ಯಾಯಾಲಯದ ಮೊರೆ ಹೋಗಿದ್ದರು. ಡಿ.21ಕ್ಕೆ ವಿಚಾರಣೆ ಕಾಯ್ದಿರಿಸಿರುವ ನ್ಯಾಯಾಲಯವು, ಈ ಸಂಬಂಧ ಯಾವುದೇ ತೀರ್ಮಾನ ಕೈಗೊಳ್ಳದಂತೆ ಡಿ.8ರ ಆದೇಶದಲ್ಲಿ ವಿಶ್ವವಿದ್ಯಾಲಯಕ್ಕೆ ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	6,946	8,241
ಹಾರಂಗಿ	2,859	2,854.72	60	900
ಕಬಿನಿ	2284.00	2,283.66	930	700
ಹೇಮಾವತಿ	2,922	2,913.32	1,421	2,870
ಲಿಂಗನಮಕ್ಕಿ	1,819	1,811.15	764	5268
ಸೂಪಾ (ಮೀ)	564	554.20	00	4,294
ಮಾಣಿ	594.36	586.26	463	00
ತುಂಗಭದ್ರಾ	1,633	1,633	7,059	7,179
ಮಲಪ್ರಭಾ	2079.50	2,077.25	243	1,019
ಘಟಪ್ರಭಾ	2,175	2,166.16	172	172
ಭದ್ರಾ	186	186	1,057	1,057
ಆಲಮಟ್ಟಿ (ಮೀ)	519.60	519.33	9,137	1,313
ನಾರಾಯಣಪುರ (ಮೀ)	492.25	491.81	805	7494

* ನೆಲಮಟ್ಟದಿಂದ

ಅಧಿವೇಶನಕ್ಕೆ ಪ್ರತಿಭಟನೆಗಳ ಬಿಸಿ

ಪ್ರಜಾವಾಣಿ ವಾರ್ತೆ


ಬೆಳಗಾವಿ: ಇದೇ 13ರಿಂದ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ವಿಧಾನಮಂಡಲ ಚಳಿಗಾಲ ಅಧಿವೇಶನಕ್ಕೆ ಪ್ರತಿಭಟನೆಗಳ ಬಿಸಿ ತಟ್ಟಲಿದೆ.

ಪ್ರತಿ ಬಾರಿ ಅಧಿವೇಶನ ನಡೆದಾಗಲೂ ನಾನಾ ಬೇಡಿಕೆಗಳನ್ನು ಹೊತ್ತು ರಾಜ್ಯದ ವಿವಿಧೆಡೆಯಿಂದ ಪ್ರತಿಭಟನಕಾರರ ದಂಡೇ ಬೆಳಗಾವಿಯತ್ತ ಹರಿದು ಬರುತ್ತದೆ. ಈ ಬಾರಿಯೂ ವಿವಿಧ ಸಂಘಟನೆಗಳು ಪ್ರತಿಭಟನೆಗೆ ಸಜ್ಜಾಗಿದ್ದು, ಸರ್ಕಾರಕ್ಕೆ ‘ಬಿಸಿ’ ಮುಟ್ಟಿಸಲು ಯೋಜಿಸಿವೆ.

75 ಅರ್ಜಿ ಸಲ್ಲಿಕೆ: ರೈತರು, ಕಾರ್ಮಿಕರು, ದಲಿತ ಸಂಘಟನೆಗಳ ಮುಖಂಡರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು, ಕ್ರೈಸ್ತ ಸಮುದಾಯ, ಲಿಂಗಾಯತ ಪಂಚಮಸಾಲಿ, ಮಡಿವಾಳ ಸಮುದಾಯದವರು, ಸಾರಿಗೆ ನೌಕರರು ಸೇರಿ ವಿವಿಧ ಸಂಘಟನೆಗಳವರು ಪ್ರತಿಭಟನೆಗೆ ಅನುಮತಿ ಕೋರಿ 75 ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ 55 ಸಂಘಟನೆಗಳು ಪ್ರತಿಭಟಿಸಲಿದ್ದು, 20 ಸಂಘಟನೆಗಳು ಮನವಿ ಸಲ್ಲಿಸಲಿವೆ. ಕೆಲವರು ಪಾದಯಾತ್ರೆ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ್ರತಿಭಟನಕಾರರಿಗಾಗಿ ಸುವರ್ಣ ವಿಧಾನಸೌಧದ ಬಳಿಯ ಸುವರ್ಣ ಗಾರ್ಡನ್ ಬಳಿ ಆರು ಪೆಂಡಾಲ್ ಹಾಕಲಾಗಿದೆ. ಅಲ್ಲದೆ, ಕೊಂಡಸಕೊಪ್ಪ ಗ್ರಾಮದ ಗುಡ್ಡದಲ್ಲೂ ವ್ಯವಸ್ಥೆ ಮಾಡಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ಭಾನುವಾರ ಡಿಸೆಂಬರ್ 12, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹಿಮಂತ ಋತು ಮಾರ್ಗಶಿರ ಮಾಸ ಶುಕ್ಲಪಕ್ಷ ಪಕ್ಷ ಮಳೆ ನಕ್ಷತ್ರ ಜ್ಯೇಷ್ಠ ನವಮೀ ಗಂ. 42-40 (ರಾ. 11-42) ಭಾನುವಾರ ನಿತ್ಯ ನಕ್ಷತ್ರ ಉತ್ತರಾಭಾದ್ರ ಗಂ. 53-10 (ರಾ. 3-54) ಸಿದ್ಧಿ ನಾಮ ಯೋಗ ಗಂ. 10-36 ಬಾಲವ ಕರಣ ಗಂ. 12-49 ವಿಷ ಗಂ. 16-34 ಅಮೃತ ಗಂ 43-58 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00ರಿಂದ 1-30 : **ಸೂರ್ಯೋದಯ:** 6-35 **ಸೂರ್ಯಾಸ್ತ:** 5-50 **ಅದೃಷ್ಟ ಸಂಖ್ಯೆ:** 2, 7

ಮೇಷ: ಚಿನ್ನ–ಬೆಳ್ಳಿ ಆಭರಣ ವ್ಯವಹಾರದಲ್ಲಿ ಅಧಿಕ ಲಾಭ. ಮಹಿಳಾ ಉದ್ಯೋಗಿಗಳಿಗೆ ಯಶಸ್ಸು. ನ್ಯಾಯಾಲಯದಲ್ಲಿ ಯಶಸ್ಸು ದೊರೆಯಲಿದೆ. ಸಾಲಗಳಿಂದ ಮುಕ್ತಿ ಪಡೆದು ನೆಮ್ಮದಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಯಶಸ್ಸು.

ವೃಷಭ: ರಾಜಕೀಯ–ಸಾಮಾಜಿಕ ಕ್ಷೇತ್ರಗಳಲ್ಲಿರುವವರಿಗೆ ಹುದ್ದೆಗಳು ಪ್ರಾಪ್ತವಾಗುವ ಸಾಧ್ಯತೆ. ದೂರ ಪ್ರಯಾಣದ ಸಾಧ್ಯತೆ. ಲೇವಾದೇವಿ ವ್ಯವಹಾರವನ್ನು ದಿನದ ಮಟ್ಟಿಗೆ ಮಾಡದೆ ಇರುವುದೇ ಒಳ್ಳೆಯದು. ಶತ್ರು ಬಾಧೆಯಿಂದ ಮುಕ್ತಿ.

ಮಿಥುನ: ಕೆಲಸ–ಕಾರ್ಯಗಳಲ್ಲಿ ಉತ್ಸಾಹ, ಯಶಸ್ಸು ಒದಗಿಬರಲಿದೆ. ನೌಕರರಿಗೆ ಪದೋನ್ನತಿ ಸಾಧ್ಯತೆ.. ಆರ್ಥಿಕ ಲಾಭ, ಕೀರ್ತಿಯು ನಿಮ್ಮ ಪಾಲಿಗೆ ದೊರೆಯಲಿದೆ. ಆರೋಗ್ಯದ ವಿಚಾರದಲ್ಲಿ ಎಚ್ಚರ.

ಕರ್ಕಾಟಕ: ಸ್ನೇಹಿತರಿಗಾಗಿ ಕಾರ್ಯ ನಿರ್ವಹಿಸಿದಲ್ಲಿ ಯಶಸ್ಸು ಕಾಣುವಿರಿ. ಮಹಿಳೆಯರಿಗೆ ಮನೋಗತ ಈಡೇರುವುದಲ್ಲದೇ ಸಂತೃಪ್ತಿ ಮೂಡುವುದು. ನೌಕರಸ್ಥರಿಗೆ ಮೇಲಧಿಕಾರಿಗಳಿಂದ ಸಹಕಾರ.

ಸಿಂಹ: ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರೋತ್ಸಾಹ ಪ್ರಶಂಸೆಗಳು ದೊರಕಲಿವೆ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ದಾಂಪತ್ಯ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿಯ ಜೀವನ. ಇಷ್ಟಾರ್ಥ ಸಿದ್ಧಿ.

ಕನ್ಯಾ: ಗೃಹ ನಿರ್ಮಾಣ ಕಾರ್ಯದಲ್ಲಿ ಸ್ವಲ್ಪ ಮಟ್ಟಿನ ಅಡೆತಡೆಗಳುಂಟಾಗಬಹುದು. ಆಂತರಿಕ ಸಮಸ್ಯೆ ಪರಿಹಾರಕಂಡು ನೆಮ್ಮದಿ ಮೂಡುವುದು. ಮಹಿಳಾ ಕರಕುಶಲ ಕರ್ಮಿ, ಕಲಾವಿದರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ.

ತುಲಾ: ಮಹಿಳೆಯರಿಗೆ ವಿದ್ಯಾಭ್ಯಾಸದಲ್ಲಿ ಮತ್ತು ವೃತ್ತಿಗಳಲ್ಲಿ ಯಶಸ್ಸು. ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿ ಸಾಧನೆ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ, ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ. ಮಕ್ಕಳಿಂದ ವಿಶೇಷ ಸಂತೋಷದ ಸುದ್ದಿ.

ವೃಶ್ಚಿಕ: ಅಮೂಲ್ಯ ವಸ್ತುಗಳ ಸಂಗ್ರಹಣೆ. ಉದ್ಯಮಿಗಳಿಗೆ ಯಶಸ್ಸು. ಅಧಿಕಾರದಲ್ಲಿ ಪದೋನ್ನತಿಯ ಸಾಧ್ಯತೆ. ದೈನಂದಿನ ಕೆಲಸ–ಕಾರ್ಯಗಳಲ್ಲಿ ಯಶಸ್ಸು. ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ.

ಧನು: ಸಲಹೆ, ಸೂಚನೆಗಳಿಗೆ ಮಾನ್ಯತೆ ದೊರಕುವುದು. ವೃತ್ತಿಯಲ್ಲಿ ಜಾಗರೂಕರಾಗಿರಿ. ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಆಕಸ್ಮಿಕ ಧನಾಗಮನ. ಹೊಸ ಯೋಜನೆಗಳಲ್ಲಿ ಯಶಸ್ಸು. ಸಮಸ್ಯೆಗಳಿಂದ ಮುಕ್ತಿ.

ಮಕರ: ಮಹಿಳೆಯರು ಸಾಮಾಜಿಕ ಗೌರವಕ್ಕೆ ಪ್ರಾಪ್ತರಾಗುವರು. ವೈವಾಹಿಕ ಜೀವನದಲ್ಲಿ ಸಂತೃಪ್ತಿ. ಮಾತಿನಿಂದ ಧನಲಾಭ. ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ಅಭೀಷ್ಟಗಳ ಈಡೇರಿಕೆ. ಅಲಂಕಾರಿಕ ವಸ್ತುಗಳ ಖರೀದಿ

ಕುಂಭ: ಉದ್ಯೋಗ ಉದ್ಯಮಗಳಲ್ಲಿನ ಸಮಸ್ಯೆಗಳು ಪರಿಹಾರ. ಅನವಶ್ಯಕ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಒಳಿತಲ್ಲ. ಮಹಿಳೆಯರ ಆಶೋತ್ತರಗಳು ಈಡೇರಲಿವೆ. ಭೂಮಿಯಿಂದ ಧನಲಾಭ. ಕೃಷಿಯಲ್ಲಿ ಪ್ರಗತಿ.

ಮೀನ: ಸಹೋದ್ಯೋಗಿಗಳ ಸಹಕಾರದಿಂದ ಕಾರ್ಯಕ್ಷೇತ್ರದಲ್ಲಿ ಯಶಸ್ಸು ನೆಮ್ಮದಿ. ಉದರ ಶೂಲೆಯಿಂದ ಮುಕ್ತಿ. ನ್ಯಾಯಾಲಯದ ಸಮಸ್ಯೆಗಳು ಇತ್ಯರ್ಥವಾಗುವ ಸಾಧ್ಯತೆ. ಸರ್ಕಾರದಿಂದ ಆರ್ಥಿಕ ಸಹಾಯ

ನಿಮ್ಮ ಜನ್ಮದಿನ 12-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ವೃತ್ತಿಯಲ್ಲಿ ಜೀವನದಲ್ಲಿ ಪದೋನ್ನತಿಯ ಸಾಧ್ಯತೆ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪರಿಶ್ರಮದಿಂದ ಪ್ರಗತಿ. ಆರ್ಥಿಕ ಪ್ರಗತಿಯಿಂದಾಗಿ ನೆಮ್ಮದಿ. ಸಂತೃಪ್ತಿಯ ದಾಂಪತ್ಯ. ಮಕ್ಕಳಿಂದಾಗಿ ಹೆಚ್ಚಿನ ಗೌರವಾದರಗಳ ಪ್ರಾಪ್ತಿ.

25 ವರ್ಷಗಳ ಹಿಂದೆ

ಗುರುವಾರ, 12-12-1996

● **ವಿರೋಧ ಪಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೇಡಿಕೆ**

ಬೆಂಗಳೂರು, ಡಿ. 11– ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ನೇತೃತ್ವದ ಕರ್ನಾಟಕ ಕಾಂಗ್ರೆಸ್ ಪಕ್ಷದ (ಕೆಸಿಪಿ) ವಿಲೀನದೊಂದಿಗೆ ಶಾಸಕರ ಬಲವನ್ನು 41ಕ್ಕೆ ಹೆಚ್ಚಿಸಿಕೊಂಡಿರುವ ಕಾಂಗ್ರೆಸ್ ತನಗೆ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸ್ಥಾನ ನೀಡುವಂತೆ ಕೋರಿ ಸ್ಪೀಕರ್‌ಗೆ ಪತ್ರ ಬರೆಯಲಿದೆ.

ವಿಧಾನಸಭೆಯಲ್ಲಿ 36 ಶಾಸಕರನ್ನು ಹೊಂದಿರುವ ತಮ್ಮ ಪಕ್ಷಕ್ಕೆ ಕೆಸಿಪಿಯ 5 ಶಾಸಕರು ಸೇರ್ಪಡೆಯಾಗಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ದೊಡ್ಡ ವಿರೋಧಪಕ್ಷವಾಗಿದೆ. ವಿರೋಧ ಪಕ್ಷದ ಸ್ಥಾನದಲ್ಲಿರುವ ಬಿಜೆಪಿಯಲ್ಲಿ 40 ಶಾಸಕರಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಇಂದು ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 12-12-1971

● **ಢಾಕಾ ವಿಮೋಚನೆಗೆ ಸಂಪೂರ್ಣ ಸನ್ನಾಹ**

ನವದೆಹಲಿ, ಡಿ. 11– ಢಾಕಾದತ್ತ ಮುನ್ನಡೆಯುತ್ತಿರುವ ಭಾರತೀಯ ಪಡೆಗಳು ಮೇಘ್ನಾ ನದಿಯ ಪೂರ್ವದಂಡೆಯಲ್ಲಿ ಮೈಮೆನ್‌ಸಿಂಗ್, ಕುಷ್ಟಿಯಾ ಮತ್ತು ಹಿಲ್ಲಿಯೂ ಸೇರಿ ಒಟ್ಟು ಹತ್ತು ಪಟ್ಟಣಗಳನ್ನು ಇಂದು ವಿಮೋಚನೆಗೊಳಿಸಿದೆ.

ಅಲ್ಲದೆ, ಈ ಪ್ರದೇಶಗಳಿಂದ ಶತ್ರುಸೈನ್ಯವನ್ನು ಹೊಡೆದೋಡಿಸಿ 1,800 ಸೈನಿಕರನ್ನು ಸೆರೆ ಹಿಡಿದಿದೆ. ನಮ್ಮ ಸೈನಿಕರ ಪರಾಕ್ರಮ ಮತ್ತು ಸಾಹಸದ ಎದುರು ಕಂಗಾಲಾದ ಪಾಕಿಸ್ತಾನಿ ಸೈನಿಕರು ಜಮಾಲಪುರ ದಂಡು ಪ್ರದೇಶದಲ್ಲಿ (ಸುಮಾರು 600 ಮಂದಿ) ಶರಣಾಗತರಾದರು. ಭಾರತೀಯ ಪಡೆಗಳು ಇಂದು ಕಛ್ ಕ್ಷೇತ್ರದಲ್ಲಿ ವಿಂಗಿಠಾಣ್ಯ ವಶಪಡಿಸಿಕೊಂಡರು.

ಪದಬಂಧ 4805 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೋಟೆಯ ರಕ್ಷಕನಿವನು (4)
3.ಲೆಕ್ಕ ಬರೆಯುವವನು (4)
5.ಬಳಿ ಇಲ್ಲಿ ಹಬ್ಬಿದೆ (3)
6.ಗಂಡಸು ಶೂನ್ಯ ತೆಗೆದರೆ ಬಿರುಸು! (3)
8.ಕುತ್ತಿಗೆಯನ್ನು ಹೀಗೂ ಹೇಳುವರು (3)
9.ಚಾರ ಹೇಳಿದ ಸಂಗತಿ (3)
10.ಜಿನ ವಾಸಿಮಾಡಿರುವ ಕಾಹಿಲೆ! (3)
12.ಅಂಕುರ ಇಲ್ಲಿ ಕಾಣುತ್ತಿದೆ (3)
14.ಹರನಿಂದ ಪ್ರಾರಂಭಿಸಿದ ಸಂಪು (4)
15.ರತ್ನಗಳು ಅಡಗಿರುವ ಸಮುದ್ರ (4)

ಮೇಲಿನಿಂದ ಕೆಳಕ್ಕೆ

1.ಹಳೆ ಕಾಲದ ಒಂದು ಅಳತೆ (3)
2.ಲವಣ ಹಿಡಿದಿರುವ ರಾಮನ ಮಗ (2)
3.ಕಮರಿ ಹತ್ತಿರವಿರುವ ಆನೆ (2)
4.ಕರುವಿನ ಪಚನಾಂಗವಿದು (3)
7.ಇದು ಅತ್ಯಂತ ಚಲುವಾದುದು (5)
9.ವಿವಾದವಿಲ್ಲದ ಮದುವೆ (3)
11.ಗರಬಡಿದ ಶಹರು (3)
12.ಮೊಳಕೆಯಲ್ಲಿರುವ ಒಂದು ಅಳತೆ (2)
13.ಕೆಸರಲ್ಲಿಕಾಣಿಸಿದ ಮೆಟ್ಟು! (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	■		■	■	■		■	■
■	■		■	■	■		■	■
9			■	■	■	10		11
	■	■	12		13	■	■	
14				■	15			

4804ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪುರೋಹಿತ 3. ನಾರಿಕೇಳ
5. ಟಗರು 7.ಪಿಕ 8.ಸುಮ
11.ಹರ 13.ಸರಿ 14.ಪರಶು
16.ತಿರುಪತಿ 17.ಕಲರವ

ಮೇಲಿಂದ ಕೆಳಕ್ಕೆ:
1.ಪುಡಿಗಾಸು 2.ತಟ 3.ನಾರು
4.ಳವಕ 6.ಗಯ್ಯಾಳಿ 7.ಪಿತಾಮಹ
9.ಮಧುಕರಿ 10.ತತ್ವರ
12.ರಥೋತ್ಸವ 13.ಸವತಿ
14.ಪತಿ 15.ಶುಕ

ಸುಡೊಕು 5191

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5190 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟವರ ಗುರುತು ಪತ್ತೆ

ಸೇನಾನಿಗಳಿಗೆ ಅಂತಿಮ ನಮನ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ಸೇನಾ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ, ಸೇನೆಯ ಆರು ಜನರ ಗುರುತನ್ನು ಶನಿವಾರ ಪತ್ತೆಹಚ್ಚಲಾಗಿದ್ದು, ಮೃತದೇಹಗಳನ್ನು ಅವರ ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು. ಪಾರ್ಥಿವ ಶರೀರಗಳನ್ನು ತಮ್ಮ ಊರುಗಳಿಗೆ ಒಯ್ದು ಸಂಬಂಧಿಕರು ಅಂತ್ಯಸಂಸ್ಕಾರ ನೆರವೇರಿಸಿದರು.

ಜೂನಿಯರ್ ವಾರಂಟ್ ಆಫೀಸರ್‌ಗಳಾದ ಪ್ರದೀಪ್, ರಾಣಾ ಪ್ರತಾಪ್ ದಾಸ್, ವಿಂಗ್ ಕಮಾಂಡರ್ ಪಿ.ಎಸ್. ಚೌಹಾಣ್, ಲ್ಯಾನ್ಸ್ ನಾಯ್ಕ್ ಬಿ. ಸಾಯಿತೇಜ ಮತ್ತು ಲ್ಯಾನ್ಸ್ ನಾಯ್ಕ್ ವಿವೇಕ್ ಕುಮಾರ್, ಸ್ಕ್ವಾಡ್ರನ್ ಲೀಡರ್ ಕುಲದೀಪ್ ಸಿಂಗ್ ಅವರು ಅವಘಡದಲ್ಲಿ ಮೃತಪಟ್ಟಿದ್ದರು.

ರಾಜಸ್ಥಾನದ ಝುಂಝುನು ಜಿಲ್ಲೆಯ ಘರಡಾನ ಖುರ್ದ್ ಗ್ರಾಮದಲ್ಲಿ ಸ್ಕ್ವಾಡ್ರನ್ ಲೀಡರ್ ಕುಲದೀಪ್ ಸಿಂಗ್ ಅವರ ಅಂತ್ಯಕ್ರಿಯೆ ನಡೆಯಿತು. ಅಂತಿಮ ನಮನ ಸಲ್ಲಿಸಲು ಸಾವಿರಾರು ಜನರು ಗ್ರಾಮಕ್ಕೆ ಬಂದಿದ್ದರು. ವಿಂಗ್ ಕಮಾಂಡರ್ ಪೃಥ್ವಿ ಸಿಂಗ್ ಚೌಹಾಣ್ ಅವರ ಅಂತ್ಯಸಂಸ್ಕಾರವು ಆಗ್ರಾದ ತಾಜ್‌ಗಂಜ್ ಚಿತಾಗಾರದಲ್ಲಿ ನಡೆಯಿತು. ಕೇರಳದ ತ್ರಿಶ್ಶೂರ್ ಜಿಲ್ಲೆಯವರಾದ ಪ್ರದೀಪ್ ಅವರ ಅಂತ್ಯಕ್ರಿಯೆಯು ಪೊನ್ನುಕ್ಕರ ಗ್ರಾಮದಲ್ಲಿ ಶನಿವಾರ ಸಂಜೆ ನಡೆಯಿತು.

ಒಡಿಶಾದ ಭುವನೇಶ್ವರದಲ್ಲಿ ರಾಣಾ ಪ್ರತಾಪ್ ದಾಸ್ ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಿ, ಅಂಗುಲ್ ಜಿಲ್ಲೆಯ ಕೃಷ್ಣಚಂದ್ರಪುರದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು. ಲ್ಯಾನ್ಸ್ ನಾಯ್ಕ್ ಸಾಯಿತೇಜ ಅವರ ಕುಟುಂಬಕ್ಕೆ ಆಂಧ್ರಪ್ರದೇಶ ಸರ್ಕಾರ ₹50 ಲಕ್ಷ ಪರಿಹಾರ ಘೋಷಿಸಿದೆ. ಸಾಯಿತೇಜ ಅವರ ಮೃತದೇಹವನ್ನು ಬೆಂಗಳೂರಿಗೆ ತರಲಾಗಿದ್ದು, ಅವರ ಹುಟ್ಟೂರಾದ ಚಿತ್ತೂರು ಜಿಲ್ಲೆಯ ಯಗುವರೆಗಡಿಪಲ್ಲಿ ಗ್ರಾಮಕ್ಕೆ ಭಾನುವಾರ ತಲುಪುವ ನಿರೀಕ್ಷೆಯಿದೆ.

ಗುರುತು ಪತ್ತೆಯಾಗಬೇಕಿರುವ ಮೃತದೇಹಗಳನ್ನು ದೆಹಲಿಯ ಕಂಟೋನ್ಮೆಂಟ್‌ನಲ್ಲಿರುವ ಸೇನಾ ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಗುರುತು ಪತ್ತೆಯಾಗಿದ್ದ ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್, ಅವರ ಪತ್ನಿ ಮಧುಲಿಕಾ ಮತ್ತು ಬ್ರಿಗೇಡಿಯರ್ ಲಖ್ವಿಂದರ್ ಸಿಂಗ್ ಲಿದ್ದರ್ ಅವರ ಅಂತ್ಯಕ್ರಿಯೆ ಶುಕ್ರವಾರ ನಡೆದಿತ್ತು.

ರಾವತ್ ವಿರುದ್ಧ ಅವಹೇಳನಕಾರಿ ಸಂದೇಶ, ವ್ಯಕ್ತಿಯ ಬಂಧನ:(ಜೈಪುರ ವರದಿ): ಜೈಪುರ: ತಮಿಳುನಾಡಿನ ಕೂನೂರಿನಲ್ಲಿ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಹುತಾತ್ಮರಾದ ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ ಸಂದೇಶ ಪ್ರಕಟಿಸಿದ ವ್ಯಕ್ತಿಯೊಬ್ಬರನ್ನು ರಾಜಸ್ಥಾನ ಪೊಲೀಸರು ಬಂಧಿಸಿದ್ದಾರೆ. 'ಆರೋಪಿ ಜಾವೇದ್ ಖಾನ್ (21) ಟೊಂಕ್ ನಗರದ ನಜಾರ್‌ಬಾಗ್ ರಸ್ತೆಯ ನಿವಾಸಿ' ಎಂದು ಟೊಂಕ್‌ನ ಕೊತ್ವಾಲಿ ಪೊಲೀಸ್ ಠಾಣೆಯ ಎಸ್‌ಎಚ್‌ಒ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.



ಲ್ಯಾನ್ಸ್ ನಾಯ್ಕ್ ವಿವೇಕ್ ಕುಮಾರ್ ಮೃತದೇಹದ ಮುಂದೆ ಕುಟುಂಬ ಸದಸ್ಯರ ರೋದನ —ಪಿಟಿಐ ಚಿತ್ರ

'ನನ್ನ ಮಗ ಹೋರಾಟ ಗೆಲ್ಲುತ್ತಾನೆ'

ಭೋಪಾಲ್: ಹೆಲಿಕಾಪ್ಟರ್ ಪತನದಲ್ಲಿ ಬದುಕುಳಿದಿರುವ ಏಕೈಕ ಸೇನಾ ಸಿಬ್ಬಂದಿ ಭಾರತೀಯ ವಾಯು ಪಡೆಯ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರ ಆರೋಗ್ಯದಲ್ಲಿ ಏರುಪೇರಾಗುತ್ತಿದೆ. ಹಾಗಿದ್ದರೂ ಅವರು ಆರೋಗ್ಯವಂತರಾಗಿ ಮರಳುವ ವಿಶ್ವಾಸವನ್ನು ಅವರ ತಂದೆ ವ್ಯಕ್ತಪಡಿಸಿದ್ದಾರೆ.

ರಾವತ್ ದಂಪತಿ ಚಿತಾಭಸ್ಮ ಗಂಗೆಗೆ ಅರ್ಪಣೆ

ಡೆಹ್ರಾಡೂನ್ (ಪಿಟಿಐ): ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಮತ್ತು ಅವರ ಹೆಂಡತಿ ಮಧುಲಿಕಾ ಅವರ ಚಿತಾಭಸ್ಮವನ್ನು ಅವರ ಇಬ್ಬರು ಹೆಣ್ಣು ಮಕ್ಕಳು ಹರಿದ್ವಾರದಲ್ಲಿ ಗಂಗಾ ನದಿಯಲ್ಲಿ ಶನಿವಾರ ವಿಸರ್ಜಿಸಿದ್ದಾರೆ.

ಅರ್ಚಕರಾದ ಆದಿತ್ಯ ವಶಿಷ್ಠ ಮತ್ತು ಪರೀಕ್ಷಿತ ಸಿಖೋಲ ಅವರು ವಿಧಿ ವಿಧಾನಗಳನ್ನು ನಡೆಸಿಕೊಟ್ಟರು. ರಾವತ್ ಮತ್ತು ಮಧುಲಿಕಾ ಅವರ ಮಕ್ಕಳಾದ ತಾರಿಣಿ ಮತ್ತು ಕೃತಿಕಾ ಅವರು ಚಿತಾಭಸ್ಮವನ್ನು ನೀರಿನಲ್ಲಿ ವಿಸರ್ಜಿಸಿದರು. ಸಕಲ ಸೇನಾ ಗೌರವಗಳೊಂದಿಗೆ ಈ ವಿಧಿಯನ್ನು ನಡೆಸಲಾಯಿತು.

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಗಂಗಾ ತಟದ ವಿಐಪಿ ಘಾಟ್‌ನಲ್ಲಿ ರಾವತ್ ಅವರ ಮಕ್ಕಳನ್ನು ಭೇಟಿಯಾದರು. ಉತ್ತರಾಖಂಡದ ಪೌರಿ ಜಿಲ್ಲೆಯ ಸೈನಾ ಗ್ರಾಮವು ರಾವತ್ ಅವರ ಹುಟ್ಟೂರು.



ರಾವತ್ ದಂಪತಿ ಚಿತಾಭಸ್ಮವನ್ನು ಪುತ್ರಿಯರು ಗಂಗಾ ನದಿಗೆ ವಿಸರ್ಜಿಸಿದರು

ಐಎಎಫ್ ಸೇರುವ ಶಪಥ

'ವಾಯುಪಡೆ ಸೇರಿ, ಅಪ್ಪನ ಹಾದಿಯಲ್ಲೇ ನಡೆಯುತ್ತೇನೆ' ಎಂದು ವಿಂಗ್ ಕಮಾಂಡರ್ ಪೃಥ್ವಿರಾಜ್ ಚೌಹಾಣ್ ಅವರ 12 ವರ್ಷದ ಮಗಳು ಆರಾಧ್ಯ ಶಪಥ ಮಾಡಿದ್ದಾಳೆ. 'ಅಂಕಗಳನ್ನು ಬೆನ್ನಟ್ಟುವ ಬದಲು, ಅಧ್ಯಯನದ ಕಡೆಗೆ ಗಮನ ಹರಿಸುವಂತೆ ನನ್ನ ತಂದೆ ಸಲಹೆ ನೀಡುತ್ತಿದ್ದರು. ಓದಿನಲ್ಲಿ ಶ್ರದ್ಧೆಯಿದ್ದರೆ ಅಂಕಗಳು ತಾವಾಗಿಯೇ ಬರುತ್ತವೆ ಎಂದು ಅವರು ನಂಬಿದ್ದರು' ಎಂದು ಆರಾಧ್ಯ ಹೇಳಿದ್ದಾಳೆ.

ಡೆಹ್ರಾಡೂನ್‌ನ ಭಾರತೀಯ ಸೇನಾ ಅಕಾಡೆಮಿಯಲ್ಲಿ ತರಬೇತಿ ಪಡೆದ ಕೆಡೆಟ್‌ಗಳನ್ನು ಉದ್ದೇಶಿಸಿ ಶನಿವಾರ ಮಾತನಾಡಿದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು, ರಾವತ್ ಅವರನ್ನು ಮಾದರಿಯಾಗಿ ಇಟ್ಟುಕೊಳ್ಳುವಂತೆ ಸಲಹೆ ನೀಡಿದರು.

ಕಿಡಿಗೇಡಿಗಳ ಬಂಧನ

ಜನರಲ್ ಬಿಪಿನ್ ರಾವತ್ ಅವರ ಸಾವಿನ ವಿಚಾರದಲ್ಲಿ ಆಕ್ಷೇಪಾರ್ಹವಾಗಿ ನಡೆದುಕೊಂಡ ಇಬ್ಬರನ್ನು ಗುಜರಾತ್ ಹಾಗೂ ಮಧ್ಯಪ್ರದೇಶದಲ್ಲಿ ಬಂಧಿಸಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ವಾಕ್ಯಗಳನ್ನು ಬರೆದಿದ್ದ ಮಧ್ಯಪ್ರದೇಶದ ದುರ್ಗೇಶ್ ವಾಸ್ಕೆಲೆ ಎಂಬಾತನನ್ನು ಖಾಂಡ್ವಾದಲ್ಲಿ ಶನಿವಾರ ಬಂಧಿಸಲಾಗಿದೆ. ಭಾವನೆಗಳಿಗೆ ಧಕ್ಕೆ ತಂದ ಆರೋಪ ಹೊರಿಸಲಾಗಿದೆ. ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಬರಹ ಪ್ರಕಟಿಸಿದ್ದ ಫಿರೋಜ್ ದಿವಾನ್ ಎಂಬಾತನನ್ನು ಗುಜರಾತ್‌ನ ಭರೂಚ್‌ನಲ್ಲಿ ಬಂಧಿಸಲಾಗಿದೆ.

ಮೂರು ಪ್ರಕರಣ ದಾಖಲು

ಮಂಗಳೂರು: ರಕ್ಷಣಾ ಪಡೆಗಳ ಮುಖ್ಯಸ್ಥ ಸಿಡಿಎಸ್ ಜನರಲ್ ಬಿಪಿನ್ ರಾವತ್ ಸಾವಿನ ಸಂಭ್ರಮಾಚರಣೆ ಮಾಡಿರುವ ಆರೋಪದಲ್ಲಿ ಮೂರು ಫೇಸ್‌ಬುಕ್ ಖಾತೆಗಳ ವಿರುದ್ಧ ನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

'ವಸಂತಕುಮಾರ್ ಟಿ.ಕೆ, ಶ್ರೀನಿವಾಸ ಕಾರ್ಕಳ ಎನ್ನುವ ಫೇಸ್‌ಬುಕ್ ಖಾತೆ ಹಾಗೂ ಇನ್ನೊಂದು ಅಪರಿಚಿತ ಖಾತೆಯಲ್ಲಿ ರಾವತ್ ಸಾವಿನ ಬಗ್ಗೆ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಬಗ್ಗೆ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕಲಾಗಿತ್ತು. ಆ ಖಾತೆಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ. 'ಈ ಬಗ್ಗೆ ಸುಶಾಂತ್ ಪೂಜಾರಿ ದೂರು ನೀಡಿದ್ದರು. ದೂರಿನಲ್ಲಿ ಆರೋಪಿಸಿರುವವರಲ್ಲಿ ಒಬ್ಬರು ಬೆಂಗಳೂರಿನವರು, ಮತ್ತೊಬ್ಬರು ಕಾರ್ಕಳದವರಾಗಿದ್ದು, ಇನ್ನೊಂದು ಖಾತೆ ಅಪರಿಚಿತವಾಗಿದೆ' ಎಂದಿದ್ದಾರೆ.

ಇಸ್ಲಾಂ ಧರ್ಮ ತ್ಯಜಿಸಿದ ಚಿತ್ರ ನಿರ್ದೇಶಕ

ತಿರುವನಂತಪುರ: 'ನಾನು ಹಾಗೂ ಪತ್ನಿ ಇಸ್ಲಾಂ ಧರ್ಮ ತ್ಯಜಿಸಿದ್ದೇವೆ' ಎಂದು ಮಲಯಾಳ ಚಿತ್ರರಂಗದ ಖ್ಯಾತ ನಿರ್ದೇಶಕ ಅಲಿ ಅಕ್ಬರ್ ಅವರು ಘೋಷಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಶುಕ್ರವಾರ ಹಂಚಿಕೊಂಡಿರುವ ವಿಡಿಯೊದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ.

'ಸಿಡಿಎಸ್ ಬಿಪಿನ್ ರಾವತ್ ಹಾಗೂ ಪತ್ನಿ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟಿರುವುದಕ್ಕೆ ಸಾಮಾಜಿಕ ಜಾಲತಾಣಗಳ ಕೆಲ ಬಳಕೆದಾರರು ಸಂಭ್ರಮಿಸಿ, ಪೋಸ್ಟ್‌ಗಳನ್ನು ಹಂಚಿಕೊಂಡಿದ್ದನ್ನು ವಿರೋಧಿಸಿ ಈ ನಿರ್ಧಾರ ಕೈಗೊಂಡಿದ್ದೇವೆ' ಎಂದಿದ್ದಾರೆ.

ಡಿ.13ಕ್ಕೆ ಬೊಮ್ಮಾಯಿ ವಾರಣಾಸಿಗೆ

ಬೆಂಗಳೂರು: ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಸಂಜೆ ಉತ್ತರ ಪ್ರದೇಶದ ವಾರಣಾಸಿಗೆ ತೆರಳುವರು.

ಮಂಗಳವಾರ ವಾರಣಾಸಿಯಲ್ಲಿ ಬಿಜೆಪಿನ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳ ಸಮ್ಮೇಳನ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುವರು. 'ಉತ್ತಮ ಆಡಳಿತ' ಕುರಿತು ಸಮ್ಮೇಳನದಲ್ಲಿ ಚರ್ಚೆ ನಡೆಯಲಿದೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಬೆಳಿಗ್ಗೆ ಆರಂಭವಾಗುವ ವಿಧಾನಮಂಡಲ ಅಧಿವೇಶನದಲ್ಲಿ ಮುಖ್ಯಮಂತ್ರಿ ಪಾಲ್ಗೊಳ್ಳುವರು. ಅದೇ ದಿನ ಸಂಜೆ ವಾರಣಾಸಿಗೆ ತೆರಳುವರು. ಮಂಗಳವಾರ ಸಂಜೆ ಬೆಳಗಾವಿಗೆ ವಾಪಸಾಗುವರು.

ಸಾವು ಸಂಭ್ರಮಿಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಸೇರಿದಂತೆ 14 ಮಂದಿ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟಿದ್ದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಸಂಭ್ರಮಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಸಿಟಿಜನ್ಸ್ ಡೆಮಾಕ್ರಸಿ ಆಯೋಜಿಸಿದ್ದ ನುಡಿನಮನ ಸಭೆಯಲ್ಲಿ ವ್ಯಕ್ತವಾಯಿತು.

ದುರಂತದಲ್ಲಿ ಮಡಿದ ರಾವತ್, ಅವರ ಪತ್ನಿ ಮಧುಲಿಕಾ ರಾವತ್, ಸೇನಾಧಿಕಾರಿಗಳು ಮತ್ತು ಸೈನಿಕರಿಗೆ ಮೋಂಬತ್ತಿ ಬೆಳಗುವ ಮೂಲಕ ಹಾಗೂ ದೇಶ ಭಕ್ತಿ ಗೀತೆಗಳ ಗಾಯನದೊಂದಿಗೆ ಶನಿವಾರ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಮದನ್ ಗೋಪಾಲ್ ಅವರು, 'ದೇಶದ ಹೊರಗಿರುವ ಶತ್ರುಗಳಿಗಿಂತ ಒಳಗೆ ಇರುವ ಶತ್ರುಗಳು ಅಪಾಯಕಾರಿ. ಸೈನಿಕರು ಮೃತಪಟ್ಟಾಗಲೂ ಸಂಭ್ರಮಿಸುವಂತಹ ದುಷ್ಟ ಮನಸ್ಸು ಹೊಂದಿರುವವರನ್ನು ಗುರುತಿಸಿ, ಕಠಿಣ ಕ್ರಮಕ್ಕೆ ಒಳಪಡಿಸಬೇಕು' ಎಂದು ಆಗ್ರಹಿಸಿದರು.

ರಂಗಕರ್ಮಿ ಪ್ರಕಾಶ್ ಬೆಳವಾಡಿ ಅವರು,, 'ದೇಶ ಕಾಯುವ ಸೈನಿಕರ ಸಾವನ್ನೂ ಸಂಭ್ರಮಿಸುವುದು ಹೀನ ಮನಸ್ಥಿತಿ' ಎಂದರು.

'ಜನರಲ್ ಬಿಪಿನ್ ರಾವತ್ ಭಾರತೀಯ ಸೇನಾಪಡೆಗಳಿಗೆ ಸ್ವಾವಲಂಬನೆಯ ಕನಸು ತುಂಬಿದ್ದರು. ಯುದ್ಧ ಕೌಶಲ, ಶಸ್ತ್ರಾಸ್ತ್ರಗಳ ವಿಚಾರದಲ್ಲಿ ಸೇನಾಪಡೆಗಳು ಇತರರನ್ನು ಅವಲಂಬಿಸುವುದನ್ನು ತಗ್ಗಿಸುವ ಗುರಿ ಹೊಂದಿದ್ದರು' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮ್ ಮಾಧವ್ ಹೇಳಿದರು.

ರಂಗಕರ್ಮಿ ಸೇತುರಾಂ, ಬಿಜೆಪಿ ವಕ್ತಾರರಾದ ಮಾಳವಿಕಾ ಅವಿನಾಶ್, ಲೇಖಕ ಜಿ.ಬಿ. ಹರೀಶ್ ಮಾತನಾಡಿದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಹೆಲಿಕಾಪ್ಟರ್ ದುರಂತದಲ್ಲಿ ಮಡಿದ ಸೇನಾನಿಗಳಿಗೆ ಮೋಂಬತ್ತಿ ಬೆಳಗಿಸಿ ಗೌರವ ಸಲ್ಲಿಸಲಾಯಿತು. —ಪ್ರಜಾವಾಣಿ ಚಿತ್ರ

'ಅನುದಾನ ಹಂಚಿಕೆಯಲ್ಲಿ ಕನ್ನಡ ಕಡೆಗಣನೆ'

ಬೆಂಗಳೂರು: 'ಏಳು ಕೋಟಿ ಜನರ ಭಾಷೆಯಾಗಿರುವ ಕನ್ನಡಕ್ಕೆ ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ತಾರತಮ್ಯ ಮಾಡಿರುವುದು ಖಂಡನೀಯ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೇಂದ್ರ ಸರ್ಕಾರ 7 ವರ್ಷದಲ್ಲಿ ಕನ್ನಡ ಭಾಷೆ ಅಭಿವೃದ್ಧಿಗಾಗಿ ಕೇವಲ ₹ 8.39 ಕೋಟಿ ಅನುದಾನ ನೀಡಿದೆ. ಸಂಸ್ಕೃತ ಭಾಷೆಗೆ ₹ 1,200 ಕೋಟಿ ಹಾಗೂ ತಮಿಳಿಗೆ ₹ 50 ಕೋಟಿ ನೀಡಲಾಗಿದೆ. ಕನ್ನಡ ಕಡೆಗಣನೆಯನ್ನು ಯಾವ ಕನ್ನಡ ಪ್ರೇಮಿಯೂ ಸಹಿಸಿಕೊಳ್ಳಲಾರ. ಕೇಂದ್ರ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡಿ, ಕೈತೊಳೆದುಕೊಂಡಿದೆ' ಎಂದು ವಿಷಾದಿಸಿದ್ದಾರೆ.

'ಕನ್ನಡಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಒಬ್ಬಿಬ್ಬರು ಸಂಸದರು ಮಾತ್ರ ಧ್ವನಿ ಎತ್ತುತ್ತಿದ್ದಾರೆ. ಉಳಿದವರು ನೆರೆಯ ರಾಜ್ಯಗಳನ್ನು ನೋಡಿಯಾದರೂ ಎಚ್ಚೆತ್ತುಕೊಳ್ಳಬೇಕು. ತಕ್ಷಣ ಕೇಂದ್ರ ಸರ್ಕಾರ ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನಕ್ಕೆ (ಸಿಐಐಎಲ್) ಹೆಚ್ಚು ಹಣ ಬಿಡುಗಡೆ ಮಾಡಬೇಕು. ಅದಕ್ಕೆ ಸ್ವಾಯತ್ತತೆ ಒದಗಿಸುವ ಬಗ್ಗೆ ಆದೇಶಿಸಿ, ಬಹುದಿನಗಳ ಬೇಡಿಕೆ ಈಡೇರಿಸಬೇಕು' ಎಂದು ಆಗ್ರಹಪಡಿಸಿದ್ದಾರೆ.

ಕೋವಿಡ್ ದೃಢ ಪ್ರಮಾಣ ಶೇ 10ಕ್ಕಿಂತ ಹೆಚ್ಚಿದ್ದರೆ ರಾತ್ರಿ ಕರ್ಫ್ಯೂ: ಕೇಂದ್ರ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 10ಕ್ಕಿಂತ ಹೆಚ್ಚು ಇರುವ ಪ್ರದೇಶಗಳಲ್ಲಿ ಮತ್ತು ಆಮ್ಲಜನಕಸಹಿತ ಹಾಸಿಗೆಗಳಿಗೆ ಹೆಚ್ಚು ಬೇಡಿಕೆ ಇರುವಲ್ಲಿ ರಾತ್ರಿ ಕರ್ಫ್ಯೂ, ಹೆಚ್ಚು ಜನ ಸೇರುವುದಕ್ಕೆ ನಿಷೇಧದಂತಹ ಕ್ರಮಗಳನ್ನು ಕೈಗೊಳ್ಳಿ ಎಂದು ರಾಜ್ಯಗಳಿಗೆ ಕೇಂದ್ರವು ಸೂಚಿಸಿದೆ.

ಸದ್ಯಕ್ಕೆ ದೇಶದಲ್ಲಿ ಇಂತಹ ಜಿಲ್ಲೆಗಳು ಎಂಟು ಮಾತ್ರ ಇವೆ. ಕೋವಿಡ್ ದೃಢಪಡುವಿಕೆ ದರವು ಶೇ 5 ಮತ್ತು ಶೇ 10ರ ನಡುವೆ ಇರುವ 19 ಜಿಲ್ಲೆಗಳಲ್ಲಿಯೂ ಹೆಚ್ಚಿನ ನಿಗಾ ಅಗತ್ಯ. ಅತ್ಯಂತ ವೇಗವಾಗಿ ಹರಡುವ ಸಾಮರ್ಥ್ಯದ ಓಮೈಕ್ರಾನ್ ರೂಪಾಂತರ ತಳಿಯು ಸುಮಾರು 60 ದೇಶಗಳಿಗೆ ಹರಡಿದೆ. ಹಾಗಾಗಿ ಕೋವಿಡ್‌ನ ಹೆಚ್ಚು ಪ್ರಕರಣಗಳು ಪತ್ತೆಯಾದ 70 ಕ್ಲಸ್ಟರ್‌ಗಳಲ್ಲಿಯೂ ಹೆಚ್ಚು ಗಮನ ಇರಿಸಬೇಕು ಎಂದು ಕೇಂದ್ರವು ಹೇಳಿದೆ. 2022ರ ಜನವರಿ-ಫೆಬ್ರುವರಿ ಹೊತ್ತಿಗೆ ದೇಶದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಳವಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಚಳಿಗಾಲ ಆರಂಭವಾಗಿದೆ. ಹಾಗಾಗಿ, ಉಸಿರಾಟಕ್ಕೆ ಸಂಬಂಧಿಸಿದ ರೋಗಗಳು ಮತ್ತು ಜ್ವರದಂತಹ ರೋಗಗಳ ಬಗ್ಗೆ ಹೆಚ್ಚಿನ ನಿಗಾ ಇರಿಸುವಂತೆಯೂ ಸೂಚಿಸಲಾಗಿದೆ.


ಕೋವಿಡ್ ಪ್ರಕರಣಗಳು ಹೆಚ್ಚು ಇರುವ 70 ಕ್ಲಸ್ಟರ್‌ಗಳು ಯಾವುವು ಎಂಬುದನ್ನು ಕೇಂದ್ರವು ಹೇಳಿಲ್ಲ. ಆದರೆ, ನವೆಂಬರ್‌ನ ಕೊನೆಯ ಎರಡು ವಾರಗಳಲ್ಲಿ ಕೋವಿಡ್‌ನ ಹೊಸ ಪ್ರಕರಣಗಳು ತೀವ್ರವಾಗಿ ಹೆಚ್ಚಳವಾದ ಆರು ರಾಜ್ಯಗಳ 30 ಜಿಲ್ಲೆಗಳಲ್ಲಿಯೇ ಹೆಚ್ಚಿನ ಕ್ಲಸ್ಟರ್‌ಗಳು ಇವೆ. ಜಮ್ಮು ಕಾಶ್ಮೀರದ ಕಠುವಾ, ಒಡಿಶಾದ ಧೆನ್‌ಕನಲ್ ಮತ್ತು ಕಂಧಮಾಲ್ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಪ್ರಕರಣಗಳು ತೀವ್ರವಾಗಿ ಹೆಚ್ಚಿದ್ದವು. ಬೆಂಗಳೂರು ನಗರ ಜಿಲ್ಲೆಯಲ್ಲಿಯೂ ಹೆಚ್ಚಿನ ನಿಗಾ ಅಗತ್ಯ ಎಂದು ಕೇಂದ್ರ ಹೇಳಿದೆ.

ದೇಶದ 33 ಜನರಿಗೆ ಓಮೈಕ್ರಾನ್ ಸೋಂಕು

ಮುಂಬೈ (ಪಿಟಿಐ): ದೆಹಲಿಯ ವ್ಯಕ್ತಿಯೊಬ್ಬರಿಗೆ ಕೊರೊನಾ ರೂಪಾಂತರಿ ತಳಿ 'ಓಮೈಕ್ರಾನ್' ಸೋಂಕು ತಗುಲಿರುವುದು ದೃಢವಾಗಿದೆ. ಇದರಿಂದಾಗಿ, ದೇಶದಲ್ಲಿ ಓಮೈಕ್ರಾನ್ ಸೋಂಕಿತರ ಸಂಖ್ಯೆ 33ಕ್ಕೆ ಏರಿದೆ. ಮಹಾರಾಷ್ಟ್ರದಲ್ಲಿ ಮೂರು ವರ್ಷದ ಮಗು ಸೇರಿ ಏಳು ಮಂದಿಗೆ ಶುಕ್ರವಾರ ಓಮೈಕ್ರಾನ್ ಸೋಂಕು ದೃಢಪಟ್ಟಿತ್ತು.

ಮಹಾರಾಷ್ಟ್ರದಿಂದ ವರದಿ ಆಗಿರುವ ಏಳು ಪ್ರಕರಣಗಳಲ್ಲಿ ಮೂರು ಪ್ರಕರಣಗಳು ಮುಂಬೈನಲ್ಲಿ ಪತ್ತೆ ಆಗಿವೆ ಮತ್ತು ನಾಲ್ಕು ಪ್ರಕರಣಗಳು ಪುಣೆ ಜಿಲ್ಲೆಯ ಪಿಂಪ್ರಿ ಚಿಂಚ್‌ವಾಡ್ ಪ್ರದೇಶದಲ್ಲಿ ಪತ್ತೆ ಆಗಿವೆ. ಮುಂಬೈನ ಮೂವರು ಸೋಂಕಿತರು ತಾಂಜಾನಿಯಾ, ಬ್ರಿಟನ್ ಮತ್ತು ದಕ್ಷಿಣ ಆಫ್ರಿಕದಿಂದ ಇತ್ತೀಚೆಗೆ ಮರಳಿದ್ದರು.

ಓಮೈಕ್ರಾನ್ ಸೋಂಕಿತ ದೆಹಲಿಯ 35 ವರ್ಷ ವಯಸ್ಸಿನ ವ್ಯಕ್ತಿ ಜಿಂಬಾಬ್ವೆ ಮತ್ತು ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ್ದರು.



ಕೋವಿಡ್: 30 ಲಕ್ಷ ದಾಟಿದ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 320 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದ್ದು, ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30 ಲಕ್ಷದ ಗಡಿ ದಾಟಿದೆ.

ಕಳೆದ ವರ್ಷ ಮಾರ್ಚ್ 8ರಂದು ರಾಜ್ಯದಲ್ಲಿ ಮೊದಲ ಪ್ರಕರಣ ವರದಿಯಾಗಿತ್ತು. ವರ್ಷಾಂತ್ಯಕ್ಕೆ ಸೋಂಕಿತರ ಸಂಖ್ಯೆ 9.19 ಲಕ್ಷಕ್ಕೆ ತಲುಪಿತ್ತು. ಈ ವರ್ಷ ಎರಡನೇ ಅಲೆಯಲ್ಲಿ ಅಧಿಕ ಮಂದಿ ಸೋಂಕಿತರಾಗಿದ್ದರಿಂದ 20.80 ಲಕ್ಷ ಪ್ರಕರಣಗಳು ಪತ್ತೆಯಾಗಿವೆ.

ಒಂದು ದಿನದ ಅವಧಿಯಲ್ಲಿ 1.05 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 20 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, ಸೋಂಕು ದೃಢ ಪ್ರಮಾಣ ಶೇ 0.30ರಷ್ಟಿದೆ. ಐದು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರು ನಗರದಲ್ಲಿ 190 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೊಡಗಿನಲ್ಲಿ 21, ದಕ್ಷಿಣ ಕನ್ನಡದಲ್ಲಿ 20, ಹಾಸನದಲ್ಲಿ 17 ಹಾಗೂ ಮೈಸೂರಿನಲ್ಲಿ 14 ಪ್ರಕರಣಗಳು ವರದಿಯಾಗಿವೆ.

ಲಸಿಕೆ:8 ಕೋಟಿ ಡೋಸ್ ವಿತರಣೆ


ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಯ 3.33 ಲಕ್ಷ ಡೋಸ್‌ಗಳನ್ನು ಶನಿವಾರ ವಿತರಿಸಲಾಗಿದೆ. ಇದರೊಂದಿಗೆ ಈವರೆಗೆ ರಾಜ್ಯದಲ್ಲಿ ನೀಡಲಾದ ಒಟ್ಟು ಡೋಸ್‌ಗಳ ಸಂಖ್ಯೆ 8 ಕೋಟಿಯ ಗಡಿ ದಾಟಿದೆ.

4.64 ಕೋಟಿ ಮಂದಿ ಲಸಿಕೆಯ ಮೊದಲ ಡೋಸ್ ಹಾಗೂ 3.37 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

'ರಾಜ್ಯವು ಕೋವಿಡ್ ಲಸಿಕೆ ವಿತರಣೆಯಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಿದೆ. ಮೊದಲ ಡೋಸ್ ನೀಡುವಿಕೆಯಲ್ಲಿ ರಾಜ್ಯವು ದೇಶಕ್ಕೇ ಮೊದಲ ಸ್ಥಾನದಲ್ಲಿದೆ. ಎರಡನೇ ಡೋಸ್ ವಿತರಣೆಯಲ್ಲಿ ಮೂರನೇ ಸ್ಥಾನದಲ್ಲಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.


2021ರ ಜ.16ರಂದು ರಾಜ್ಯದಲ್ಲಿ ಲಸಿಕಾ ಅಭಿಯಾನ ಪ್ರಾರಂಭವಾಗಿದೆ. ಒಂದು ತಿಂಗಳಿನಿಂದ ಈಚೆಗೆ ನಿತ್ಯ ಸರಾಸರಿ 4 ಲಕ್ಷ ಡೋಸ್‌ಗಳನ್ನು ನೀಡಲಾಗುತ್ತಿದೆ. 18 ರಿಂದ 44 ವರ್ಷದೊಳಗಿನವರಲ್ಲಿ 2.65 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.76 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.81 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.44 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.43 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ.



ನಿಧನ ವಾರ್ತೆ

ಸದಾಶಿವಯ್ಯ



ತಿಪಟೂರು: ಸಾವಯವ ಕೃಷಿಕರಿಗೆ ಮಾರ್ಗದರ್ಶಕರಾಗಿದ್ದ ತಾಲ್ಲೂಕಿನ ಮಾರಗೊಂಡನಹಳ್ಳಿ ಗ್ರಾಮದ ಸಾವಯವ ಕೃಷಿಕ ಬಿ.ಸದಾಶಿವಯ್ಯ (88) ಶನಿವಾರ ವಯೋಸಹಜ ಅನಾರೋಗ್ಯದಿಂದ ನಿಧನರಾದರು.

ಅಂತ್ಯ ಸಂಸ್ಕಾರವು ಭಾನುವಾರ ಸ್ವಗ್ರಾಮದ ತೋಟದಲ್ಲಿ ನೆರವೇರಲಿದೆ.

ಹೊರಡುವ ಮುನ್ನ ನೃತ್ಯ, ಸಂಭ್ರಮ; ಪರಸ್ಪರ ಅಪ್ಪಿಕೊಂಡು ವಿದಾಯ

ದೆಹಲಿ ಗಡಿಗಳಲ್ಲಿ ಭಾವನೆಗಳ ಓಕುಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸುವ ರೈತರ ಬೇಡಿಕೆ ಈಡೇರಿದೆ. ವರ್ಷದ ಬಳಿಕ ತಮ್ಮ ಊರುಗಳಿಗೆ ಹಿಂತಿರುಗುವ ರೈತರಲ್ಲಿ ಗೆಲುವಿನ ಸಂಭ್ರಮ ಮನೆ ಮಾಡಿತ್ತು. ತಮ್ಮ ಕುಟುಂಬದವರ ಭೇಟಿಗೆ ಸಡಗರದಿಂದ ಸಜ್ಜಾಗುತ್ತಿದ್ದ ಚಿತ್ರಣ ಸಿಂಘು, ಟಿಕ್ರಿ ಹಾಗೂ ಗಾಜಿಪುರ ಗಡಿಗಳಲ್ಲಿ ಶನಿವಾರ ಬೆಳಿಗ್ಗೆ ಕಂಡುಬಂದಿತು. ಇದು ಭಾವನಾತ್ಮಕ ಸನ್ನಿವೇಶವನ್ನು ಸೃಷ್ಟಿಸಿತ್ತು.

ಹೊರಡುವುದಕ್ಕೂ ಮುನ್ನ ಕೆಲವು ರೈತರು ಸಿಂಘು ಗಡಿಯಲ್ಲಿ ಹೋಮಹವನ ನಡೆಸಿದರು. ಕೆಲವರು ಕೀರ್ತನೆಗಳನ್ನು ಹಾಡಿದರೆ, ಇನ್ನೂ ಕೆಲವರು ನೃತ್ಯ ಮಾಡಿ ವಿಜಯ ದಿವಸ ಆಚರಿಸಿದರು.

ಪಂಜಾಬ್‌ನ ಮೋಗಾಕ್ಕೆ ಹೊರಟಿದ್ದ ರೈತ ಕುಲ್ಜೀತ್ ಸಿಂಗ್ ಔಲಂಖ್ ಅವರು, ವಿವಿಧ ರಾಜ್ಯಗಳಿಗೆ ಹೊರಟಿದ್ದ ತಮ್ಮ ಸಹ ಪ್ರತಿಭಟನಕಾರರನ್ನು ಅಪ್ಪಿಕೊಂಡು ಬೀಳ್ಕೊಟ್ಟರು.

'ಸಿಂಘು ಗಡಿಯು ಕಳೆದ ಒಂದು ವರ್ಷದಿಂದ ನಮ್ಮ ಮನೆಯಾಗಿತ್ತು. ಈ ಚಳವಳಿಯು ನಮ್ಮನ್ನು ಒಂದಾಗಿಸಿದೆ. ಧರ್ಮ, ಜಾತಿ, ಪಂಥಗಳೆನ್ನದೇ, ನಾವು ಕೃಷಿ ಕಾನೂನುಗಳ ವಿರುದ್ಧ ಒಟ್ಟಾಗಿ ಹೋರಾಟ ನಡೆಸಿದೆವು. ಇದೊಂದು ಐತಿಹಾಸಿಕ ಚಳವಳಿ ಹಾಗೂ ಯಶಸ್ಸು' ಎಂದು ಔಲಂಖ್ ಹೇಳಿದರು.

'ಗುರು ಸಾಹಿಬ್ ಆಶೀರ್ವಾದದಿಂದ, ನಾವು ಸರ್ಕಾರದ ಮೇಲೆ ಒತ್ತಡ ಹೇರಿ ಕೃಷಿ ಕಾಯ್ದೆ ರದ್ದುಗೊಳಿಸುವಲ್ಲಿ ಯಶಸ್ಸು ಕಂಡಿದ್ದೇವೆ' ಎಂದು ಭಟಿಂಡಾದ ಹರ್ಜಿತ್ ಕೌರ್ ಹೇಳಿದರು. ಊರಿಗೆ ಹೊರಡುವ ಮುನ್ನ ಅವರು ಕೀರ್ತನೆಗಳನ್ನು ಹಾಡಿದರು.

ಪಂಜಾಬಿ ಯುವಕರ ಗುಂಪೊಂದು 'ಭಾಂಗ್ಡಾ' ನೃತ್ಯಕ್ಕೆ ಹೆಜ್ಜೆ ಹಾಕುತ್ತಿತ್ತು. ಇನ್ನೊಂದಿಷ್ಟು ಜನರು ಹೊರಡುವ ಮುನ್ನ ಭೋಜನಶಾಲೆಯಲ್ಲಿ ಬೆಳಗಿನ ಉಪಾಹಾರ ಸೇವಿಸುತ್ತಿದ್ದರು. 'ಬಹುಶಃ ಇದು ಇಲ್ಲಿ ನಮ್ಮ ಕೊನೆಯ ಉಪಾಹಾರ. ಈ ಸ್ಥಳವನ್ನು ನಾವು ಎಂದಿಗೂ ಮರೆಯುವುದಿಲ್ಲ' ಎಂದು ಸಂಗ್ರೂರ್‌ನ ರೈತ ಸರೇಂದ್ರ ಸಿಂಗ್ ಹೇಳಿದರು.

ಉತ್ತರ ಪ್ರದೇಶದ ಮುಜಫ್ಫರ್ ನಗರದ ತಮ್ಮ ಊರಿಗೆ ಹೊರಡುವ ಸಂಭ್ರಮದಲ್ಲಿದ್ದ ರೈತ ಜಿತೇಂದ್ರ ಚೌಧರಿ ಅವರು ಗಾಜಿಪುರ ಗಡಿಯಲ್ಲಿ ತಮ್ಮ ಟ್ರ್ಯಾಕ್ಟರ್ ಟ್ರ್ಯಾಲಿಯನ್ನು ಸಜ್ಜುಗೊಳಿಸುತ್ತಿದ್ದರು. 'ನೂರಾರು ಉತ್ತಮ ನೆನಪುಗಳೊಂದಿಗೆ ಹೋಗುತ್ತಿದ್ದೇನೆ. ಈ ಐತಿಹಾಸಿಕ ಚಳವಳಿಯಲ್ಲಿ ಭಾಗಿಯಾಗಿದ್ದು ನನ್ನ ಅದೃಷ್ಟ. ಹೊಸ ಸ್ನೇಹಿತರು ಇಲ್ಲಿ ಸಿಕ್ಕಿದ್ದಾರೆ. ವಿಭಿನ್ನ ಅನುಭವಗಳನ್ನು ಹೊತ್ತು ಮರಳುತ್ತಿದ್ದೇನೆ' ಎಂದು ಅವರು ಸಂಭ್ರಮದಿಂದ ಹೇಳಿದರು.



ದೆಹಲಿಯ ಸಿಂಘು ಗಡಿಯಿಂದ ಹೊರಟ ರೈತರು ಸಂಭ್ರಮಿಸಿದರು—ಎಎಫ್‌ಪಿ ಚಿತ್ರ

- ರೈತರು ತಮ್ಮ ಊರುಗಳಿಗೆ ವಾಪಸಾಗಲು ಶುರು ಮಾಡುತ್ತಿದ್ದಂತೆ, ದೆಹಲಿ–ಸೋನಿಪತ್–ಕರ್ನಾಲ್ ಹೆದ್ದಾರಿಯಲ್ಲಿ ವಾಹನ ದಟ್ಟಣೆ ಉಂಟಾಯಿತು. ಪಂಜಾಬ್, ಹರಿಯಾಣಕ್ಕೆ ತೆರಳುವ ನೂರಾರು ಟ್ರ್ಯಾಕ್ಟರ್‌ಗಳು ಸಾಲುಗಟ್ಟಿದ್ದವು. ದೆಹಲಿ–ರೋಹ್ಟಕ್ ಗಡಿಯಲ್ಲೂ ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಸಂಚಾರ ನಿರ್ವಹಣೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು
- ಹಿಸ್ಸಾರ್‌ನ ಧಂಡೂರ್ ಗ್ರಾಮಪದ ಸಮೀಪ ರೈತರ ಟ್ರ್ಯಾಕ್ಟರ್‌ಗೆ ಟ್ರಕ್ ಡಿಕ್ಕಿಯಾಗಿ, ಪಂಜಾಬ್‌ನ ಇಬ್ಬರು ಮೃತಪಟ್ಟಿದ್ದಾರೆ
- ಸಿಂಘು ಗಡಿಯಲ್ಲಿ ಕೆಲವೇ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿ ಇದ್ದರು. 'ಶ್ರದ್ಧೆಯಿಂದ ನಮ್ಮ ಕರ್ತವ್ಯ ನಿರ್ವಹಿಸಿದ್ದೇವೆ. ಪ್ರತಿಭಟನಕಾರರು ಸ್ಥಳ ತೆರವು ಮಾಡುವುದರಿಂದ ವಾಹನ ಸವಾರರಿಗೆ ಸಾಕಷ್ಟು ನೆರವಾಗಲಿದೆ' ಎಂದು ಸಿಂಘು ಗಡಿಯಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿ ತಿಳಿಸಿದರು
- ಸಿಖ್ ಸಮುದಾಯದ ಸಮುದಾಯ ಅಡುಗೆಮನೆಗಳಲ್ಲಿ ಕೊಳೆಗೇರಿಗಳ ಜನರು ಹಾಗೂ ಬಡ ಮಕ್ಕಳು ಈವರೆಗೂ ನಿತ್ಯ ಊಟ ಮಾಡುತ್ತಿದ್ದರು. ರೈತರ ಪ್ರತಿಭಟನೆ ಮುಗಿದಿದ್ದು, ಮಕ್ಕಳು ತಮ್ಮ ನಿತ್ಯದ ಊಟಕ್ಕೆ ಪರ್ಯಾಯ ಮಾರ್ಗ ಹುಡುಕಿಕೊಳ್ಳಬೇಕಿದೆ

ಅದ್ದೂರಿ ಸ್ವಾಗತ

ಒಂದು ವರ್ಷದ ಪ್ರತಿಭಟನೆ ಮುಗಿಸಿ ತಮ್ಮ ಊರುಗಳಿಗೆ ವಾಪಸಾದ ರೈತರನ್ನು ಬರಮಾಡಿಕೊಳ್ಳಲು ಟೋಲ್ ಪ್ಲಾಜಾ ಹಾಗೂ ಹೆದ್ದಾರಿಯ ಹಲವು ಕಡೆಗಳಲ್ಲಿ ಗ್ರಾಮಸ್ಥರು ಸೇರಿದ್ದರು. ರೈತರಿಗೆ ಹೂ ನೀಡಿ ಸ್ವಾಗತಿಸಿ, ಲಡ್ಡು, ಬರ್ಫಿ ಹಂಚಿ ಸಂಭ್ರಮಿಸಿದರು. ಪಂಜಾಬ್‌ನ ಖನೌರಿ ಎಂಬಲ್ಲಿ ಗ್ರಾಮಸ್ಥರು ಪಟಾಕಿ ಸಿಡಿಸಿ ಸ್ವಾಗತಿಸಿದರು. ಬಸ್ತಾರ ಟೋಲ್ ಪ್ಲಾಜಾ ಮತ್ತು ಅಂಬಾಲ ಸಮೀಪದ ಶಂಭು ಗಡಿಯಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

ತಮ್ಮ ಕುಟುಂಬ ಸದಸ್ಯರನ್ನು ಕರೆದೊಯ್ಯಲು ಕೆಲವರು ಸಿಂಘು ಗಡಿಗೆ ಧಾವಿಸಿದ್ದರು.

ಕರೆ ಮಾಡಿದಾಗ, 'ಪಪ್ಪಾ ಯಾವಾಗ ಬರ್ತೀಯಾ' ಎಂದು ಮಕ್ಕಳು ಕೇಳುತ್ತಿದ್ದರು. ಆ ಕ್ಷಣ ಬಂದಿದೆ. ವರ್ಷದ ಬಳಿಕ ಭೇಟಿಗೆ ಮಕ್ಕಳು ಕಾತರದಿಂದ ಕಾಯುತ್ತಿದ್ದಾರೆ

ಭೂಪೇಂದರ್ ಸಿಂಗ್, ರೈತ

ಇದೊಂದು ಭಾವನಾತ್ಮಕ ಸನ್ನಿವೇಶ. ಪ್ರತಿಭಟನೆಯ ಸ್ಥಳ ಹಾಗೂ ಇಲ್ಲಿನ ಜತೆಗಾರರನ್ನು ಬಿಟ್ಟು ಹೊರಡುವುದು ಇಷ್ಟೊಂದು ಕಠಿಣ ಆಗಬಹುದು ಎಂದು ಭಾವಿಸಿರಲಿಲ್ಲ

ಗುರುವಿಂದರ್ ಸಿಂಗ್, ಅಂಬಾಲದ ರೈತ

ಮೂರು ಪತ್ರ ಮೂರು ಸಾಕ್ಷ್ಯ

ರಾಜ್ಯದಲ್ಲಿ ಸಿವಿಲ್, ಎಲೆಕ್ಟ್ರಿಕಲ್ ಸೇರಿದಂತೆ ವಿವಿಧ ಬಗೆಯ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರು ಸದಸ್ಯರಾಗಿರುವ 52 ಅಸೋಸಿಯೇಷನ್‌ಗಳು ರಾಜ್ಯ ಗುತ್ತಿಗೆದಾರರ ಸಂಘದ ಸದಸ್ಯತ್ವ ಪಡೆದಿವೆ. ಈ ಸಂಘವು ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಂದರೆ ಜುಲೈ 7ರಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಕಾಮಗಾರಿಯ ಶೇ 40ರಷ್ಟು ಮೊತ್ತ ಲಂಚಕ್ಕೆ ಹೋಗುತ್ತಿದೆ ಎಂದು ದೂರು ನೀಡಿತ್ತು. ನವೆಂಬರ್ 18ರಂದು ರಾಜ್ಯಪಾಲರನ್ನು ಭೇಟಿಯಾಗಿ ಮತ್ತೊಂದು ಅಹವಾಲನ್ನೂ ಸಲ್ಲಿಸಿತು. ಭ್ರಷ್ಟಾಚಾರ ಇಷ್ಟು ವ್ಯಾಪಕವಾಗಿ ಹರಡಿಕೊಂಡಿರುವ ಬಗ್ಗೆ ಗುತ್ತಿಗೆದಾರರೇ ಬಹಿರಂಗವಾಗಿ ಬೀದಿಗೆ ಬಂದಿದ್ದು ಇದು ಮೊದಲು.

2020ರ ನವೆಂಬರ್ 24ರಂದು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದ ಮಂಡ್ಯ ಜಿಲ್ಲೆ ಮದ್ದೂರಿನ ಆರ್.ಬಿ. ಬಸವೇಗೌಡ ಎಂಬುವರು 'ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ವಿಜಯೇಂದ್ರ ಹಾಗೂ ನಿಮ್ಮ ಕುಟುಂಬದ ಆಪ್ತ ಉಮೇಶ ಹೆಸರನ್ನು ದುರುಪಯೋಗ ಪಡಿಸಿಕೊಂಡು ಶೇ 8ರಷ್ಟು ಕಮಿಷನ್ ಪಡೆಯುತ್ತಿದ್ದಾರೆ. ನಿಯಮ ಉಲ್ಲಂಘನೆ ಮಾಡಿ ಬಿಲ್ಲುಗಳನ್ನು ಪಾವತಿ ಮಾಡುತ್ತಿದ್ದಾರೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಿ' ಎಂದು ಆಗ್ರಹಿಸಿದ್ದರು. ಈ ಪತ್ರವನ್ನು (ಎಫ್‌ಡಿ/433/ಎಫ್‌ಸಿ1/2020–ಪಿಎಬ್ಲ್ಯುಎಫ್‌ಎಸ್‌ಸಿ–ಫೈನಾನ್ಸ್ ಸೆಕ್ರೆಟರಿ) ಮುಖ್ಯಮಂತ್ರಿ ಅಧೀನ ಕಾರ್ಯದರ್ಶಿಯು ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಕಳುಹಿಸಿದ್ದರು.

'ಹಿಂದಿನ ಸರ್ಕಾರಕ್ಕಿಂತ ಬಿಜೆಪಿ ಸರ್ಕಾರದಲ್ಲಿ ಮೂರು ಪಟ್ಟು ಲಂಚ ಹೆಚ್ಚಳವಾಗಿರುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದೇವೆ. ಲಂಚದ ಕುರಿತು ಮಾರ್ಚ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆಯಲಾಗಿದೆ. ಭ್ರಷ್ಟ ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿ ಮುಖ್ಯಮಂತ್ರಿಗೆ ನೀಡುತ್ತೇವೆ' ಎಂದು ನವೆಂಬರ್ 30ರಂದು ಧಾರವಾಡದಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ಉತ್ತರ ಕರ್ನಾಟಕ ಸಿವಿಲ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸುಭಾಷ ಪಾಟೀಲ ಹೇಳಿದ್ದರು. ಭ್ರಷ್ಟಾಚಾರ ಹೇಗೆ ನಡೆಯುತ್ತಿದೆ ಎಂದೂ ಅವರು ಪತ್ರದಲ್ಲಿ ವಿವರಿಸಿದ್ದರು.

ಅಭಿಪ್ರಾಯಗಳು

'ಮೌಲ್ಯಗಳ ಕುಸಿತ ಕಾರಣ'



ಸಮಾಜದಲ್ಲಿ ಮೌಲ್ಯಗಳು ಕುಸಿದುಹೋಗುತ್ತಿವೆ. ಅಧಿಕಾರದಲ್ಲಿ ಇರುವವರು ಮತ್ತು ಶ್ರೀಮಂತರಿಗೆ ಮಾತ್ರ ಗೌರವ ಸಿಗುತ್ತಿದೆ. ನಾನು ಚಿಕ್ಕವನಿದ್ದಾಗ ಜೈಲಿಗೆ ಹೋಗಿ ಬಂದವರನ್ನು ಸಮಾಜ ಕಡೆಗಣಿಸುತ್ತಿತ್ತು. ಈಗ ಅವರಿಗೆ ಹಾರ ಹಾಕಿ ಕರೆತರಲಾಗುತ್ತಿದೆ. ಸಾಮಾಜಿಕ ಮೌಲ್ಯಗಳನ್ನು ಶಾಲೆಗಳಲ್ಲೂ ಹೇಳಿಕೊಡುತ್ತಿಲ್ಲ. ಪೋಷಕರೂ ಕಲಿಸುತ್ತಿಲ್ಲ. ಇದರಿಂದಾಗಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ಮೌಲ್ಯಗಳನ್ನು ಕಲಿಸುವ ಕೆಲಸ ಆಗಬೇಕಿದೆ.

ಎನ್.ಸಂತೋಷ್ ಹೆಗ್ಡೆ, ನಿವೃತ್ತ ನ್ಯಾಯಮೂರ್ತಿ

'ಮೋದಿ ಸರ್ಕಾರದ ಸಾಧನೆ'



10 ಪರ್ಸೆಂಟ್ ಸರ್ಕಾರ ಎಂದು ಹಿಂದಿನ ಕಾಂಗ್ರೆಸ್ ಸರ್ಕಾರವನ್ನು ಗೇಲಿ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಪಕ್ಷದ ಸಾಧನೆ ಆ ಕಮಿಷನ್ ಅನ್ನು ಶೇ 40ಕ್ಕೆ ಏರಿಸಿರುವುದು. ಕಾಮಗಾರಿಗಳ ಗುಣಮಟ್ಟ ಪರಿಶೋಧನಾ ಸಂಸ್ಥೆಗಳು ಸತ್ತು ಬಹಳ ವರ್ಷಗಳೇ ಆಗಿವೆ. ಪ್ರಧಾನಿಯವರೇ, ಶೇ 40 ರಷ್ಟು ಲಂಚವನ್ನು ದಯವಿಟ್ಟು ಶೇ 10ಕ್ಕೆ ಇಳಿಸಿ. ಅದನ್ನು ಸೊನ್ನೆಗೆ ತರುವ ಕೆಲಸವನ್ನು ನಾವು ಮಾಡುತ್ತೇವೆ.

ರವಿಕೃಷ್ಣಾರೆಡ್ಡಿ, ರಾಜ್ಯಾಧ್ಯಕ್ಷ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

'ಬೆಳೆ ಮೇಯುತ್ತಿರುವ ಬೇಲಿ'



ಶೇ 40ರಷ್ಟು ಲಂಚದ ಬಗ್ಗೆ ಗುತ್ತಿಗೆದಾರರ ಸಂಘ ಮಾಡಿರುವ ಆರೋಪದಲ್ಲಿ ಸುಳ್ಳಿಲ್ಲ. ಭ್ರಷ್ಟಾಚಾರ ಕಡಿವಾಣಕ್ಕೆ ಈ ಸರ್ಕಾರ ತಂದ ಸುಧಾರಣೆ ಏನು? ಬೇಲಿಯೇ ಎದ್ದು ಬೆಳೆಗಳನ್ನು ಮೇಯುತ್ತಿದೆ. ಜವಾಬ್ದಾರಿಯುತ ಪ್ರಾಮಾಣಿಕ ಜನರೂ ಸಮಾಜದಲ್ಲಿ ಇದ್ದಾರೆ ಎಂಬುದನ್ನು ತೋರಿಸಬೇಕಾಗಿದೆ. ಈ ವ್ಯವಸ್ಥೆಯನ್ನು ಮೇಲ್ನೋಟಕ್ಕೆ ಮಾತ್ರವಲ್ಲ, ಒಳಗಿನಿಂದಲೇ ಸ್ವಚ್ಛಗೊಳಿಸುವ ಕೆಲಸ ಆಗಬೇಕಿದೆ.

ಎ.ಟಿ.ರಾಮಸ್ವಾಮಿ, ಜೆಡಿಎಸ್ ಶಾಸಕ

'ಅಭಿಯೋಜನಾ ಮಂಜೂರಾತಿ ರದ್ದಾಗಲಿ'



'ಭ್ರಷ್ಟರ ವಿರುದ್ಧ ತನಿಖೆಗೆ ಅಭಿಯೋಜನಾ ಮಂಜೂರಾತಿ ಪಡೆಯಬೇಕು ಎಂಬ ನಿಯಮ ಇದೆ. ಈ ಕಾನೂನು ಭ್ರಷ್ಟರನ್ನು ಅನಾಯಾಸವಾಗಿ ರಕ್ಷಣೆ ಮಾಡುತ್ತಿದೆ. ಮಂಜೂರಾತಿ ಕೊಡುವವರೂ ನಮ್ಮವರೇ ಆಗಿದ್ದಾರೆ ಎಂಬ ನಂಬಿಕೆ ಭ್ರಷ್ಟರಲ್ಲಿ ಹೆಚ್ಚಾಗುತ್ತಿದೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯಲ್ಲಿನ ಈ ಕಲಂ ಅನ್ನೇ ತೆಗೆಯಬೇಕು. ಭ್ರಷ್ಟಾಚಾರ ಮಾಡಿದರೆ ಜೈಲಿಗೆ ಹೋಗುವುದು ಗ್ಯಾರಂಟಿ ಎಂಬ ಭಯ ಮೂಡಬೇಕಿದೆ.

ಆದರ್ಶ ಅಯ್ಯರ್, ಜನಾಧಿಕಾರ ಸಂಘರ್ಷ ಪರಿಷತ್

'ಒಂದಾದರೂ ದಾಖಲೆ ಕೊಡಿ'



ಯಾವುದೇ ಗುತ್ತಿಗೆದಾರ ಶೇ 40 ರಷ್ಟು ಕಮಿಷನ್ ಕೊಟ್ಟು ಕಾಮಗಾರಿ ಮಾಡಲು ಅವನ ಬಳಿ ಹಣ ಉಳಿಯುತ್ತದೆಯೇ? ಅಷ್ಟು ಕಮಿಷನ್ ಕೊಟ್ಟು ಕಾಮಗಾರಿ ಮಾಡುವುದರಿಂದ ಆತನಿಗೆ ಆಗುವ ಲಾಭವಾದರೂ ಏನು? ಕಿಂಚಿತ್ತು ಲಾಭ ಇಲ್ಲದೇ ಯಾವುದೇ ಗುತ್ತಿಗೆದಾರರು ಕಾಮಗಾರಿ ಮಾಡಲು ಸಾಧ್ಯವೆ? ಗುತ್ತಿಗೆದಾರರು ತಮ್ಮ ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಯಾಗಿ ಒಂದು ತುಂಡು ಕಾಗದವನ್ನಾದರೂ ಮುಂದಿಟ್ಟಿದ್ದಾರೆಯೇ? ಈಗಲೂ ಪುರಾವೆ ನೀಡಬಹುದಾಗಿದೆ. ಮುಖ್ಯಮಂತ್ರಿಯವರು ಈಗಾಗಲೇ ತನಿಖೆಗೆ ಆದೇಶಿಸಿದ್ದಾರೆ.


ಸಿ.ಸಿ.ಪಾಟೀಲ, ಲೋಕೋಪಯೋಗಿ ಸಚಿವ

'ಶೇ 39 ರಷ್ಟು ಹಣದಲ್ಲಿ ಕಾಮಗಾರಿ ಸಾಧ್ಯವೆ?'



ಶೇ40 ರಷ್ಟು ಕಮಿಷನ್ ನೀಡಬೇಕು ಎಂಬ ಆರೋಪ ಮಾಡಿದ್ದಾರೆ. ಗುತ್ತಿಗೆದಾರ ಆದಾಯ ತೆರಿಗೆ, ಜಿಎಸ್‌ಟಿ, ರಾಯಧನ ಮತ್ತು ಲೇಬರ್ ಸೆಸ್‌ಗಳಿಗಾಗಿ ಒಟ್ಟು ಶೇ 21 ರಷ್ಟು ಪಾವತಿ ಮಾಡಬೇಕು. ಹೀಗೆ ಒಟ್ಟು ಶೇ 61 ರಷ್ಟು ಕೊಟ್ಟು ಉಳಿಯುವ ಮೊತ್ತದಲ್ಲಿ ಕಾಮಗಾರಿಗಳನ್ನು ಯಾರು ಮಾಡಲು ಸಾಧ್ಯ? ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಲ್ಲ ಅಭ್ಯರ್ಥಿಗಳ ಘೋಷಿತ ಆಸ್ತಿ ₹2270 ಕೋಟಿ ಇತ್ತು. ಬಿಜೆಪಿಯ ಎಲ್ಲ ಅಭ್ಯರ್ಥಿಗಳದ್ದು ಸೇರಿ ₹500 ಕೋಟಿ ಇದೆ. ಇದರಲ್ಲೇ ಗೊತ್ತಾಗುತ್ತೇ ಯಾರು ಶೇ 40 ಕಮಿಷನ್ ಹೊಡೆದವರು ಎನ್ನುವುದು.

ಗೋವಿಂದ ಕಾರಜೋಳ, ಜಲಸಂಪನ್ಮೂಲ ಸಚಿವ



ಸರ್ಕಾರದ ಅನುದಾನವಿಲ್ಲ: ಖಾಸಗಿಯವರೇ ಹಣ ಹೂಡಿದರೂ 'ಪಾಲು' ತಪ್ಪಲ್ಲ

ಬಸವಳಿದ ಪಿಪಿಪಿ ಯೋಜನೆಗಳು!

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ನಗರಾಭಿವೃದ್ಧಿ, ರಸ್ತೆ ನಿರ್ಮಾಣ, ಕೈಗಾರಿಕಾ ಬಡಾವಣೆಗಳ ಅಭಿವೃದ್ಧಿಯಂತಹ ಬೃಹತ್ ಯೋಜನೆಗಳಲ್ಲಿ ಬೊಕ್ಕಸದ ಮೇಲಿನ ಹೊರೆಯನ್ನು ತಗ್ಗಿಸುವುದಕ್ಕಾಗಿ ಸರ್ಕಾರಿ– ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ಈ ಕಾಮಗಾರಿಗಳಿಗೆ ಸರ್ಕಾರ ಯಾವುದೇ ಅನುದಾನವನ್ನೂ ನೀಡುತ್ತಿಲ್ಲ. ಆದರೂ, ಲಂಚಕ್ಕಾಗಿ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಪಿಪಿಪಿ ಯೋಜನೆಗಳ ಅನುಷ್ಠಾನಕ್ಕೆ ಅಡಿಗಡಿಗೂ ಅಡ್ಡಿಪಡಿಸುತ್ತಿದ್ದಾರೆ.

ಪಿಪಿಪಿ ಯೋಜನೆಗಳಲ್ಲಿ ಗುತ್ತಿಗೆದಾರರೇ ಪೂರ್ಣ ಮೊತ್ತವನ್ನು ಹೂಡಿಕೆ ಮಾಡಬೇಕು. ಕಾಮಗಾರಿ ಪೂರ್ಣಗೊಂಡ ಬಳಿಕ ಉಳಿತಾಯ, ಟೋಲ್ ಸಂಗ್ರಹ ಸೇರಿದಂತೆ ವಿವಿಧ ಮಾನದಂಡಗಳ ಆಧಾರದಲ್ಲಿ ಗುತ್ತಿಗೆದಾರರಿಗೆ ಹಣ ಸಂದಾಯವಾಗುತ್ತದೆ. ಹೂಡಿಕೆ ಮಾಡಿದ ಮೊತ್ತ ಹಿಂದಿರುಗಲು ವರ್ಷಗಳವರೆಗೆ ಕಾಯಬೇಕಿದೆ. ಕಾಮಗಾರಿ ಆರಂಭಕ್ಕೂ ಮೊದಲೇ ಕೋಟಿಗಟ್ಟಲೆ 'ಕಾಣಿಕೆ'ಯನ್ನು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಸಂದಾಯ ಮಾಡಬೇಕಾದ ಸ್ಥಿತಿ ಇದೆ ಎಂಬುದು ಗುತ್ತಿಗೆದಾರರ ದೂರು.

ಬೆಂಗಳೂರು, ಹುಬ್ಬಳ್ಳಿ– ಧಾರವಾಡ, ಬೆಳಗಾವಿ, ಮಂಗಳೂರು, ದಾವಣಗೆರೆ, ಶಿವಮೊಗ್ಗ ಮತ್ತು ತುಮಕೂರು ನಗರಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನದಲ್ಲಿದೆ. ಒಟ್ಟು ₹ 39,993 ಕೋಟಿ ವೆಚ್ಚದಲ್ಲಿ 2,127 ಕಾಮಗಾರಿಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿದೆ. ಇವುಗಳಲ್ಲಿ ಅರ್ಧದಷ್ಟು ಕಾಮಗಾರಿಗಳು ಪಿಪಿಪಿ ಮಾದರಿಯಲ್ಲೇ ಇವೆ.

'ಪಿಪಿಪಿ ಮಾದರಿಯ ಯೋಜನೆಗಳಲ್ಲಿ ಅನುದಾನ ಬಿಡುಗಡೆ, ಬಿಲ್ ಪಾವತಿಯ ಪ್ರಮೇಯ ಉದ್ಭವಿಸುವುದಿಲ್ಲ. ಹೀಗಾಗಿ ಟೆಂಡರ್ ಪ್ರಕ್ರಿಯೆ, ಒಪ್ಪಂದ ಮತ್ತು ಕಾಮಗಾರಿ ಆರಂಭಿಸುವ ಮುನ್ನವೇ ತಮ್ಮ 'ಪಾಲು' ಸಂದಾಯ ಆಗಲೇಬೇಕು ಎಂಬುದು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಬೇಡಿಕೆ. ಇದಕ್ಕಾಗಿ ಎಲ್ಲ ಹಂತದಲ್ಲೂ ಗುತ್ತಿಗೆದಾರರಿಗೆ ಕಿರುಕುಳ ನೀಡಲಾಗುತ್ತಿದೆ. ಸ್ಮಾರ್ಟ್ ಸಿಟಿಯಲ್ಲಿನ ಪಿಪಿಪಿ ಕಾಮಗಾರಿಗಳ ವಿಳಂಬಕ್ಕೆ ಇದೇ ಕಾರಣ' ಎನ್ನುತ್ತಾರೆ ವಿವಿಧ ಸ್ಮಾರ್ಟ್ ಸಿಟಿಗಳಲ್ಲಿ ಕಾಮಗಾರಿಗಳ ಗುತ್ತಿಗೆ ಪಡೆದಿರುವ ಸಂಸ್ಥೆಯೊಂದರ ಪಾಲುದಾರರೊಬ್ಬರು.

ಟೆಂಡರ್ ಹಂತದಲ್ಲೇ ಅಡ್ಡಗಾಲು: ಪಿಪಿಪಿ ಕಾಮಗಾರಿಗಳಲ್ಲಿ ಲಂಚಕ್ಕಾಗಿ ಟೆಂಡರ್ ಹಂತದಲ್ಲೇ ಅತಿಯಾದ ಒತ್ತಡ ಹೇರಲಾಗುತ್ತಿದೆ ಎಂಬ ದೂರುಗಳಿವೆ. ಲಂಚದ ಮೊತ್ತ ತಲುಪಿಸದವರು ಅಥವಾ ಹಣ ಕೊಡಲು ನಿರಾಕರಿಸಿದವರು ಯಶಸ್ವಿ ಬಿಡ್‌ದಾರರಾದರೆ ಯಾವುದೇ ಕಾರಣ ನೀಡದೆ ಟೆಂಡರ್ ಪ್ರಕ್ರಿಯೆಯನ್ನೇ ರದ್ದುಗೊಳಿಸಲಾಗುತ್ತದೆ. ಮರು ಟೆಂಡರ್ ಆಹ್ವಾನಿಸಿ ತಮ್ಮ ಬೇಡಿಕೆ ಪೂರೈಸಲು ಒಪ್ಪಿದವರಿಗೆ ಗುತ್ತಿಗೆ ನೀಡುವ ವ್ಯವಸ್ಥೆ ಇದೆ ಎಂಬ ಆರೋಪವಿದೆ.

ಏಳು ಸ್ಮಾರ್ಟ್ ಸಿಟಿಗಳಲ್ಲಿ 1,578 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಕ್ರಿಯೆ ಆರಂಭಿಸಲಾಗಿತ್ತು. ಯೋಜನೆಯ ಅವಧಿ ಪೂರ್ಣಗೊಳ್ಳುತ್ತಾ ಬಂದರೂ 505 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿವೆ. 799 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. 823 ಕಾಮಗಾರಿಗಳ ಗುತ್ತಿಗೆಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಈ ಅಂಕಿಅಂಶಗಳು ಪಿಪಿಪಿ ಮಾದರಿಯ ಯೋಜನೆಗಳೂ ಸೇರಿದಂತೆ ಸ್ಮಾರ್ಟ್ ಸಿಟಿಗಳಲ್ಲಿ ನಡೆಯುತ್ತಿರುವ 'ಲಂಚಾವತಾರ'ದ ಆರೋಪಕ್ಕೆ ಪುಷ್ಟಿ ನೀಡುವಂತಿವೆ.

ಲೋಕೋಪಯೋಗಿ ಇಲಾಖೆಯಲ್ಲಿ ಟೋಲ್ ರಸ್ತೆಗಳ ನಿರ್ಮಾಣದಲ್ಲೂ ಪಿಪಿಪಿ ಮಾದರಿ ಅನುಸರಿಸಲಾಗುತ್ತಿದೆ. ರಾಜ್ಯದ ಕೆಲವು ಕೈಗಾರಿಕಾ ಬಡಾವಣೆಗಳ ಅಭಿವೃದ್ಧಿಗೂ ಇದೇ ಮಾದರಿಯ ಮೊರೆ ಹೋಗಲಾಗುತ್ತಿದೆ. ಈ ಎಲ್ಲ ಕಡೆಗಳಲ್ಲೂ ಮುಂಗಡ ಲಂಚದ ಬೇಡಿಕೆ ದಟ್ಟವಾಗಿದೆ. ಈ ಕಾರಣಕ್ಕಾಗಿಯೇ ಪಿಪಿಪಿ ಮಾದರಿಯ ಬಹುತೇಕ ಯೋಜನೆಗಳು ತೆವಳುತ್ತಾ, ಕುಂಟುತ್ತಾ ಸಾಗುತ್ತಿವೆ ಎನ್ನುವುದು ಈ ಪ್ರಕ್ರಿಯೆಯ ಒಳ–ಹೊರಗನ್ನು ಬಲ್ಲ ಗುತ್ತಿಗೆದಾರರ ಮಾತು.

ಮುಂಗಡ ಬಿಡುಗಡೆಯಲ್ಲೂ ದಂಧೆ

ಬೃಹತ್ ಹೆದ್ದಾರಿಗಳ ನಿರ್ಮಾಣ ಸೇರಿದಂತೆ ಪಿಪಿಪಿ ಮಾದರಿಯ ಕೆಲವು ಕಾಮಗಾರಿಗಳಿಗೆ ಸರ್ಕಾರವೇ ಖಾತರಿ ನೀಡಿ ಮುಂಗಡ ಹಣದ ವ್ಯವಸ್ಥೆ ಮಾಡುತ್ತಿದೆ. ಕೆಲವು ಕಂಪನಿಗಳಿಗೆ ಹೀಗೆ ಸಾವಿರಾರು ಕೋಟಿ ರೂಪಾಯಿ ಮುಂಗಡ ನೀಡಲಾಗಿದೆ. ಅದಕ್ಕೆಲ್ಲವೂ ರಾಜ್ಯ ಸರ್ಕಾರದ್ದೇ ಖಾತರಿ. ಈ ಪ್ರಕ್ರಿಯೆಯಲ್ಲೂ ಭಾರಿ ಪ್ರಮಾಣದ ಲಂಚ ಕೈ ಬದಲಾಗುತ್ತಿರುವ ಆರೋಪವಿದೆ.

'ಅಧಿಕಾರಿಗಳು ಮತ್ತು ರಾಜಕಾರಣಿಗಳೇ ಖುದ್ದು ಆಸ್ಥೆ ವಹಿಸಿ ಮುಂಗಡ ಕೊಡಿಸುತ್ತಿದ್ದಾರೆ. 'ಪಾಲು' ಪಡೆದುಕೊಂಡೇ ಇದೆಲ್ಲವನ್ನೂ ಮಾಡುತ್ತಿದ್ದಾರೆ' ಎನ್ನುತ್ತಾರೆ ಈ ಪ್ರಕ್ರಿಯೆಯ ಕುರಿತು ಮಾಹಿತಿ ಹೊಂದಿರುವ ಅಧಿಕಾರಿಯೊಬ್ಬರು.

ಲಂಚ ಸಂಗ್ರಹಕ್ಕೆ ಅಧಿಕಾರಿಗಳು

ಲೋಕೋಪಯೋಗಿ, ಜಲ ಸಂಪನ್ಮೂಲ ಸೇರಿದಂತೆ ಬೃಹತ್ ಕಾಮಗಾರಿಗಳನ್ನು ಕೈಗೊಳ್ಳುವ ಇಲಾಖೆಗಳಲ್ಲಿ ಟೆಂಡರ್ ಅನುಮೋದನೆ ನೀಡುವ ಮುನ್ನ ಹಾಗೂ ಬಿಲ್ ಪಾವತಿ ಸಂದರ್ಭಗಳಲ್ಲಿ ಲಂಚದ ಮೊತ್ತ ಸಂಗ್ರಹಿಸುವುದಕ್ಕಾಗಿಯೇ ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪಿಸುತ್ತಾರೆ.

'ಮೋದಿ ಮೌನಕ್ಕೆ ಕಾರಣವೇನು?'



ಟೆಂಡರ್ ಪ್ರಕ್ರಿಯೆಯಲ್ಲಿ ಮಂತ್ರಿಗಳು, ಅಧಿಕಾರಿಗಳಿಗೆ ಶೇಕಡ 40ರಷ್ಟು ಲಂಚ ಕೊಡಬೇಕು ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೇರವಾಗಿ ದೂರು ನೀಡಿದ್ದಾರೆ. ಈ ವಿಚಾರದಲ್ಲಿ ಮೋದಿಯವರ ಮೌನಕ್ಕೆ ಕಾರಣವೇನು? ಕುರಿ ಕಾಯಲು ತೋಳ ಎಂಬಂತೆ ಆಗಬಾರದು. ಸುಪ್ರೀಂಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕು.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಎಲ್ಲರೂ ಗಾಜಿನ ಮನೆಯಲ್ಲಿದ್ದೇವೆ'



ಟೆಂಡರ್‌ನಲ್ಲಿ ಲಂಚದ ಆರೋಪದ ವಿಚಾರದಲ್ಲಿ ಎಲ್ಲರೂ ಗಾಜಿನ ಮನೆಯಲ್ಲೇ ಇದ್ದೇವೆ. ಕಾಂಗ್ರೆಸ್, ಜೆಡಿಎಸ್ ಸರ್ಕಾರ ಇದ್ದಾಗಲೂ ಇದು ನಡೆದಿದೆ. ಕಮಿಷನ್ ಪ್ರಮಾಣದಲ್ಲಿ ಈಗ ಹೆಚ್ಚಳ ಆಗಿರಬಹುದು. ನಾನು ಮುಖ್ಯಮಂತ್ರಿ ಆಗಿದ್ದಾಗಲೇ ಕೆಲವರು ಇಂತಹದ್ದನ್ನು ಮಾಡುತ್ತಿದ್ದರು. ಅನಿವಾರ್ಯ ಕಾರಣಕ್ಕೆ ಸುಮ್ಮನೆ ಇರಬೇಕಾಯಿತು. ರಾಜಕಾರಣಿಗಳು ತಿನ್ನದಿದ್ದರೂ ಅವರ ಹೆಸರಿನಲ್ಲಿ ಅಧಿಕಾರಿಗಳು ತಿನ್ನುತ್ತಾರೆ. ಜನರು ಬದಲಾದರೆ ಮಾತ್ರ ಇದಕ್ಕೆ ಕಡಿವಾಣ ಸಾಧ್ಯ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಪ್ರಧಾನಿ ಬಳಿಯೇ ಸಾಕ್ಷ್ಯವಿದೆ'



ರಾಜ್ಯ ಸರ್ಕಾರದ ಕಾಮಗಾರಿಗಳ ಗುತ್ತಿಗೆಯಲ್ಲಿ ಶೇಕಡ 40ರಷ್ಟು ಲಂಚದ ಹಾವಳಿ ಇದೆ ಎಂದು ಗುತ್ತಿಗೆದಾರರ ಸಂಘದವರೇ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ನೀಡಿದ್ದಾರೆ. ಇದಕ್ಕಿಂತ ಇನ್ನೇನು ಸಾಕ್ಷ್ಯ ಬೇಕು. ಪ್ರಧಾನಿಯವರು ಹಿಂದೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಧಾರಗಳಿಲ್ಲದೇ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಈಗ ಎಲ್ಲವೂ ಅವರ ಮುಂದೆಯೇ ಇದೆ.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಕಾರ್ಯಾದೇಶಕ್ಕೂ ಮುನ್ನವೇ ಮುಗಿಯುವ ಕಾಮಗಾರಿ!

ನೆಪಕ್ಕಷ್ಟೇ ಕೆಲಸ: ಕಮಿಷನ್‌ಗೆ ಪಾಶ

• ಮಂಜುನಾಥ ಹೆಬ್ಬಾರ್

ಬೆಂಗಳೂರು: ಮೂಲಸೌಕರ್ಯ ಕಾಮಗಾರಿಯ ಅಂದಾಜುಪಟ್ಟಿಯಲ್ಲಿ ಉಲ್ಲೇಖಿಸುವ ಸ್ಥಳವೇ ಬೇರೆ, ಕಾಮಗಾರಿ ಅನುಷ್ಠಾನಗೊಳಿಸುವ ಸ್ಥಳವೇ ಬೇರೆ. ಅಂದಾಜುಪಟ್ಟಿಯಲ್ಲಿ ನಮೂದಿಸುವ ಸಾಮಗ್ರಿಯೇ ಒಂದು, ಬಳಸುವುದೇ ಮತ್ತೊಂದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕಾಮಗಾರಿ ವೇಳೆ ಪಾಲಿಕೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ನಡೆಸುವ ಭ್ರಷ್ಟಾಚಾರದ ಒಂದು ಮಾದರಿ ಇದು.

'ಕಳೆದ ಐದು ವರ್ಷಗಳಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ 11,283.05 ಕಿಲೋಮೀಟರ್ ಉದ್ದದ ರಸ್ತೆಗಳ ಕಾಮಗಾರಿಗೆ ₹ 20,060 ಕೋಟಿ ವೆಚ್ಚ ಮಾಡಲಾಗಿದೆ. ಆದರೆ, ನಗರದ ವ್ಯಾಪ್ತಿಯಲ್ಲಿ ಸಂಪೂರ್ಣ ದೋಷರಹಿತವಾಗಿರುವ 1 ಕಿ.ಮೀ. ರಸ್ತೆ ಕೂಡ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಧಿವೇಶನದಲ್ಲೇ ಹೇಳಿದ್ದರು. ಪಾಲಿಕೆ ವ್ಯಾಪ್ತಿಯಲ್ಲಿ 1 ಕಿ.ಮೀ. ಉದ್ದದಷ್ಟಾದರೂ ಬಿರುಕು ರಹಿತ, ಗುಂಡಿಗಳಿಲ್ಲದ, ಉಬ್ಬು ಮತ್ತು ತಗ್ಗುಗಳಿಲ್ಲದ, ದೋಷರಹಿತ ರಸ್ತೆ ಸಿಗುವುದೇ ಇಲ್ಲ. ನವೆಂಬರ್‌ನಲ್ಲಿ ಸುರಿದ ಮಳೆಯಿಂದಾಗಿ ರಸ್ತೆಗಳ ನೈಜ ಬಣ್ಣ ಬಯಲಾಗಿದೆ.

ಮಳೆಗಾಲದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದು, ಪ್ರವಾಹ ಪರಿಹಾರ ಮುಂತಾದ ಕಾಮಗಾರಿಗಳನ್ನು ಟೆಂಡರ್ ಕರೆಯದೆಯೇ ತರಾತುರಿಯಲ್ಲಿ ನಡೆಸಬೇಕಾಗುತ್ತದೆ. ಅಧಿಕಾರಿಗಳು ಅಕ್ರಮ ನಡೆಸುವುದಕ್ಕೆ ಇಂತಹ 'ತುರ್ತು ಕಾಮಗಾರಿ'ಗಳು ವರದಾನವಾಗಿವೆ. ತುರ್ತು ಕಾಮಗಾರಿಗಳಿಗೆ ದರ ಪಟ್ಟಿಯನ್ನು ಅನ್ವಯಿಸುವಾಗ ಅಧಿಕಾರಿಗಳು ನಾನಾ ರೀತಿಯ 'ಆಟ' ಆಡುತ್ತಾರೆ.

ತುರ್ತು ಕಾಮಗಾರಿ ಕೈಗೆತ್ತಿಕೊಂಡ ಬಳಿಕ ಅದರ ಬಿಲ್ ತಯಾರಿಸುವಾಗ ಯಾವ ಕಾಲದಲ್ಲಿ ಕಾಮಗಾರಿ ನಡೆಸಲಾಗಿದೆಯೋ ಅದೇ ಅವಧಿಯ ದರ ಪಟ್ಟಿಯನ್ನು ಪರಿಗಣಿಸಬೇಕು. ಆದರೆ, ರಸ್ತೆ ಗುಂಡಿ ಮುಚ್ಚಿ ಸ್ವಲ್ಪ ಸಮಯದ ನಂತರ ಎಂಜಿನಿಯರ್‌ಗಳು ಬಿಲ್ ತಯಾರಿಸಿದ ಉದಾಹರಣೆಗಳು ಸಾಕಷ್ಟಿವೆ. ಕಾಮಗಾರಿ ನಡೆದಾಗ ಜಾರಿಯಲ್ಲಿದ್ದ ದರ ಪಟ್ಟಿಯ ಬದಲು ಬಿಲ್ ತಯಾರಿಸಿದ ಅವಧಿಯ ದರ ಪಟ್ಟಿ ಪ್ರಕಾರ ಮೊತ್ತಗಳನ್ನು ನಮೂದಿಸಿದ್ದೂ ಉಂಟು.

ಕಾಮಗಾರಿ ಅನುಷ್ಠಾನಕ್ಕಾಗಿ ಟೆಂಡರ್ ಮೂಲಕ ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿ, ಕಾರ್ಯಾದೇಶ ನೀಡುವುದು ವಾಡಿಕೆ. ಆದರೆ, ಪಾಲಿಕೆಯಲ್ಲಿ ಕೆಲವು ಪವಾಡಗಳು ನಡೆಯುತ್ತವೆ. ಇಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವುದಕ್ಕೆ ಮುನ್ನವೇ ಕಾರ್ಯಾದೇಶ ನೀಡಲಾಗುತ್ತದೆ. ಕಾರ್ಯಾದೇಶ ನೀಡುವುದಕ್ಕೆ ಮುನ್ನವೇ ಕಾಮಗಾರಿಯೂ ಪೂರ್ಣಗೊಳ್ಳುತ್ತದೆ!

ಒಂದೇ ಜಾಬ್ ಕೋಡ್‌ನಲ್ಲಿ ಎರಡು ಬೇರೆ ಬೇರೆ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡಲು ಅವಕಾಶ ಇಲ್ಲ. ಆದರೆ, ಬಿಬಿಎಂಪಿಯ 'ಪ್ರಚಂಡ ಅಧಿಕಾರಿ'ಗಳು ಇದನ್ನೂ ಕೂಡ ಸಾಧ್ಯವಾಗಿಸಬಲ್ಲರು. ಒಂದೇ ಜಾಬ್ ಕೋಡ್‌ನಲ್ಲಿ ಎರಡೆರಡು ಕಾಮಗಾರಿಗಳನ್ನು ನಡೆಸಿದ್ದಲ್ಲದೇ, ಅವೆರಡಕ್ಕೂ ಬಿಬಿಎಂಪಿ ಎಂಜಿನಿಯರ್‌ಗಳು ಹಣ ಬಿಡುಗಡೆ ಮಾಡಿಸಿ ಹಗರಣ ನಡೆಸಿದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಐದು ವರ್ಷಗಳಲ್ಲಿ ರಸ್ತೆ ಡಾಂಬರೀಕರಣದ ವೆಚ್ಚ

ವರ್ಷ	ವೆಚ್ಚ (₹ ಕೋಟಿಗಳಲ್ಲಿ)
2015-16	1,678.45
2016-17	4,876.22
2017-18	2,830.51
2018-19	3,029.44
2019-20	5,371.73
2020-21	1,788.31
2021-22	435.33
ಒಟ್ಟು	20,060.02

ಕೆಆರ್‌ಐಡಿಎಲ್ ಕರಾಮತ್ತು

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ಇ–ಪ್ರೊಕ್ಯೂರ್‌ಮೆಂಟ್ ನಿಯಮ ಅನ್ವಯ ಆಗುವುದಿಲ್ಲ. ಕಾಮಗಾರಿ ನಡೆಸಲು ಟೆಂಡರ್ ಅಗತ್ಯವೂ ಇಲ್ಲ. 4ಜಿ ವಿನಾಯಿತಿ ಎಂಬ 'ಒಳ'ಮಾರ್ಗ ಇರುವ ಕಾರಣ ಕಾಮಗಾರಿಗಳ 'ಅಪಾಯಕಾರಿ ವೇಗ'ಕ್ಕೆ ಯಾವುದೇ ತಡೆಯೂ ಇಲ್ಲ.

ಕಸ ಎತ್ತುವುದರಿಂದ, ಮೋರಿ ಮುಚ್ಚುವುದರಿಂದ ಹಿಡಿದು ಕುಡಿಯುವ ನೀರು ಘಟಕಗಳ ಸ್ಥಾಪನೆ, ರಸ್ತೆಗಳ ಹಾಗೂ ಕಟ್ಟಡಗಳ ನಿರ್ಮಾಣ ಸೇರಿದಂತೆ ಎಲ್ಲ ಬಗೆಯ ಕಾಮಗಾರಿಗಳನ್ನು ಕೆಆರ್‌ಐಡಿಎಲ್ ನಡೆಸುತ್ತದೆ. ಹಾಗಂತ ಎಲ್ಲ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ಸಂಸ್ಥೆಯಿದು ಎಂದು ಭಾವಿಸಿದರೆ ಅದು ತಪ್ಪು. ಸಾವಿರಾರು ಕೋಟಿ ಮೊತ್ತದ ಕಾಮಗಾರಿ ನಡೆಸುವಷ್ಟು ತಜ್ಞ ಸಿಬ್ಬಂದಿ ನಿಗಮದ ಬಳಿ ಇಲ್ಲವೇ ಇಲ್ಲ. ತಾನು ಗುತ್ತಿಗೆ ಪಡೆದ ಕಾಮಗಾರಿಗಳನ್ನು ಅದು ಬೇಕಾದವರಿಗೆ ಉಪಗುತ್ತಿಗೆ ನೀಡುತ್ತದೆ. ನಗರದ ಜನಪ್ರತಿನಿಧಿಗಳು ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಇದು 'ಇಷ್ಟದ' ನಿಗಮ. ಹಿಂಬಾಲಕರಿಗೆ ಸುಲಭದಲ್ಲಿ ಗುತ್ತಿಗೆ ಕೊಡಿಸಲು ಆಗುತ್ತದೆ ಎಂಬ ಕಾರಣಕ್ಕೆ ಶಾಸಕರು ಹಾಗೂ ಪಾಲಿಕೆ ಸದಸ್ಯರು ಕೆಆರ್‌ಐಡಿಎಲ್‌ಗೆ ಕೆಲಸ ವಹಿಸಲು ದುಂಬಾಲು ಬೀಳುತ್ತಾರೆ. ಕೆಲಸ ನಡೆಸದೆಯೇ ದುಡ್ಡು ಹೊಡೆಯಬಹುದು ಎಂಬುದೇ ಇದಕ್ಕೆ ಕಾರಣ.

ನಾಗಮೋಹನದಾಸ್ ಸಮಿತಿ ವರದಿ: 3 ವರ್ಷವಾದರೂ ಕ್ರಮವಿಲ್ಲ

ಬಿಬಿಎಂಪಿಯ ರಾಜರಾಜೇಶ್ವರಿನಗರ, ಮಲ್ಲೇಶ್ವರ ಹಾಗೂ ಗಾಂಧಿನಗರ ವಿಭಾಗಗಳಲ್ಲಿ 2008ರಿಂದ 2012ರ ನಡುವೆ ಅನುಷ್ಠಾನಗೊಳಿಸಿದ್ದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಸಮಿತಿಯು, ಬ್ರಹ್ಮಾಂಡ ಭ್ರಷ್ಟಾಚಾರ ಎಸಗಿದ 239 ಎಂಜಿನಿಯರ್‌ಗಳು ಹಾಗೂ 514 ಗುತ್ತಿಗೆದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿತ್ತು. ವರದಿ ಸಲ್ಲಿಕೆಯಾಗಿ ಮೂರು ವರ್ಷ ಕಳೆದರೂ ಯಾರ ವಿರುದ್ಧವೂ ಕ್ರಮ ಆಗಿಲ್ಲ.

ಲಂಚಾವತಾರ ವಿಸ್ತಾರ

ಒಂದನೇ ಪುಟದಿಂದ

ಸಚಿವರು, ಶಾಸಕರು ತಮ್ಮ ಹತ್ತಿರದ ಸಂಬಂಧಿಗಳ ಹೆಸರಿಗೆ ಟೆಂಡರ್ ಕೊಡಿಸಿ, ಗುತ್ತಿಗೆ ನಿರ್ವಹಿಸುವುದು ಹೊಸದೇನಲ್ಲ. ₹842 ಕೋಟಿ ವೆಚ್ಚದ ಕೈಗಾರಿಕಾ ಉದ್ದೇಶದ ಯೋಜನೆಯೊಂದರ ಕಾಮಗಾರಿಯನ್ನು ಸಚಿವರೊಬ್ಬರು ಬೇನಾಮಿ ಹೆಸರಿನಲ್ಲಿ ನಡೆಸುತ್ತಿದ್ದಾರೆ ಎನ್ನುವುದು ಈಗ ದೊಡ್ಡ ಚರ್ಚೆಯ ವಿಷಯವೂ ಹೌದು. ಜನಪ್ರತಿನಿಧಿಗಳಿಗಿಂತ ತಾವೇನು ಕಮ್ಮಿ ಎಂಬ ಜಿದ್ದಿಗೆ ಬಿದ್ದ ಅಧಿಕಾರಿಗಳು ಸೋದರರು, ಸಂಬಂಧಿಗಳ ಹೆಸರಿನಲ್ಲಿ ಗುತ್ತಿಗೆ ಹಿಡಿಯುವುದು ಉಂಟು.

'ಪಾಲುದಾರಿಕೆಯ ಹೊಸ ಪದ್ಧತಿ ಚಾಲ್ತಿಗೆ ಬಂದಿದೆ. ₹100 ಕೋಟಿ ಮೊತ್ತದ ಹೊಸ ಯೋಜನೆ, ಯಂತ್ರೋಪಕರಣಗಳ ಅಳವಡಿಕೆ ಅಥವಾ ಕಾಮಗಾರಿಯ ಟೆಂಡರ್‌ನಲ್ಲಿ ಬಿಡ್ ಸಲ್ಲಿಸುವ ಗುತ್ತಿಗೆದಾರರನ್ನು ಕರೆಯಿಸುವ ಸಚಿವರೊಬ್ಬರು ₹40 ಕೋಟಿ ಬಂಡವಾಳ ಹೂಡುವೆ, ಶೇ10ರಷ್ಟು ಅಂದರೆ ₹10 ಕೋಟಿ ನೀವು ಕಮೀಷನ್ ರೂಪದಲ್ಲಿ ನನ್ನ ಹೆಸರಿನಲ್ಲಿ ಹೂಡಿಕೆ ಮಾಡಿ. ಇಬ್ಬರಿಗೂ ಅರ್ಧದಷ್ಟು ಪಾಲು ಎಂಬ ಹೊಸ ಬಗೆಯ ಲಂಚದ ಪದ್ಧತಿಗೆ ಚಾಲನೆಯನ್ನೂ ಕೊಟ್ಟಿದ್ದಾರೆ' ಎನ್ನುತ್ತಾರೆ ಗುತ್ತಿಗೆದಾರರು.

'ಮೊದಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಶೇ 5ರಿಂದ 8ರಷ್ಟು ಲಂಚ ಕೊಟ್ಟು ಪೂರೈಕೆ ಮಾಡುತ್ತಿದ್ದೆವು. ಈಗ ಸಚಿವರೇ 'ಶೇ 30ರಷ್ಟು ನನಗೆ ಕೊಟ್ಟುಬಿಡಿ; ಜಿಲ್ಲಾ ಮಟ್ಟದ ಅಧಿಕಾರಿಗಳ ಉಸಾಬರಿಗೆ ಹೋಗಬೇಡಿ ಎಂದು ಹೇಳುತ್ತಿದ್ದಾರೆ' ಎಂದು ಯಂತ್ರೋಪಕರಣಗಳ ತಯಾರಕರೊಬ್ಬರು ತಮ್ಮ ಅಳಲು ತೋಡಿಕೊಂಡರು.

'ಹಿರಿಯ ಸಚಿವರೊಬ್ಬರು ಟೆಂಡರ್ ಅನುಮೋದನೆಗೂ ಮೊದಲು ಶೇ 15ರಷ್ಟು ಲಂಚ ನೀಡುವುದನ್ನು ಕಡ್ಡಾಯಗೊಳಿಸಿದ್ದಾರೆ. ಇನ್ನೊಬ್ಬ ಸಚಿವರು ಶೇ 10ರಷ್ಟು ನಿಗದಿಪಡಿಸಿದ್ದು, ತಾವೇ ನೇರವಾಗಿ ಗುತ್ತಿಗೆದಾರರಿಗೆ ಕರೆಮಾಡುತ್ತಾರೆ. ಗುತ್ತಿಗೆದಾರರಿಂದ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಲಂಚ ಪಡೆಯುವುದು ಹೊಸದಲ್ಲ. ಆದರೆ, 2019ರಿಂದ ಲಂಚದ ಪ್ರಮಾಣ ದುಪ್ಪಟ್ಟಾಗಿದೆ' ಎಂದು ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳಿದರು.

'ಕಪ್ಪುಹಣ'ದ ಮೂಲ ಪೆಟ್ರೋಲ್ ಬಂಕ್

ಶೇ 40ರಷ್ಟು ಲಂಚ ನೀಡಲು 'ಕಪ್ಪುಹಣ' ಬಳಕೆಯಾಗುತ್ತದೆ. ₹100 ಕೋಟಿ ಕಾಮಗಾರಿಗೆ ₹40 ಕೋಟಿ ಲಂಚ ನೀಡಲು ಹಣ ಹೊಂದಿಸುವುದು ಹೀಗೆ. ನಗದು ವಹಿವಾಟು ಹೆಚ್ಚಾಗಿ ನಡೆಯುವ ಪೆಟ್ರೋಲ್ ಬಂಕ್ ಕಪ್ಪುಹಣದ 'ಎಟಿಎಂ' ಇದ್ದಂತೆ. ಗುತ್ತಿಗೆ ಹಿಡಿಯುವ ಬೇರೆ ಬೇರೆ ಹಂತದಲ್ಲಿ ಲಂಚ ನೀಡುವುದರಿಂದ ಒಟ್ಟಿಗೆ ಅಷ್ಟು ದೊಡ್ಡ ಮೊತ್ತ ಬೇಕಾಗದು. ಲಂಚ ಕೊಡಬೇಕಾದ ಪೂರ್ವದಲ್ಲಿ ₹10 ಲಕ್ಷ ಅಥವಾ ₹50 ಲಕ್ಷದ ಮೊತ್ತದ ಡೀಸೆಲ್ ಖರೀದಿಸಿದಂತೆ ಬಿಲ್ ಸೃಷ್ಟಿಸಿ, ಅದಕ್ಕೆ ಚೆಕ್ ಮೂಲಕ ಹಣ ಕೊಡುತ್ತಾರೆ. ಬಂಕ್ ಮಾಲೀಕರು ಜಿಎಸ್‌ಟಿ ಮೊತ್ತವನ್ನು ಕಟಾವು ಮಾಡಿಕೊಂಡು, ಉಳಿದ ಮೊತ್ತವನ್ನು ನಗದು ರೂಪದಲ್ಲಿ ಗುತ್ತಿಗೆದಾರನಿಗೆ ಯಾವಾಗ ಎಷ್ಟು ಬೇಕೋ ಅಷ್ಟು ವಾಪಸ್ ಮಾಡುತ್ತಾರೆ.

ಇದೇ ಮಾದರಿಯೊಳಗೆ ಸಿಮೆಂಟ್, ಕಬ್ಬಿಣ ಮಾರಾಟಗಾರರ ಬಳಿಯೂ ವಸ್ತು ಖರೀದಿಸಿದಂತೆ ಕೃತಕ ಬಿಲ್ ಪಡೆದು, ಚೆಕ್ ಕೊಟ್ಟು ನಗದು ವಾಪಸ್ ಪಡೆಯುವ ವ್ಯವಸ್ಥೆಯೂ ಇದೆ.

ವಿಜಯೇಂದ್ರ ಆಪ್ತನ ಮನೆಯಲ್ಲಿತ್ತು ಸಾಕ್ಷ್ಯ!

ಬೆಂಗಳೂರು: ರಾಜ್ಯ ಸರ್ಕಾರದ ಲೋಕೋಪಯೋಗಿ ಮತ್ತು ಜಲ ಸಂಪನ್ಮೂಲ ಇಲಾಖೆಗಳಲ್ಲಿ ಬೃಹತ್ ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆಯಲ್ಲಿ ಭಾರಿ ಪ್ರಮಾಣದ ಲಂಚ ಕೈ ಬದಲಾಗುತ್ತಿರುವ ಕುರಿತು ಅಕ್ಟೋಬರ್ ತಿಂಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿದ ಶೋಧದಲ್ಲಿ ಪ್ರಬಲ ಸಾಕ್ಷ್ಯಗಳು ಪತ್ತೆಯಾಗಿದ್ದವು.

ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಚಿವಾಲಯದಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಬಿಎಂಟಿಸಿ ಚಾಲಕ ಕಂ ನಿರ್ವಾಹಕ ಆಯನೂರು ಉಮೇಶ್, ಮಧ್ಯವರ್ತಿ ಅರವಿಂದ್ ರಾಮಸ್ವಾಮಿ, ಬೃಹತ್ ಕಾಮಗಾರಿಗಳ ಗುತ್ತಿಗೆ ಪಡೆದಿರುವ 40ಕ್ಕೂ ಹೆಚ್ಚು ಗುತ್ತಿಗೆದಾರರು ಮತ್ತು ಇವರೊಂದಿಗೆ ನಿಕಟ ನಂಟು ಹೊಂದಿದ್ದ ಹಲವರ ಮೇಲೆ ಅಕ್ಟೋಬರ್ 7ರಂದು ದಾಳಿಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮೂರು ದಿನಗಳ ಕಾಲ ಶೋಧ ನಡೆಸಿದ್ದರು.

ಉಮೇಶ್ ಮತ್ತು ಅರವಿಂದ್ ರಾಮಸ್ವಾಮಿ ಇಬ್ಬರೂ ಯಡಿಯೂರಪ್ಪ ಅವರ ಮಗ ಬಿ.ವೈ. ವಿಜಯೇಂದ್ರ (ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ) ಆಪ್ತರು. ಇವರು ಕಾಮಗಾರಿಗಳ ಗುತ್ತಿಗೆ ಹಾಗೂ ಬಿಲ್ ಪಾವತಿಗೆ ಪರ್ಸೆಂಟೇಜ್ ಲೆಕ್ಕದಲ್ಲಿ ಕಮಿಷನ್ ಸಂಗ್ರಹಿಸುವ ಕುರಿತು ಲೋಕೋಪಯೋಗಿ ಮತ್ತು ಜಲ ಸಂಪನ್ಮೂಲ ಇಲಾಖೆಗಳ ಹಿರಿಯ ಅಧಿಕಾರಿಗಳು, ಗುತ್ತಿಗೆದಾರರ ಜತೆ ವಾಟ್ಸ್‌ಆ್ಯಪ್, ಸಿಗ್ನಲ್ ಆ್ಯಪ್‌ಗಳಲ್ಲಿ ಚರ್ಚಿಸಿರುವುದು ಮತ್ತು ಹಣ ಸಂಗ್ರಹದ ಮಾಹಿತಿಯನ್ನು ಡೈರಿಯಲ್ಲಿ ಬರೆದಿರುವುದು ಪತ್ತೆಯಾಗಿತ್ತು.

ಸದನ ಸಮಿತಿ:ಬೀಸೋ ದೊಣ್ಣೆ ತಪ್ಪಿಸಿಕೊಳ್ಳುವ 'ಅಸ್ತ್ರ'

• ಎಸ್.ರವಿಪ್ರಕಾಶ್


ಬೆಂಗಳೂರು: ಯಾವುದೇ ಸರ್ಕಾರದ ಮೇಲೆ ಭ್ರಷ್ಟಾಚಾರ ಅಥವಾ ಹಗರಣದ ಗಂಭೀರ ಆರೋಪಗಳು ಕೇಳಿ ಬಂದಾಗ ಸದನ ಸಮಿತಿ ಅಥವಾ ವಿಚಾರಣಾ ಆಯೋಗಗಳನ್ನು ರಚಿಸಿ ಕೈತೊಳೆದುಕೊಳ್ಳುವ 'ಸಂಪ್ರದಾಯ' ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಸದನ ಸಮಿತಿಯಾಗಲಿ, ವಿಚಾರಣಾ ಆಯೋಗಗಳು ನೀಡುವ ವರದಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕಠಿಣ ಕ್ರಮ ತೆಗೆದುಕೊಂಡ ಉದಾಹರಣೆಗಳೇ ಇಲ್ಲ. ವಿವಿಧ ಕಾಮಗಾರಿಗಳಲ್ಲಿ ಶೇ 40 ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿ ಮೋದಿಯವರಿಗೆ ಪತ್ರ ಬರೆದಿದೆ. ಈ ಬಗ್ಗೆ ಜಂಟಿ ಸದನ ಸಮಿತಿ ರಚಿಸುವಂತೆಯೂ ಕಾಂಗ್ರೆಸ್ ಪಟ್ಟು ಹಿಡಿದಿದೆ.

ಈ ಹಿಂದೆ ಸರ್ಕಾರಗಳು ರಚಿಸಿದ ಸದನ ಸಮಿತಿಗಳು ಮತ್ತು ವಿಚಾರಣಾ ಆಯೋಗಗಳು ಸಲ್ಲಿಸಿದ ವರದಿ ಮತ್ತು ಕೈಗೊಂಡ ಕ್ರಮಗಳ ವಿವರ ಇಲ್ಲಿದೆ–

ಪ್ರಮುಖ ಸದನ ಸಮಿತಿಗಳು:

- ಸರ್ಕಾರಿ ಜಮೀನು ಒತ್ತುವರಿಗೆ ಸಂಬಂಧಿಸಿ ಎಚ್.ಡಿ. ಕುಮಾರಸ್ವಾಮಿ (2006ರಲ್ಲಿ) ಮುಖ್ಯಮಂತ್ರಿಯಾಗಿದ್ದಾಗ ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಜಂಟಿ ಸದನ ಸಮಿತಿ 2007ರಲ್ಲಿ ಮಧ್ಯಂತರ ವರದಿ ನೀಡಿತ್ತು. ದೊಡ್ಡ ಕಂಪೆನಿಗಳು, ಖಾಸಗಿಯವರು ಅಕ್ರಮವಾಗಿ ಭೂಮಿ ಒತ್ತುವರಿ ಮಾಡಿಕೊಂಡ ಬಗ್ಗೆ ವರದಿ ವಿವರಿಸಿತ್ತು. ಮರು ವಶಕ್ಕೆ ಪಡೆಯುವ ಕೆಲಸ ನಿರೀಕ್ಷಿತ ಮಟ್ಟದಲ್ಲಿ ನಡೆಯಲೇ ಇಲ್ಲ.
- ನೈಸ್ ಕಂಪನಿ ಎಕರೆಗೆ ₹ 10 ಸಾಂಕೇತಿಕ ದರ ಪಾವತಿಸಿ 32 ಸಾವಿರ ಎಕರೆ ಭೂಮಿ ಪಡೆದ ಆರೋಪದ ಕುರಿತು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಂದು ಸಚಿವರಾಗಿದ್ದ ಟಿ.ಬಿ.ಜಯಚಂದ್ರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚನೆ. ಹೆಚ್ಚುವರಿ 11,660 ಎಕರೆ ಕೂಡಲೇ ವಾಪಸ್ ಪಡೆಯಬೇಕು. ಕಂಪನಿ ಅಕ್ರಮವಾಗಿ ವಸೂಲು ಮಾಡಿರುವ ₹1,350 ಕೋಟಿ ಮರು ವಸೂಲು ಮಾಡಬೇಕು ಎಂದು ವರದಿ ತಿಳಿಸಿತ್ತು. ಆದರೆ ಯಾವುದೇ ಕ್ರಮ ಜರುಗಿಸಿಲ್ಲ.
- 2004 ರಿಂದ 2014 ರವರೆಗೆ ವಿದ್ಯುತ್ ಖರೀದಿ ಪ್ರಮಾಣ ಮತ್ತು ವೆಚ್ಚವು ಹೆಚ್ಚಿದ ಬಗ್ಗೆ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚಿಸಲಾಯಿತು. ವಿದ್ಯುತ್ ಖರೀದಿಯಲ್ಲಿ ಹೆಚ್ಚುವರಿ ಹಣ ಪಾವತಿಸಿದ್ದು, ಹೆಚ್ಚಿನ ತನಿಖೆ ಆಗಬೇಕು ಎಂದು ವರದಿ ಶಿಫಾರಸು ಮಾಡಿತ್ತು. ಯಾವುದೇ ಕ್ರಮವನ್ನೂ ಕೈಗೊಳ್ಳಲಿಲ್ಲ.
- ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕೆರೆ, ಕಟ್ಟೆ ಮತ್ತು ಕುಂಟೆಗಳ ಒತ್ತುವರಿ ದೂರುಗಳ ಪರಿಶೀಲನೆಗೆ ಕೆ.ಬಿ.ಕೋಳಿವಾಡ ಅಧ್ಯಕ್ಷತೆಯಲ್ಲಿ ಅಧ್ಯಯನ ಸಮಿತಿ



ರಚಿಸಲಾಯಿತು. 10,785 ಎಕರೆ 35.76 ಗುಂಟೆ ಒತ್ತುವರಿ ಆಗಿದೆ. ಮಾರ್ಗಸೂಚಿ ದರ ಅಥವಾ ಮಾರುಕಟ್ಟೆ ಮೌಲ್ಯವನ್ನು ವಸೂಲಿ ಮಾಡಬೇಕು ಎಂದು ಶಿಫಾರಸು ಮಾಡಿತು. ಕ್ರಮವನ್ನು ಜರುಗಿಸಿಲ್ಲ.

- ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರಾಗಿದ್ದ ನ್ಯಾ. ಸಂತೋಷ ಹೆಗ್ಡೆ ಸಲ್ಲಿಸಿದ್ದ ವರದಿಯಲ್ಲಿ ಹೆಸರಿಸಲಾಗಿದ್ದ ಅಧಿಕಾರಿಗಳ ಪಾತ್ರದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು 2012ರಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಕೆ.ಜೈರಾಜ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯು 517 ಅಧಿಕಾರಿ, ಸಿಬ್ಬಂದಿಗಳ ಬಗ್ಗೆ ಸವಿಸ್ತಾರ ವರದಿ ಕೊಟ್ಟಿತ್ತು. ನಂತರ ಬಂದ ಕಾಂಗ್ರೆಸ್ ಸರ್ಕಾರ ವರದಿಯ ಶಿಫಾರಸುಗಳನ್ನು ಅನುಷ್ಠಾನ ಮಾಡಲೇ ಇಲ್ಲ.
- 2011-12ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಮಾಗಡಿ ಲೋಕೋಪಯೋಗಿ ವಿಭಾಗದಲ್ಲಿ ದೊಡ್ಡ ಮೊತ್ತದ ಕಾಮಗಾರಿಯನ್ನು ₹19 ಲಕ್ಷಕ್ಕೆ ವಿಂಗಡಿಸಿ ಆಯ್ದ ಗುತ್ತಿಗೆದಾರರಿಗೆ ನೀಡಿದ್ದಲ್ಲದೇ, ಕಾಮಗಾರಿ ನಡೆಸದೇ ಬಿಲ್ ಪಾವತಿ ಮಾಡಲಾಗಿತ್ತು. ₹600 ಕೋಟಿ ಮೊತ್ತದ ಈ ಕಾಮಗಾರಿಯಲ್ಲಿ ಬೃಹತ್ ಪ್ರಮಾಣದಲ್ಲಿ ಅಕ್ರಮ ನಡೆದಿದೆ ಎಂದು ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ, ಆಗಿನ ಶಾಸಕ ಡಾ.ಎಚ್.ಸಿ. ಮಹದೇವಪ್ಪ ಸದನದಲ್ಲಿ ಆರೋಪಿಸಿದ್ದರು. ಈ ಹಗರಣದ ತನಿಖೆಗಾಗಿ ಅಪ್ಪು ಪಟ್ಟಣಶೆಟ್ಟಿ ನೇತೃತ್ವದ ಸದನ ಸಮಿತಿ ರಚಿಸಲಾಗಿತ್ತು. ವರದಿ ಮಂಡನೆಯೂ ಆಗಿತ್ತು. 2013ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ, ಮಹದೇವಪ್ಪ ಲೋಕೋಪಯೋಗಿ ಸಚಿವರಾದರು. ಹಾಗಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ.
- ಸಿದ್ದರಾಮಯ್ಯ ಅವಧಿಯಲ್ಲಿ ಅರ್ಕಾವತಿ ಬಡಾವಣೆಯಲ್ಲಿ 'ರಿಡೂ' ಹೆಸರಿನಲ್ಲಿ ಡಿನೋಟಿಫಿಕೇಷನ್ ಮಾಡಿದ ಆರೋಪ ಕೇಳಿ ಬಂದಿತು. ಆಗ ಅವರು ತಮ್ಮ ಅವಧಿ ಅಲ್ಲದೆ, ನಾಲ್ಕು ಮುಖ್ಯಮಂತ್ರಿಗಳ ಅವಧಿಯಲ್ಲಿ ಆಗಿರುವ ಡಿನೋಟಿಫಿಕೇಷನ್ ಕುರಿತೂ ವಿಚಾರಣೆ ನಡೆಸಲು ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ಅಧ್ಯಕ್ಷತೆಯಲ್ಲಿ ಆಯೋಗ ರಚಿಸಿದರು. ವರದಿಯನ್ನು ಸದನದಲ್ಲಿ ಮಂಡಿಸಲಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪೊಲೀಸ್ ಹಾಕಿ: ಕರ್ನಾಟಕವನ್ನು ಮಣಿಸಿದ ತಮಿಳುನಾಡಿಗೆ ಕಂಚು; ಎಸ್‌ಎಸ್‌ಬಿಗೆ ಪ್ರಶಸ್ತಿ

ಪಂಜಾಬ್ ಪೊಲೀಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ



ಪುರುಷರ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಪಂಜಾಬ್ ಪೊಲೀಸ್ ತಂಡದ ಆಟಗಾರರು ಗಣ್ಯರೊಂದಿಗೆ. ನಿಂತವರು (ಎಡದಿಂದ): ಜಗಮೀತ್ ಸಿಂಗ್, ರಮಣ್‌ದೀಪ್ ಸಿಂಗ್, ಕರ್ನಾಟಕ ಡಿಜಿ ಪ್ರವೀಣ್ ಸೂದ್, ಶಾಸಕ ಎನ್.ಎ.ಹ್ಯಾರಿಸ್, ಯುವಜನಸೇವಾ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ನಟ ಶಿವರಾಜ್ ಕುಮಾರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್, ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜ್, ಎಡಿಜಿಪಿ ಅಲೋಕ್ ಕುಮಾರ್, ಸಿಮ್ರನ್‌ಜೀತ್ ಸಿಂಗ್, ಜಸ್‌ಕರಣ್ ಸಿಂಗ್, ದೂಪಿಂದರ್ ದೀಪ್ ಸಿಂಗ್, ಪವನ್‌ದೀಪ್ ಸಿಂಗ್. ಕೆಳಗಿನ ಸಾಲು: ಪಾರಸ್ ಮಲ್ಹೋತ್ರ (ಗೋಲ್‌ಕೀಪರ್), ಅಜಯ್ ಕುಮಾರ್, ಕರಣ್‌ಬೀರ್ ಸಿಂಗ್, ಹರದೀಪ್ ಸಿಂಗ್, ಕನ್ವರ್‌ಜೀತ್ ಸಿಂಗ್, ಬಲ್ಜಿತ್ ಸಿಂಗ್, ಸುಖ್‌ಪ್ರೀತ್ ಸಿಂಗ್, ಬಲ್ವಿಂದರ್ ಸಿಂಗ್, ವರಿಂದರ್ ಸಿಂಗ್, ಸೌರಭ್ ಶರ್ಮಾ, ಇಂದ್ರಜೀತ್ ಸಿಂಗ್ –ಪ್ರಜಾವಾಣಿ ಚಿತ್ರ

ಬೆಂಗಳೂರು: ಇಂಡೊ ಟಿಬೆಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ವಿರುದ್ಧ ಭರ್ಜರಿ ಜಯ ಗಳಿಸಿದ ಪಂಜಾಬ್ ಪೊಲೀಸ್ ತಂಡ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಅಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಪಂಜಾಬ್ 7-1ರಿಂದ ಜಯ ಸಾಧಿಸಿತು. ದೆಹಲಿ ಸಿಆರ್‌ಪಿಎಫ್ ತಂಡವನ್ನು 3-1ರಲ್ಲಿ ಮಣಿಸಿದ 'ಸಶಸ್ತ್ರ ಸೀಮಾ ಬಲ್' (ಎಸ್‌ಎಸ್‌ಬಿ) ಮಹಿಳಾ ವಿಭಾಗದಲ್ಲಿ ಚಿನ್ನದ ಪದಕವನ್ನು ಗಳಿಸಿತು.

ಭರವಸೆಯ ಸ್ಟ್ರೈಕರ್ ರಮಣ್‌ದೀಪ್ ಸಿಂಗ್ ಗಾಯಗೊಂಡು ಹೊರಗುಳಿದಿದ್ದರೂ ಪಂಜಾಬ್ ಪೊಲೀಸ್ ತಂಡದವರು ಎದೆಗುಂದಲಿಲ್ಲ. ಆಕ್ರಮಣಕಾರಿ ಆಟದೊಂದಿಗೆ ಆರಂಭದಲ್ಲೇ ಎದುರಾಳಿಗಳಲ್ಲಿ ಆತಂಕ ಮೂಡಿಸಿದ ತಂಡ ಪ್ರತಿ ಕ್ವಾರ್ಟರ್‌ನಲ್ಲೂ ಗೋಲು ಗಳಿಸಿತು. ಹರದೀಪ್ ಸಿಂಗ್ (14ನೇ ನಿಮಿಷ), ಕರಣ್‌ಬೀರ್ ಸಿಂಗ್ (17, 39ನೇ ನಿ), ಕನ್ವರ್‌ಜೀತ್ ಸಿಂಗ್ (20ನೇ ನಿ), ನಾಯಕ ದೂಪಿಂದರ್ ದೀಪ್ ಸಿಂಗ್ (41ನೇ ನಿ), ಜಗಮೀತ್ ಸಿಂಗ್ (53ನೇ ನಿ), ಬಲ್ವಿಂದರ್ ಸಿಂಗ್ (55ನೇ ನಿ) ಚೆಂಡನ್ನು ಗುರಿಮುಟ್ಟಿಸಿದರು. ಐಟಿಬಿಪಿ ಪರವಾಗಿ ಏಕೈಕ ಗೋಲು ಗಳಿಸಿದವರು ಸುನಿಲ್ ಕಿಜೂರ್ (27ನೇ ನಿ).

ಮಹಿಳಾ ವಿಭಾಗದಲ್ಲಿ ರೋಚಕ ಪೈಪೋಟಿ ಕಂಡುಬಂತು. ರಂಜಿತಾ ಮಿನೆಜ್ (15ನೇ ನಿ) ಮೂಲಕ ಖಾತೆ ತೆರೆದ ಎಸ್‌ಎಸ್‌ಬಿ 34ನೇ ನಿಮಿಷದಲ್ಲಿ ಭಾರತಿ ಠಾಕೂರ್ ಮೂಲಕ ಸಿಆರ್‌ಪಿಎಫ್ ತಿರುಗೇಟು ನೀಡಿತು. 44ನೇ ನಿಮಿಷದಲ್ಲಿ ಮ್ಯಾಕ್ಸಿಮಾ ಎಕ್ಕಾ ಮತ್ತು 45ನೇ ನಿಮಿಷದಲ್ಲಿ ರಜನಿ ಬಾರ್ಲ ಗಳಿಸಿದ ಗೋಲುಗಳ ಮೂಲಕ ಎಸ್‌ಎಸ್‌ಬಿ ಜಯ ಗಳಿಸಿತು.

ಪುರುಷರ ಕಂಚಿನ ಪದಕದ ಪಂದ್ಯದಲ್ಲಿ ತಮಿಳುನಾಡು ಆರು ಗೋಲು ಗಳಿಸಿದರೆ ಕರ್ನಾಟಕಕ್ಕೆ ಖಾತೆ ತೆರೆಯಲು ಸಾಧ್ಯವಾಗಲಿಲ್ಲ. ಎಂ.ವಿಜಯ್ (27 ಮತ್ತು 45ನೇ ನಿ), ಬಿ. ಅರುಣಾಚಲಂ (34 ಮತ್ತು 47ನೇ ನಿ), ಎಂ.ಬಾಲಮುರುಗನ್ (55 ಮತ್ತು 60ನೇ ನಿ) ಗೋಲು ಗಳಿಸಿದರು. ಮಹಿಳಾ ವಿಭಾಗದಲ್ಲಿ ಒಡಿಶಾ ಪೊಲೀಸ್ 6-0ಯಿಂದ ಮಹಾರಾಷ್ಟ್ರ ರಾಜ್ಯ ಪೊಲೀಸ್ ತಂಡವನ್ನು ಮಣಿಸಿ ಮೂರನೇ ಸ್ಥಾನ ಗಳಿಸಿತು. ನಾಯಕಿ ರಶ್ಮಿತಾ ಮಿನೆಜ್ (6, 23, 37 ಮತ್ತು 39ನೇ ನಿ), ಪ್ರಮಿತಾ ಟೊಪ್ಪೊ (38ನೇ ನಿ) ಮತ್ತು ಎಲಿನ್ ಲಾಕ್ರ (56ನೇ ನಿ) ಚೆಂಡನ್ನು ಗುರಿ ಸೇರಿಸಿದರು.

ವುಷು ಟೂರ್ನಿ: ಕುಸುಮಾಗೆ ಕಂಚಿನ ಪದಕ

ಬೆಂಗಳೂರು: ಕರ್ನಾಟಕದ ಕುಸುಮಾ ಎನ್ ಮತ್ತು ಸ್ವಚ್ಛಂದ್ ಅಸ್ತೇಕರ್ ಅವರು ಭೋಪಾಲ್ ಪೊಲೀಸ್ ಅಕಾಡೆಮಿಯಲ್ಲಿ ನಡೆದ ರಾಷ್ಟ್ರೀಯ ವುಷು ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಕುಸುಮಾ ಅವರು ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಮೂರನೇ ಸ್ಥಾನ ಗಳಿಸಿದರೆ ಸ್ವಚ್ಛಂದ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ತೃತೀಯ ಸ್ಥಾನ ಗಳಿಸಿದರು.

ಕೋಲ್ಕತ್ತಾ ರೇಸ್

ಜೇಕ್ ಗೆಲ್ಲುವ ನಿರೀಕ್ಷೆ

ಬುಕ್‌ಮೇಕರ್ಸ್ ಅಸೋಸಿಯೇಷನ್ ಕೋಲ್ಕತ್ತ 2000 ಗಿನ್ನೀಸ್ 2021 ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಜೇಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆರೋ 1, ಮದರ್ಸ್ ಲವ್ 7, ಲೆಜೆಂಡ್ ರಿಟರ್ನ್ಸ್ 5
2ನೇ ರೇಸ್: ನಿಶ್ಕ್ 4, ಅಡೋರ್ನಿಕ 1, ಆಫ್ಟರ್ ಶಾಕ್ 2
3ನೇ ರೇಸ್: ಸಿತಾರ 2, ಕೋರ್ಟ್ ಜೆಸ್ಟರ್ 4, ಎಕ್ಸಾಟಿಕ್ ಕ್ವೀನ್ 7
4ನೇ ರೇಸ್: ದಂಡಿ ಸತ್ಯಾಗ್ರಹ 1, ಟೈಮೂರ್ಸ್ ಚಾಯ್ಸ್ 3, ಯುವಿ 7
5ನೇ ರೇಸ್: ಜೇಕ್ 5, ಅಗ್ನಾಸ್ಟಿಕ್ 1, ಲೆಜೆಂಡರಿ ಸ್ಟ್ರೈಕರ್ 6
6ನೇ ರೇಸ್: ಸನಾತನ 5, ಟ್ರೆಸ್ ಬೀನ್ 6, ವೂ ಡೇರ್ಸ್ ವಿನ್ಸ್ 1

ಉತ್ತಮ ಬೆಟ್: ದಂಡಿ ಸತ್ಯಾಗ್ರಹ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	3ನೇ ಟ್ರಿಬಲ್
2,3,4,5,6	3,4,5,6	1,2,3	4,5,6

ಬೆಂಗಳೂರು ಎಫ್‌ಸಿಗೆ ನಿರಾಸೆ



ಕ್ಲೀಟನ್ ಸಿಲ್ವಾ –ಐಎಸ್‌ಎಲ್ ಚಿತ್ರ

ಬ್ಯಾಂಬೊಲಿಮ್: ಆಶಿಕ್ ಕುರುಣಿಯನ್ ಅವರು ಬೆಂಗಳೂರು ಎಫ್‌ಸಿ ತಂಡಕ್ಕೆ 'ಖಳನಾಯಕ'ರಾದರು.

ಅವರು ನೀಡಿದ 'ಉಡುಗೊರೆ ಗೋಲು' ತಂಡದ ಸೋಲಿಗೆ ಕಾರಣವಾಯಿತು. ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ 1-2ರಿಂದ ಎಫ್‌ಸಿ ಗೋವಾ ತಂಡಕ್ಕೆ ಶರಣಾಯಿತು.

ಆಶಿಕ್ 16ನೇ ನಿಮಿಷದಲ್ಲಿ ತಮ್ಮದೇ ತಂಡದ ಗೋಲುಪೆಟ್ಟಿಗೆಗೆ ಚೆಂಡು ಸೇರಿಸಿದರು. ಕ್ಲೀಟನ್ ಸಿಲ್ವಾ (45ನೇ ನಿಮಿಷ) ಬೆಂಗಳೂರು ಪರ ಗೋಲು ಹೊಡೆದರೆ, 70ನೇ ನಿಮಿಷದಲ್ಲಿ ಎಫ್‌ಸಿ ಗೋವಾದ ದೇವೇಂದ್ರ ಮುರಗಾಂವಕರ್ ಯಶಸ್ವಿಯಾದರು.

ಫತೋರ್ಡದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಮೊದಲಾರ್ಧದಲ್ಲಿ ಗಳಿಸಿದ ತಲಾ ಒಂದೊಂದು ಗೋಲುಗಳ ನೆರವಿನಿಂದ ಎಟಿಕೆಎಂಬಿ ಮತ್ತು ಚೆನ್ನೈಯಿನ್ ಎಫ್‌ಸಿ ತಂಡಗಳು ಡ್ರಾ ಸಾಧಿಸಿದವು.

ಎಟಿಕೆಎಂಬಿ ಪರ 18ನೇ ನಿಮಿಷದಲ್ಲಿ ಲಿಸ್ಟನ್ ಕೊಲ್ಯಾಕೊ ಚೆಂಡನ್ನು ಗುರಿ ಸೇರಿಸಿದರು.

45ನೇ ನಿಮಿಷದಲ್ಲಿ ಚೆನ್ನೈನ-ವ್ಲಾದಿಮಿರ್ ಕೊಮನ್ ಗೋಲು ಗಳಿಸಿ ಸಮಬಲ ತಂದುಕೊಟ್ಟರು. ಈ ಮೂಲಕ ಆಡಿದ ನಾಲ್ಕೂ ಪಂದ್ಯಗಳಲ್ಲಿ ತಂಡ ಅಜೇಯವಾಗಿ ಉಳಿಯಿತು.

ಬ್ಲಾಸ್ಟರ್ಸ್‌ಗೆ ಎಸ್‌ಸಿಇಬಿ ಸವಾಲು: ವಾಸ್ಕೊದ ತಿಲಕ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಮತ್ತು ಎಸ್‌ಸಿ ಈಸ್ಟ್ ಬೆಂಗಾಲ್ ತಂಡಗಳು ಸೆಣಸಲಿವೆ.

ಫುಟ್‌ಬಾಲ್: ಎಂಇಜಿ ಸೆಂಟರ್‌ಗೆ ಜಯ

ಬೆಂಗಳೂರು: ಪಿ.ಕೆ. ಮಿಶಾಲ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು ಭರ್ಜರಿ ಜಯ ಗಳಿಸಿತು. ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಶನಿವಾರ 7-0 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ಎದುರು ಗೆದ್ದಿತು.

ತಂಡದ ಪರ ಮಿಶಾಲ್ 8, 52 ಮತ್ತು 60ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಆಸಿಫ್ ಖಾನ್ (30, 70ನೇ ನಿಮಿಷ), ಲೇಲ್ಹೊಲೇನ್ ಖೊಂಗ್ಸಾಯಿ (61ನೇ ನಿ.) ಮತ್ತು ರೋಹಿತ್ ಸಿ.ಎಂ. (86ನೇ ನಿ.) ಕೂಡ ಮಿಂಚಿದರು.

ಸೋಮವಾರ ನಡೆಯುವ ಪಂದ್ಯಗಳಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್–ಯಂಗ್ ಚಾಲೆಂಜರ್ಸ್ ಎಫ್‌ಸಿ, ಬಿಎಫ್‌ಸಿ– ಬೆಂಗಳೂರು ಇಂಡಿಪೆಂಡೆಂಟ್ಸ್, ಬಿಯುಎಫ್‌ಸಿ– ಕೊಡಗು ಎಫ್‌ಸಿ ಮುಖಾಮುಖಿಯಾಗಲಿವೆ.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಇಂದಿನಿಂದ

ಸಿಂಧುಗೆ ಪ್ರಶಸ್ತಿ ಜಯದ ಸವಾಲು



ಪಿ.ವಿ.ಸಿಂಧು

ಹುವೆಲ್ವಾ, ಸ್ಪೇನ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಭಾರತದ ಪಿ.ವಿ.ಸಿಂಧು ಪ್ರಶಸ್ತಿ ಉಳಿಸಿಕೊಳ್ಳುವ ಸವಾಲಿಗೆ ಸಜ್ಜಾಗಿದ್ದು, ಭಾನುವಾರ ಇಲ್ಲಿ ಆರಂಭವಾಗುವ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಎರಡು ವರ್ಷಗಳ ಹಿಂದೆ ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದ ಹೈದರಾಬಾದ್‌ನ 26 ವರ್ಷದ ಆಟಗಾರ್ತಿ, ಅದೇ ಸಾಮರ್ಥ್ಯ ಮುಂದುವರಿಸುವ ಛಲದಲ್ಲಿದ್ದಾರೆ.

ಈ ಬಾರಿ ಇಂಡೊನೇಷ್ಯಾದ ಇಡೀ ತಂಡ ಇಲ್ಲಿ ಕಣಕ್ಕಿಳಿಯುತ್ತಿಲ್ಲ. ಅಲ್ಲದೆ ಎರಡು ಬಾರಿ ಚಿನ್ನ ವಿಜೇತ ಆಟಗಾರ ಜಪಾನ್‌ನ ಕೆಂಟೊ ಮೊಮೊಟಾ, ಮೂರು ಬಾರಿಯ ಮಹಿಳಾ ಚಾಂಪಿಯನ್ ಸ್ಪೇನ್‌ನ ಕರೋಲಿನಾ ಮರಿನ್ ಮತ್ತು 2017ರ ಪ್ರಶಸ್ತಿ ವಿಜೇತೆ ನೊಜೊಮಿ ಒಕುಹರಾ ಕೂಡ ಗಾಯದ ಕಾರಣ ಆಡುತ್ತಿಲ್ಲ. ಹೀಗಾಗಿ ಟೂರ್ನಿ ಹೊಳಪು ಕಳೆದುಕೊಂಡಿದೆ.

ಭಾರತದ ಸೈನಾ ನೆಹ್ವಾಲ್ ಕೂಡ ಗಾಯದ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿ ಟೂರ್ನಿಗೆ ಲಭ್ಯರಿಲ್ಲ.

ಸಿಂಧು ಅವರು ಒಂಬತ್ತನೇ ಶ್ರೇಯಾಂಕದ ಥಾಯ್ಲೆಂಡ್ ಆಟಗಾರ್ತಿ ಪಾರ್ನ್‌ಪಾವೀ ಚೊಚುವಾಂಗ್, ಅಗ್ರ ಶ್ರೇಯಾಂಕದ ಚೀನಾ ತೈಪೆಯ ತೈ ಜು ಯಿಂಗ್ ಮತ್ತು ಕೊರಿಯಾದ ಆನ್ ಸೆಯಂಗ್ ಅವರನ್ನು ಎದುರಿಸಬೇಕಾಗಿದೆ.ಮೊದಲ ಸುತ್ತಿನಲ್ಲಿ ಬೈ ಪಡೆದಿರುವ ಸಿಂಧು, ಎರಡನೇ ಸುತ್ತಿನ ಹಣಾಹಣಿಯಲ್ಲಿ ಸ್ಲೊವೇಕಿಯಾದ ಮಾರ್ಟಿನ ರೆಪಿಸ್ಕಾ ಅವರನ್ನು ಎದುರಿಸುವರು.

ಪುರುಷರ ಸಿಂಗಲ್ಸ್ ಕಿದಂಬಿ ಶ್ರೀಕಾಂತ್, ಬಿ.ಸಾಯಿ ಪ್ರಣೀತ್,ಎಚ್.ಎಸ್. ಪ್ರಣಯ್, ಲಕ್ಷ್ಯ ಸೇನ್ ಕೂಡ ಅದೃಷ್ಟ ಪರೀಕ್ಷಿಸಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಮಹಿಳಾ ಡಬಲ್ಸ್‌ನಲ್ಲಿ ಎನ್.ಸಿಕ್ಕಿರೆಡ್ಡಿ– ಅಶ್ವಿನಿ ಪೊನ್ನಪ್ಪ ಕಣಕ್ಕಿಳಿಯುವರು.

ರೋಯಿಂಗ್: ಅರ್ಜುನ್–ರವಿಗೆ ಚಿನ್ನ



ಅರ್ಜುನ್ ಲಾಲ್ ಮತ್ತು ರವಿ ಸಂಭ್ರಮ– ಟ್ವಿಟರ್ ಚಿತ್ರ

ಬ್ಯಾಂಕಾಕ್ (ಪಿಟಿಐ): ಏಷ್ಯನ್ ರೋಯಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಅರ್ಜುನ್ ಲಾಲ್ ಜಾಟ್ ಹಾಗೂ ರವಿ ಅವರು ಚಿನ್ನದ ಪದಕ ಮಡಿಗೇರಿಸಿಕೊಂಡಿದ್ದಾರೆ. ಪರಮಿಂದರ್ ಸಿಂಗ್ ಅವರಿಗೆ ಬೆಳ್ಳಿ ಪದಕ ಒಲಿದಿದೆ.

ಡಬಲ್ಸ್ ಸ್ಕಲ್ಸ್ ವಿಭಾಗದಲ್ಲಿ ನೀರಿಗಿಳಿದಿದ್ದ ಅರ್ಜುನ್– ರವಿ ಅವರು ಚಿನ್ನದ ಪದಕದ ಸುತ್ತಿನಲ್ಲಿ ಚೀನಾದ ಕಿಂಗ್ ಲೀ–ಲುಟಾಂಗ್ ಜಾಂಗ್ ಮತ್ತು ಉಜ್ಬೆಕಿಸ್ತಾನದ ದವರ್‌ಜೊನ್ ದವರನೊವ್–ಅಬ್ದುಲ್ಲೊ ಮುಖಮದೆವ್ ಅವರನ್ನು ಹಿಂದಿಕ್ಕಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಅರ್ಜುನ್ ಮತ್ತು ಅವರ ಜೊತೆಗಾರ ರವಿ 6 ನಿಮಿಷ 57.88 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕಿಂಗ್ ಲೀ–ಲುಟಾಂಗ್ ಜಾಂಗ್ (7:02.37) ಬೆಳ್ಳಿ ಮತ್ತು ದವರನೊವ್–ಅಬ್ದುಲ್ಲೊ (7:07.73) ಕಂಚು ತಮ್ಮದಾಗಿಸಿಕೊಂಡರು.

ಸಿಂಗಲ್ಸ್ ಸ್ಕಲ್ಸ್ ವಿಭಾಗದಲ್ಲಿ ಪರಮಿಂದರ ಸಿಂಗ್ (8:07.32) ಎರಡನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಚಿನ್ನದ ಪದಕವನ್ನು ಉಜ್ಬೆಕಿಸ್ತಾನದ ಖೊಲ್ಮುರ್ಜೆವ್ ಶಖಬೊಜ್ (7:56.30) ಅವರು ಗೆದ್ದುಕೊಂಡರು.

17ರಂದು 1.8 ಕೋಟಿ ಬ್ಯಾರಲ್ ತೈಲ ಮಾರುಕಟ್ಟೆಗೆ: ಅಮೆರಿಕ



ವಾಷಿಂಗ್ಟನ್ (ರಾಯಿಟರ್ಸ್): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯನ್ನು ತಗ್ಗಿಸುವ ಯೋಜನೆಯ ಭಾಗವಾಗಿ 1.8 ಕೋಟಿ ಬ್ಯಾರಲ್‌ಗಳಷ್ಟು ಕಚ್ಚಾ ತೈಲವನ್ನು-ಡಿಸೆಂಬರ್ 17ರಂದು ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಅಮೆರಿಕದ ಇಂಧನ ಇಲಾಖೆಯು ಹೇಳಿದೆ.

5 ಕೋಟಿ ಬ್ಯಾರಲ್ ಕಚ್ಚಾ-ತೈಲವನ್ನು ತನ್ನ ಸಂಗ್ರಹಾಗಾರಗಳಿಂದ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಅಮೆರಿಕವು ನವೆಂಬರ್‌ನಲ್ಲಿ ಘೋಷಿಸಿತ್ತು. ಮೊದಲ ಹಂತದಲ್ಲಿ 1.8 ಕೋಟಿ ಬ್ಯಾರಲ್ ಕಚ್ಚಾ ತೈಲ ಬಿಡುಗಡೆ ಮಾಡಲಿದ್ದು, ಮುಂಬರುವ ತಿಂಗಳುಗಳಲ್ಲಿ ಇನ್ನುಳಿದ ಪ್ರಮಾಣವನ್ನೂ ಬಿಡುಗಡೆ ಮಾಡಲಾಗುವುದು ಎಂದು ಅದು ತಿಳಿಸಿದೆ.

ಅಮೆರಿಕದ ಮನವಿಯಂತೆ, ಭಾರತ, ಚೀನಾ ಮತ್ತು ದಕ್ಷಿಣ ಕೊರಿಯಾ ದೇಶಗಳು ಸಹ ತಮ್ಮ ತೈಲ ಸಂಗ್ರಹಾಗಾರಗಳಲ್ಲಿ ಇರುವ ಕಚ್ಚಾ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಿವೆ.

ಮಾರುಕಟ್ಟೆಯ ಅಸಮತೋಲನ ನಿವಾರಿಸಲು ಮತ್ತು ಗ್ರಾಹಕರ ವೆಚ್ಚವನ್ನು ಕಡಿಮೆ ಮಾಡಲು ಸಂಗ್ರಹಾಗಾರದ ತೈಲ ಬಳಕೆ ಬಳಕೆ ಮಾಡಲು ಅಧ್ಯಕ್ಷ ಜೋ ಬೈಡನ್ ಅವರು ಒಪ್ಪಿಗೆ ನೀಡಿದ್ದಾರೆ ಎಂದು ಇಂಧನ ಕಾರ್ಯದರ್ಶಿ ಜೆನ್ನಿಫರ್ ಗ್ರಾನ್ಹೋಮ್ ತಿಳಿಸಿದ್ದಾರೆ.

ಜಾಗತಿಕವಾಗಿ ಇಂಧನ ಬೇಡಿಕೆ ಹೆಚ್ಚಾಗಿದ್ದರಿಂದ ಅಕ್ಟೋಬರ್ ತಿಂಗಳ ಕೊನೆಯಲ್ಲಿ ಕಚ್ಚಾ ತೈಲ ದರವು ಏಳು ವರ್ಷಗಳ ಗರಿಷ್ಠ ಮಟ್ಟಕ್ಕೆ ತಲಪಿತ್ತು. ಬ್ಯಾರಲ್‌ಗೆ 86 ಡಾಲರ್‌ಗಳನ್ನೂ ಮೀರಿತ್ತು. ಆದರೆ, ಸಂಗ್ರಹಾಗಾರದ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಅಮೆರಿಕದ ನಿರ್ಧಾರ ಮತ್ತು ಕೊರೊನಾದ ಹೊಸ ತಳಿ ಓಮೈಕ್ರಾನ್‌ನಿಂದ ಸೃಷ್ಟಿಯಾಗಿರುವ ಆತಂಕದಿಂದಾಗಿ ಕಚ್ಚಾ ತೈಲ ದರವು ಶೇ 13ರಷ್ಟು ಇಳಿಕೆ ಕಂಡಿದೆ. ಶುಕ್ರವಾರದ ವಹಿವಾಟಿನ ಅಂತ್ಯದ ವೇಳೆಗೆ ಬ್ರೆಂಟ್ ತೈಲ ದರವು ಬ್ಯಾರಲ್‌ಗೆ 75.15 ಡಾಲರ್‌ಗಳಷ್ಟು ಇತ್ತು.

ಅಡುಗೆ ಎಣ್ಣೆ ಬೆಲೆ ಇನ್ನಷ್ಟು ತಗ್ಗಲಿದೆ: ಎಸ್‌ಇಎ

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ದರವು ಮುಂಬರುವ ತಿಂಗಳುಗಳಲ್ಲಿ ಪ್ರತಿ ಕೆ.ಜಿಗೆ ₹ 3 ರಿಂದ ₹ 4ರವರೆಗೆ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ಹೇಳಿದೆ.

ಎಣ್ಣೆಕಾಳುಗಳ ದೇಶಿ ಉತ್ಪಾದನೆ ಗರಿಷ್ಠ ಮಟ್ಟದಲ್ಲಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆ ದರ ಇಳಿಮುಖವಾಗಿದೆ. ಈ ಕಾರಣಗಳಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ದರವು ಇನ್ನಷ್ಟು ಇಳಿಕೆ ಆಗುವ ಅಂದಾಜು ಮಾಡಿರುವುದಾಗಿ ತಿಳಿಸಿದೆ.

ಕೇಂದ್ರ ಸರ್ಕಾರವು ಆಮದು ಸುಂಕ ತಗ್ಗಿಸಿರುವುದರಿಂದ ಅಡುಗೆ ಎಣ್ಣೆ ದರವು ಒಂದು ತಿಂಗಳಿನಲ್ಲಿ ಕೆ.ಜಿಗೆ ₹ 8 ರಿಂದ ₹ 10ರವರೆಗೆ ಇಳಿಕೆ ಆಗಿದೆ ಎಂದು ಮಾಹಿತಿ ನೀಡಿದೆ.

ಅಡುಗೆ ಎಣ್ಣೆಗಳ ವಾರ್ಷಿಕ ಬೇಡಿಕೆ 2.2 ಕೋಟಿ ಟನ್‌ಗಳಿಂದ 2.25 ಕೋಟಿ ಟನ್‌ಗಳಷ್ಟಿದೆ. ಇದರಲ್ಲಿ ಶೇ 65ರಷ್ಟನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

11-12-2021

ಜಾವಾ 70/80(ಹೊಸ)	10700-10750
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10000-10050
ದಪ್ಪ ಗುಜರಾತ್(ಹೊಸ)	8600-8700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1310 (1310)
ಒಂದು ವಾರದ ಡೆಲಿವರಿ	1305 (1305)
ಸೋಯಾ ಕಚ್ಚಾ	1160 (1160)
ಪಾಮ್ ವಾರದ ಡೆಲಿವರಿ	1174 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1200)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,875 (47,700)
ಬೆಳ್ಳಿ ಕೆ.ಜಿ	60,700 (60,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಮೆರಿಕ: ಕೆಂಟುಕಿಗೆ ಅಪ್ಪಳಿಸಿದ ಚಂಡಮಾರುತ: 50 ಸಾವು

ವಾಷಿಂಗ್ಟನ್ (ಎಎಫ್ ಪಿ): ಅಮೆರಿಕದ ಕೆಂಟುಕಿಯಲ್ಲಿ ಚಂಡಮಾರುತ ಅಪ್ಪಳಿಸಿದ ಪರಿಣಾಮ ಕನಿಷ್ಠ 50 ಮಂದಿ ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಶುಕ್ರವಾರ ತಡರಾತ್ರಿ ಅಪ್ಪಳಿಸಿದ ವಿನಾಶಕಾರಿ ಚಂಡಮಾರುತಕ್ಕೆ ಜನಜೀವನ ಅಸ್ತವ್ಯಸ್ತವಾಗಿದೆ ಎಂದು ಗವರ್ನರ್ ಆ್ಯಂಡಿ ಬೆಶಿಯರ್ ತಿಳಿಸಿದ್ದಾರೆ.

ಅಮೆಜಾನ್ ವೇರ್‌ಹೌಸ್‌ನಲ್ಲಿ 100 ಕಾರ್ಮಿಕರು ಸಿಕ್ಕಿ ಹಾಕಿಕೊಂಡರು ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಕೆಂಟುಕಿ ಜತೆಗೆ ಇತರೆ ಪ್ರದೇಶಗಳಿಗೂ ಬಿರುಗಾಳಿ ಬೀಸಿದೆ. ರಕ್ಷಣಾ ಕಾರ್ಯಾಚರಣೆ ಜಾರಿಯಲ್ಲಿದ್ದು, ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಗಾಯಾಳುಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಗವರ್ನರ್ ಮಾಹಿತಿ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	520
ರಾಮನಗರ ರೇಷ್ಮೆ	
ಮಿಶ್ರತಳಿ	300-619
ದ್ವಿತಳಿ	370-801

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	15100	232.60ಸೆಂಟ್ಸ್
ಎಸಿ	6600	6300	6350	
ಆರ್‌ಪಿ	6200	---	---	ಲಂಡನ್
ಆರ್‌ಸಿ	3820	3700	---	2376 ಡಾಲರ್ಸ್

ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆ ಅನುಷ್ಠಾನದ ಹಿನ್ನಡೆ: ಸಂಸತ್ ಸಮಿತಿ ವರದಿ

'ರಾಜ್ಯಗಳ ವೆಚ್ಚದ ಮೇಲೆ ಕೇಂದ್ರಕ್ಕೆ ನಿಗಾ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬೇಟಿ ಬಚಾವೊ ಬೇಟಿ ಪಢಾವೊ' ಯೋಜನೆಯಡಿಯಲ್ಲಿ ರಾಜ್ಯಗಳು ಮಾಡುವ ವೆಚ್ಚದ ಲೆಕ್ಕವನ್ನು ಕೇಂದ್ರ ಇರಿಸಿಕೊಳ್ಳಬೇಕು ಎಂದು ಸಂಸತ್ತಿನ ಮಹಿಳೆಯರ ಸಬಲೀಕರಣ ಸಮಿತಿಯು ಸರ್ಕಾರಕ್ಕೆ ಹೇಳಿದೆ.

ಈ ಯೋಜನೆಯ ಅಡಿಯಲ್ಲಿ ಬಿಡುಗಡೆ ಮಾಡಲಾದ ನಿಧಿಯನ್ನೇ ರಾಜ್ಯಗಳು ಪೂರ್ಣವಾಗಿ ಬಳಸಿಕೊಂಡಿಲ್ಲ. ಹಾಗಿದ್ದರೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ರಾಜ್ಯಗಳಿಗೆ ಹೆಚ್ಚುವರಿ ನಿಧಿಯನ್ನು ಬಿಡುಗಡೆ ಮಾಡುತ್ತಲೇ ಇದೆ. ಯಾವ ರಾಜ್ಯವು ಎಷ್ಟು ಹಣವನ್ನು ವೆಚ್ಚ ಮಾಡಿದೆ ಎಂಬ ಮಾಹಿತಿಯೇ ಸಚಿವಾಲಯದ ಬಳಿ ಇಲ್ಲ ಎಂದು ಸಮಿತಿಯು ಹೇಳಿದೆ.

ಯೋಜನೆಗೆ ಮೀಸಲಿಟ್ಟ ಒಟ್ಟು ಮೊತ್ತದಲ್ಲಿ ವೆಚ್ಚ ಆಗಿದ್ದು ಶೇ 25ರಷ್ಟು ಮಾತ್ರ.

ಹೆಣ್ಣು ಶಿಶುವಿನ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದಕ್ಕಾಗಿ ಮೂರು ಸಚಿವಾಲಯಗಳ ಕಾರ್ಯಕ್ರಮವಾಗಿ ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆಯನ್ನು 2014ರಲ್ಲಿ ಆರಂಭಿಸಲಾಯಿತು. ಲಿಂಗಾನುಪಾತದ ಅಂತರ ತಗ್ಗಿಸುವುದು, ಹೆಣ್ಣು ಮಕ್ಕಳ ಶಿಕ್ಷಣ ಹೆಚ್ಚಳ ಮತ್ತು ಗರ್ಭಧಾರಣೆ ಮುಂಚೆ ಮತ್ತು ಪ್ರಸವಪೂರ್ವ ಪರೀಕ್ಷೆ ತಂತ್ರಜ್ಞಾನ ಕಾಯ್ದೆಯ ಪರಿಣಾಮಕಾರಿ ಜಾರಿಯು ಈ ಯೋಜನೆಯ ಉದ್ದೇಶವಾಗಿತ್ತು.

29 ಸದಸ್ಯರ ಸಂಸತ್ ಸಮಿತಿಗೆ ಬಿಜೆಪಿ ಸಂಸದೆ ಹೀನಾ ಗವಿತ್ ಮುಖ್ಯಸ್ಥೆ. ರಾಜ್ಯಗಳು ಯೋಜನೆಯ ನಿಧಿಯನ್ನು ಬಳಸಿಕೊಳ್ಳದೇ ಇದ್ದಾಗಲೂ ಹೆಚ್ಚುವರಿ ಮೊತ್ತವನ್ನು ಸಚಿವಾಲಯವು ಮಂಜೂರು ಮಾಡಿದೆ ಎಂದು ಅವರು ಹೇಳಿದ್ದಾರೆ. 'ಬೇಟಿ ಬಚಾವೊ ಬೇಟಿ ಪಢಾವೊ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ಇತರ ಉಪಕ್ರಮಗಳಿಗಾಗಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಷ್ಟು ಹಣ ವೆಚ್ಚ ಮಾಡಿವೆ ಎಂಬ ಮಾಹಿತಿಯೂ ನೋಡಲ್ ಸಚಿವಾಲಯದ ಬಳಿ ಇಲ್ಲ' ಎಂದು ಸಮಿತಿಯ ವರದಿಯು ಹೇಳಿದೆ.

ಕೇಂದ್ರವು ನೀಡಿದ ನಿಧಿಯನ್ನು ಏಕೆ ಬಳಸಿಕೊಳ್ಳುತ್ತಿಲ್ಲ ಎಂಬ ಬಗ್ಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ತಕ್ಷಣ ಮಾಹಿತಿ ಪಡೆದುಕೊಳ್ಳುವಂತೆ ಸಮಿತಿಯು ಸಚಿವಾಲಯಕ್ಕೆ ಶಿಫಾರಸು ಮಾಡಿದೆ.

ಯೋಜನೆ ಅಡಿಯಲ್ಲಿ ಪ್ರತಿ ಜಿಲ್ಲೆಗೂ ವರ್ಷಕ್ಕೆ ₹50 ಲಕ್ಷ ಅನುದಾನ ನೀಡಲಾಗುತ್ತಿದೆ. ಎರಡು ಕಂತುಗಳಲ್ಲಿ ಹಣ ಬಿಡುಗಡೆ ಮಾಡಲಾಗುತ್ತಿದೆ. ಇದು ಸಂಪೂರ್ಣವಾಗಿ ಕೇಂದ್ರದ ಅನುದಾನದ ಯೋಜನೆ. ಯೋಜನೆಯ ಅನುದಾನವು ಸರಿಯಾಗಿ ಬಳಕೆ ಆಗುತ್ತಿಲ್ಲ ಎಂದು ಮಹಾಲೇಖಪಾಲರು 2016–17ರವರದಿಯಲ್ಲಿ ಟೀಕಿಸಿದ್ದರು.

ಹೆಣ್ಣು ಶಿಶುವಿನ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯ ಇದೆ. ಆದರೆ, ಯೋಜನೆಯು ಪರಿಣಾಮಕಾರಿಯಾಗಿ ಜಾರಿ ಆಗುವಂತೆ ಸರ್ಕಾರ ನೋಡಿಕೊಳ್ಳಬೇಕು, ಬದ್ಧತೆ ಪ್ರದರ್ಶಿಸಬೇಕು ಎಂದು ಶಿವಸೇನಾದ ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ ಹೇಳಿದ್ದಾರೆ.

'ಬಿಡುಗಡೆ ಮಾಡುವ ನಿಧಿಯ ಮೇಲೆ ನಿಗಾ ಇರಿಸದಿದ್ದರೆ, ನೀವು ಯೋಜನೆಯನ್ನೇ ಅನುಪಯುಕ್ತ ಮಾಡಿದಂತೆ. ಕೋವಿಡ್ ಸಂದರ್ಭದಲ್ಲಿ, ಡಿಜಿಟಲ್ ಅಸಮಾನತೆಯಿಂದಾಗಿ ಹಲವು ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಬೆಂಬಲ ವ್ಯವಸ್ಥೆ ಬೇಕಾಗಿದೆ' ಎಂದು ಪ್ರಿಯಾಂಕಾ ಹೇಳಿದ್ದಾರೆ.

ವೆಚ್ಚದ ವಿವರ

₹848 ಕೋಟಿ
2014ರಿಂದ 2019–20ರವರೆಗೆ ಯೋಜನೆಗೆ ಮೀಸಲಿಟ್ಟ ಒಟ್ಟು ಮೊತ್ತ (2020–21ರಲ್ಲಿ ಕೋವಿಡ್ ಕಾರಣದಿಂದ ಹಣ ಮೀಸಲಿಟ್ಟಿಲ್ಲ)

₹156.46 ಕೋಟಿ
ರಾಜ್ಯ/ಕೇಂದ್ರಾಡಳಿತ ಪ್ರದೇಶಗಳು ವೆಚ್ಚ ಮಾಡಿರುವ ಮೊತ್ತ

25.13% ಮೀಸಲಿಟ್ಟ
ಮೊತ್ತದಲ್ಲಿ ವೆಚ್ಚವಾದ ಹಣದ ಪ್ರಮಾಣ

16ಕ್ಕೆ ನೈಸರ್ಗಿಕ ಕೃಷಿ ಕಾರ್ಯಕ್ರಮ: ವೀಕ್ಷಿಸಲು ರೈತರಿಗೆ ಆಹ್ವಾನ

ಬಲರಾಮಪುರ, ಉತ್ತರ ಪ್ರದೇಶ (ಪಿಟಿಐ): ನೈಸರ್ಗಿಕ ಕೃಷಿ ಕುರಿತು ಡಿ. 16ರಂದು ದೇಶದಾದ್ಯಂತ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ರೈತರು ಈ ಕಾರ್ಯಕ್ರಮವನ್ನು ವೀಕ್ಷಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಉತ್ತರ ಪ್ರದೇಶದ ಬಲರಾಮಪುರದಲ್ಲಿ ಸರಯೂ ಕಾಲುವೆ ರಾಷ್ಟ್ರೀಯ ಯೋಜನೆಯನ್ನು ಉದ್ಘಾಟಿಸಿದ ನಂತರ ನಡೆದ ಬಹಿರಂಗಸಭೆಯಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದಿಂದ ರೈತರಿಗೆ ಲಾಭವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾಜವಾದಿ ಪಕ್ಷದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ ಪ್ರಧಾನಿ, 'ಉದ್ಘಾಟನಾ ಕಾರ್ಯಕ್ರಮದ ವೇಳೆ ರಿಬ್ಬನ್ ಕತ್ತರಿಸುವುದೇ ಕೆಲವರಿಗೆ ಆದ್ಯತೆಯಾಗಿದ್ದರೆ, ಕಾಲಮಿತಿಯೊಳಗೆ ಯೋಜನೆಗಳನ್ನು ಪೂರ್ಣಗೊಳಿಸುವುದು ನಮ್ಮ ಆದ್ಯತೆಯಾಗಿದೆ' ಎಂದರು.

ಸರಯೂ ಕಾಲುವೆ ನೀರಾವರಿ ಯೋಜನೆಯ ಶೇ 75ರಷ್ಟು ಕಾಮಗಾರಿ ನನ್ನ ನೇತೃತ್ವದ ಸರ್ಕಾರದ ಅವಧಿಯಲ್ಲೇ ಪೂರ್ಣಗೊಂಡಿದೆ. ನನ್ನ ಸರ್ಕಾರಕ್ಕೆ ಸಲ್ಲಬೇಕಾದ ಕೀರ್ತಿಯನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರ ತನ್ನ ಮುಡಿಗೇರಿಸಿಕೊಳ್ಳುತ್ತಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಟೀಕಿಸಿದ್ದಾರೆ. ಇದೇ ಕಾರಣಕ್ಕೆ ಮೋದಿ ಅವರು ಸಮಾಜವಾದಿ ಪಕ್ಷವನ್ನು ಗುರಿಯಾಗಿಸಿ ಟೀಕಾಪ್ರಹಾರ ನಡೆಸಿದರು.

ಸರಯೂ ಕಾಲುವೆ ರಾಷ್ಟ್ರೀಯ ಯೋಜನೆಗೆ ₹ 9,800 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗಿದೆ. ಯೋಜನೆಯಿಂದ ಉತ್ತರ ಪ್ರದೇಶ ಪೂರ್ವ ಭಾಗದ 29 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ. ಯೋಜನೆಯಡಿ, ಘಾಗ್ರಾ, ಸರಯೂ, ರಾಪ್ತಿ, ಬಾಣಗಂಗಾ ಮತ್ತು ರೋಹಿಣಿ ನದಿಗಳನ್ನು ಜೋಡಿಸಲಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹505
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹505

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1300 (1300)
ಸೋಯಾ (ರಿಫೈನ್ಡ್)	₹1210 (1215)
ಸೂರ್ಯಕಾಂತಿ (ರಿಫೈನ್ಡ್)	₹1270 (1270)
ಪಾಮೋಲಿನ್	₹1176 (1180)

ಭಾರತದಿಂದ ಅಫ್ಗನ್‌ಗೆ ವೈದ್ಯಕೀಯ ಸಾಮಗ್ರಿ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನ ತಾಲಿಬಾನ್ ವಶವಾದ ನಂತರ ಮಾನವೀಯ ನೆರವಿನ ಮೊದಲ ಕಂತಿನ ರೂಪದಲ್ಲಿ ಭಾರತವು ಅಫ್ಗಾನಿಸ್ತಾನಕ್ಕೆ ವೈದ್ಯಕೀಯ ಸಲಕರಣೆಗಳನ್ನು ಶನಿವಾರ ಸರಬರಾಜು ಮಾಡಿದೆ.

ಅಫ್ಗನ್ ಜನರ ಸಂಕಷ್ಟದ ಸಮಯದಲ್ಲಿ ನೆರವು ನೀಡುವ ಬದ್ಧತೆಯ ಭಾಗವಾಗಿ ಭಾರತ ಈ ಕ್ರಮ ಕೈಗೊಂಡಿದೆ.

ಹತ್ತು ಮಂದಿ ಭಾರತೀಯರು ಮತ್ತು 94 ಮಂದಿ ಅಫ್ಗನ್ನರನ್ನು ಕಾಬೂಲ್‌ನಿಂದ ಶುಕ್ರವಾರ ದೆಹಲಿಗೆ ಕರೆತಂದಿದ್ದ ವಿಮಾನದಲ್ಲೇ ವೈದ್ಯಕೀಯ ಸಾಮಗ್ರಿಗಳನ್ನು ಕಳುಹಿಸಲಾಗಿದೆ. ಕಾಬೂಲ್‌ನಲ್ಲಿನ ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿಗಳಿಗೆ ಹಸ್ತಾಂತರಿಸಲಾಗುವುದು ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಹೇಳಿದೆ.

'ವೈದ್ಯಕೀಯ ಸಾಮಗ್ರಿಗಳನ್ನು ಕಾಬೂಲ್‌ನಲ್ಲಿಯ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರತಿನಿಧಿಗಳಿಗೆ ಹಸ್ತಾಂತರಿಸಲಾಗುವುದು. ನಂತರ ಇವುಗಳನ್ನು ಅಲ್ಲಿನ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಚಿಕಿತ್ಸೆಯಲ್ಲಿ ಬಳಸಲಾಗುವುದು' ಎಂದು ಅದು ಹೇಳಿಕೆಯೊಂದರಲ್ಲಿ ತಿಳಿಸಿದೆ.

'ಸರ್ಕಾರಿ ನಿವೇಶನ: ವಿವೇಚನಾ ಕೋಟಾ ರದ್ದುಗೊಳಿಸುವ ಸಮಯ ಬಂದಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವೇಚನಾ ಕೋಟಾ ಅಡಿ ಸರ್ಕಾರಿ ನಿವೇಶನಗಳ ಹಂಚಿಕೆಯನ್ನು ರದ್ದುಗೊಳಿಸಬೇಕಾದ ಸಮಯ ಬಂದಿದೆ. ಈ ರೀತಿಯ ಹಂಚಿಕೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತಕ್ಕೆ ಕಾರಣವಾಗುತ್ತದೆ ಎಂದು ಸುಪ್ರೀಂಕೋರ್ಟ್ ಶನಿವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಹಾಗೂ ಬಿ.ವಿ.ನಾಗರತ್ನಾ ಅವರಿದ್ದ ನ್ಯಾಯಪೀಠ, ಒಡಿಶಾ ಸರ್ಕಾರ ಸಲ್ಲಿಸಿದ್ದ ಅರ್ಜಿಯೊಂದರ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ವಿವೇಚನಾ ಕೋಟಾದಡಿ ನಿವೇಶನಗಳನ್ನು ಹಂಚುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಆದರೆ, ಈ ಮಾರ್ಗಸೂಚಿಗಳನ್ನು ಅನುಸರಿಸದಿರುವುದು ಇಲ್ಲವೇ ನಿರ್ದಿಷ್ಟ ಸನ್ನಿವೇಶಗಳಿಗೆ ಹೊಂದುವಂತೆ ಅವುಗಳನ್ನು ತಿರುಚಿರುವುದು ಕಂಡುಬಂದಿದೆ' ಎಂದು ನ್ಯಾಯಪೀಠ ಹೇಳಿತು.

'ವಿವೇಚನಾ ಕೋಟಾ ಪದ್ಧತಿಯನ್ನು ರದ್ದುಗೊಳಿಸುವುದು ಹಾಗೂ ಸರ್ಕಾರಿ ಸ್ವತ್ತುಗಳು/ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡುವುದೇ ಅತ್ಯುತ್ತಮ ಮಾರ್ಗವೆನಿಸುತ್ತದೆ. ಸರ್ಕಾರಿ ಸ್ವತ್ತುಗಳ ಹಂಚಿಕೆಗೆ ಸಾರ್ವಜನಿಕ ಹಿತಾಸಕ್ತಿಯೇ ಪ್ರಧಾನ ಮಾರ್ಗದರ್ಶಕ ತತ್ವವಾಗಿರಬೇಕು' ಎಂದು ನ್ಯಾಯಪೀಠ ಪ್ರತಿಪಾದಿಸಿತು.

ಭುವನೇಶ್ವರ ನಗರದಲ್ಲಿನ ಬೆಲೆಬಾಳುವ ಸರ್ಕಾರಿ ಜಾಗವನ್ನು ಮೂವರು ಅಧಿಕಾರಿಗಳು ತಮ್ಮ ಕುಟುಂಬಗಳ ಸದಸ್ಯರು ಹಾಗೂ ಸಂಬಂಧಿಗಳಿಗೆ ಅತಿ ಕಡಿಮೆ ಬೆಲೆಗೆ ನೀಡಿದ್ದರು. ಈ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಅನುಮತಿ ನೀಡುವಂತೆ ಒಡಿಶಾ ಸರ್ಕಾರ ಅರ್ಜಿ ಸಲ್ಲಿಸಿತ್ತು.

ಅಲ್ಲದೇ, ಈ ಮೂವರು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ವಿಚಾರಣೆ ನಡೆಸುವುದನ್ನು ರದ್ದುಗೊಳಿಸಿ ಒಡಿಶಾ ಹೈಕೋರ್ಟ್ ನೀಡಿದ್ದ ಆದೇಶವನ್ನು ಸಹ ನ್ಯಾಯಪೀಠ ವಜಾಗೊಳಿಸಿತು.

ಈ ಮೂವರು ಅಧಿಕಾರಿಗಳು ಕಾನೂನುಬಾಹಿರವಾಗಿ ಸರ್ಕಾರಿ ಜಾಗವನ್ನು ಹಂಚಿಕೆ ಮಾಡಿ, ಭುವನೇಶ್ವರ ಅಭಿವೃದ್ಧಿ ಪ್ರಾಧಿಕಾರ ಹಾಗೂ ರಾಜ್ಯದ ಬೊಕ್ಕಸಕ್ಕೆ ಅಪಾರ ನಷ್ಟವುಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಹೀಗಾಗಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ನ್ಯಾಯಪೀಠ ಹೇಳಿದೆ.

ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿ: ಪ್ರವೀಣ್ ದುಬೆ, ಸಮರ್ಥ್ ಭರ್ಜರಿ ಆಟ

ಮುಂಬೈ ವಿರುದ್ಧ ಕರ್ನಾಟಕ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೌಲಿಂಗ್‌ನಲ್ಲೂ ಬ್ಯಾಟಿಂಗ್‌ನಲ್ಲೂ ಪಾರಮ್ಯ ಮೆರೆದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ವಿರುದ್ಧ ಅಮೋಘ ಜಯ ಸಾಧಿಸಿತು.

ತಿರುವನಂತಪುರದ ಮಂಗಳಾಪುರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗ ಏಳು ವಿಕೆಟ್‌ಗಳಿಂದ ಬಲಿಷ್ಠ ಮುಂಬೈಯನ್ನು ಮಣಿಸಿತು. ಎದುರಾಳಿಗಳನ್ನು 208 ರನ್‌ಗಳಿಗೆ ನಿಯಂತ್ರಿಸಿದ ಕರ್ನಾಟಕ 45.3 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 211 ರನ್ ಗಳಿಸಿ ಗುರಿ ಮುಟ್ಟಿತು.

ರವಿಕುಮಾರ್ ಸಮರ್ಥ್ (96; 129 ಎ, 9 ಬೌಂ) ಮತ್ತು ರೋಹನ್ ಕದಂ (44; 79 ಎ, 4 ಬೌಂ) ಎಚ್ಚರಿಕೆಯ ಆಟವಾಡಿ 152 ಎಸೆತಗಳಲ್ಲಿ 95 ರನ್ ಕಲೆ ಹಾಕಿ ಭದ್ರ ತಳಪಾಯ ಒದಗಿಸಿದರು. ಕೆ. ಸಿದ್ಧಾರ್ಥ್ ಮತ್ತು ಮನೀಷ್ ಪಾಂಡೆ ಬೇಗನೇ ಔಟಾದಾಗ ಕೊಂಚ ಆತಂಕ ಮೂಡಿತು. ಆದರೆ ಸಮರ್ಥ್ ಜೊತೆಗೂಡಿದ ಕರುಣ್ ನಾಯರ್ ಮುರಿಯದ ನಾಲ್ಕನೇ ವಿಕೆಟ್‌ಗೆ 77 ರನ್ ಸೇರಿಸಿ ಸುಲಭ ಜಯ ಗಳಿಸಿಕೊಟ್ಟರು.

ಟಾಸ್ ಗೆದ್ದ ಮುಂಬೈ ಬ್ಯಾಟಿಂಗ್ ಆರಿಸಿಕೊಂಡಿತು. ಯಶಸ್ವಿ ಜೈಸ್ವಾಲ್ (61; 91 ಎಸೆತ, 5 ಬೌಂಡರಿ) ಮತ್ತು ಅರ್ಮಾನ್ ಜಾಫರ್ (43; 66 ಎ, 6 ಬೌಂ) ತಂಡಕ್ಕೆ ಅತ್ಯುತ್ತಮ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 135 ಎಸೆತಗಳಲ್ಲಿ 95 ರನ್ ಸೇರಿಸಿದರು. ಎಡಗೈ ಸ್ಪಿನ್ನರ್ ಸುಚಿತ್, ಜಾಫರ್ ಅವರನ್ನು ಎಲ್‌ಬಿಡಬ್ಲ್ಯು ಬಲೆಯಲ್ಲಿ ಸಿಲುಕಿಸಿ ಕರ್ನಾಟಕ ಪಾಳಯದಲ್ಲಿ ಸಂಭ್ರಮ ಮೂಡಿಸಿದರು.



ರವಿಕುಮಾರ್ ಸಮರ್ಥ್– ಪ್ರಜಾವಾಣಿ ಚಿತ್ರ

ನಂತರ ಪ್ರವೀಣ್ ದುಬೆ ಭರ್ಜರಿ ದಾಳಿ ನಡೆಸಿದರು. ಸೂರ್ಯಕುಮಾರ್ ಯಾದವ್ ಮತ್ತು ನಾಯಕ ಶಂಸ್ ಮುಲಾನಿ ಅವರ ವಿಕೆಟ್‌ಗಳನ್ನು ಕಬಳಿಸಿದ ಅವರು ಶಿವಂ ದುಬೆ ಮತ್ತು ಸಾಯಿರಾಜ್ ಪಾಟೀಲ್ ಅವರನ್ನೂ ಪಾಪಸ್ ಕಳುಹಿಸಿದರು. ಐದನೇ ಕ್ರಮಾಂಕದ ಹಾರ್ದಿಕ್ ತಮೋರೆ ಏಕಾಂಗಿ ಹೋರಾಟ ನಡೆಸಿ ಇನಿಂಗ್ಸ್ ಮುನ್ನಡೆಸಿದರು. ಒಟ್ಟು ಏಳು ಬ್ಯಾಟರ್‌ಗಳು ಎರಡಂಕಿ ಮೊತ್ತ ದಾಟಲಾಗದೆ ಮರಳಿದರು. ತಮೋರೆ ಆಟದಿಂದಾಗಿ ತಂಡ 200ರ ಗಡಿ ದಾಟಿತು.



ಪ್ರವೀಣ್ ದುಬೆ

ಮೊದಲ ಪಂದ್ಯದಲ್ಲಿ ಪುದುಚೇರಿ ವಿರುದ್ಧ ಭರ್ಜರಿ ಜಯ ಗಳಿಸಿದ ಕರ್ನಾಟಕ ನಂತರ ತಮಿಳುನಾಡು ವಿರುದ್ಧ ಸೋತಿತ್ತು. ಭಾನುವಾರ ಬರೋಡಾ ವಿರುದ್ಧ ಸೆಣಸಲಿದೆ.

ಸ್ಕೋರ್ ಕಾರ್ಡ್

ಮುಂಬೈ 9ಕ್ಕೆ 208 (50 ಓವರ್)
ಜೈಸ್ವಾಲ್ ಸಿ ಪಾಂಡೆ ಬಿ ಸಮರ್ಥ್ 61 (91ಎ, 4x5), ಜಾಫರ್ ಎಲ್‌ಬಿಡಬ್ಲ್ಯು ಬಿ ಸುಚಿತ್ 43 (66 ಎ 4x6), ಸೂರ್ಯಕುಮಾರ್ ಸಿ ಕೌಶಿಕ್ ಬಿ ದುಬೆ 8 (18 ಎ), ಮುಲಾನಿ ಸಿ ಶರತ್ ಬಿ ದುಬೆ 9 (16 ಎ, 6x1), ತಮೋರೆ ಔಟಾಗದೆ 46 (53 ಎ, 4x2, 6x1), ಶಿವಂ ಸಿ ಶರತ್ ಬಿ ದುಬೆ 6 (20 ಎ), ಸಾಯಿರಾಜ್ ಸಿ ಶರತ್ ಬಿ ದುಬೆ 3 (13 ಎ), ಕೋಟ್ಯಾನ್ ಸಿ ಮನೀಷ್ ಬಿ ಕಾರ್ಯಪ್ಪ 2 (5 ಎ), ಧವಳ್ ಸಿ ಮನೀಷ್ ಬಿ ಕೌಶಿಕ್ 10 (17ಎ, 6x1), ಮೋಹಿತ್ ರನೌಟ್ (ಕರುಣ್) 2 (2 ಎ), ಪ್ರಶಾಂತ್ ಔಟಾಗದೆ 0 (0 ಎ)
ಇತರೆ (ಲೆಗ್‌ಬೈ 8, ನೋಬಾಲ್ 1, ವೈಡ್ 9) 18
ವಿಕೆಟ್ ಪತನ: 1-95 (ಅರ್ಮಾನ್ ಜಾಫರ್, 22.3), 2-121 (ಸೂರ್ಯಕುಮಾರ್ ಯಾದವ್, 28.3), 3-124 (ಯಶಸ್ವಿ ಜೈಸ್ವಾಲ್, 30.2), 4-145 (ಶಮ್ಸ್ ಮುಲಾನಿ, 34.1), 5-157 (ಶಿವಂ ದುಬೆ, 38.2), 6-166 (ಸಾಯಿರಾಜ್ ಪಾಟೀಲ್, 42.2), 7-169 (ತನುಷ್ ಕೋಟ್ಯಾನ್, 43.2), 8-194 (ಧವಳ್ ಕುಲಕರ್ಣಿ, 48.2), 9-201 (ಮೋಹಿತ್ ಅವಸ್ಥಿ, 49.3)
ಬೌಲಿಂಗ್: ವಾಸುಕಿ ಕೌಶಿಕ್ 6-0-25-1, ವಿದ್ಯಾಧರ ಪಾಟೀಲ್ 8-0-57-0, ಕೆ.ಸಿ.ಕಾರ್ಯಪ್ಪ 10-2-18-1, ಜೆ.ಸುಚಿತ್ 10-1-34-1, ಪ್ರವೀಣ್ ದುಬೆ 10-0-29-4, ಕರುಣ್ ನಾಯರ್ 4-0-23-0, ರವಿಕುಮಾರ್ ಸಮರ್ಥ್ 2-0-14-1

ಕರ್ನಾಟಕ 3ಕ್ಕೆ 211 (45.3 ಓವರ್)
ಸಮರ್ಥ್ ಔಟಾಗದೆ 96 (129 ಎ 4x9), ಕದಂ ಸಿ ಸೂರ್ಯಕುಮಾರ್ ಬಿ ಕೋಟ್ಯಾನ್ 44 (79 ಎ, 4x4), ಸಿದ್ಧಾರ್ಥ್ ಸಿ ತಮೋರೆ ಬಿ ಸೋಳಂಕಿ 17 (20 ಎ, 4x3), ಮನೀಷ್ ಬಿ ಸೋಳಂಕಿ 5 (12 ಎ, 4x1), ಕರುಣ್ ಔಟಾಗದೆ 39 (34 ಎ, 4x3, 6x2)
ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 3) 10
ವಿಕೆಟ್ ಪತನ: 1-95 (ರೋಹನ್ ಕದಂ, 25.2), 2-124 (ಕೃಷ್ಣಮೂರ್ತಿ ಸಿದ್ಧಾರ್ಥ್, 30.5), 3-134 (ಮನೀಷ್ ಪಾಂಡೆ, 34.1)
ಬೌಲಿಂಗ್: ಧವಳ್ ಕುಲಕರ್ಣಿ 6-1-17-0, ತನುಷ್ ಕೋಟ್ಯಾನ್ 9.3-0-44-1, ಮೋಹಿತ್ ಅವಸ್ಥಿ 5-0-31-0, ಪ್ರಶಾಂತ್ ಸೋಳಂಕಿ 10-0-48-2, ಶಮ್ಸ್ ಮುಲಾನಿ 10-0-31-0, ಶಿವಂ ದುಬೆ 2-0-16-0, ಯಶಸ್ವಿ ಜೈಸ್ವಾಲ್ 3-0-18-0

ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್‌ಗಳ ಜಯ.



ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ –ಎಎಫ್‌ಪಿ ಚಿತ್ರ

ವಸ್ತು ಸಂಗ್ರಹಾಲಯದ ಭದ್ರತಾ ಸಿಬ್ಬಂದಿ ಬಂಧನ

ಮರಡೋನಾ ವಾಚ್ ಅಸ್ಸಾಂನಲ್ಲಿ!

ಗುವಾಹಟಿ (ಪಿಟಿಐ): ಫುಟ್‌ಬಾಲ್ ದಿಗ್ಗಜ ಡಿಯೆಗೊ ಮರಡೋನಾ ಅವರ ದುಬೈಯಲ್ಲಿ ಕಳವಾಗಿದ್ದ ಕೈಗಡಿಯಾರ ಅಸ್ಸಾಂನಲ್ಲಿ ಪತ್ತೆಯಾಗಿದೆ.

ಅಸ್ಸಾಂನ ಶಿವಸಾಗರ್ ಜಿಲ್ಲೆಯಲ್ಲಿ ಶನಿವಾರ ಬೆಳಿಗ್ಗೆ ಕೈಗಡಿಯಾರವನ್ನು ಪತ್ತೆಹಚ್ಚಲಾಗಿದ್ದು, ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅರ್ಜೆಂಟೀನಾದ ದಿವಂಗತ ಫುಟ್‌ಬಾಲ್ ಆಟಗಾರನ ವಸ್ತುಗಳನ್ನು ಸಂಗ್ರಹಿಸುತ್ತಿದ್ದ ಯುಎಇಯ ದುಬೈ ಕಂಪನಿಯಲ್ಲಿ ಆರೋಪಿಯು ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಎಂದು ಅವರು ಹೇಳಿದ್ದಾರೆ.

ಹ್ಯುಬ್ಲೊ ಕೈಗಡಿಯಾರವನ್ನು ಸಂಗ್ರಹಿಸಲಾಗಿದ್ದ ತಿಜೋರಿಯನ್ನು ಆರೋಪಿಯು ದೋಚಿರುವ ಶಂಕೆಯಿದೆ ಎಂದು ಪೊಲೀಸ್ ಮಹಾನಿರ್ದೇಶಕ ಭಾಸ್ಕರ ಜ್ಯೋತಿ ಮಹಾಂತ ಹೇಳಿದ್ದಾರೆ.

ಕಂಪನಿಯಲ್ಲಿ ಕೆಲಸ ಮಾಡಿದ ನಂತರ ಆರೋಪಿ ತನ್ನ ತಂದೆಗೆ ಅನಾರೋಗ್ಯ ಎಂದು ರಜೆ ತೆಗೆದುಕೊಂಡು ಆಗಸ್ಟ್‌ನಲ್ಲಿ ಅಸ್ಸಾಂಗೆ ಮರಳಿದ್ದ. ಆರೋಪಿಯ ಬಗ್ಗೆ ಮಾಹಿತಿಯೊಂದಿಗೆ ದುಬೈ ಪೊಲೀಸರು ಭಾರತಕ್ಕೆ ತಲುಪಿದ ನಂತರ ಅಸ್ಸಾಂ ಪೊಲೀಸರು ಕ್ರಮ ಕೈಗೊಂಡಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಆರೋಪಿಯನ್ನು ಆತನ ನಿವಾಸದಲ್ಲಿ ನಸುಕಿನ ಜಾವ ಬಂಧಿಸಲಾಗಿ ಎಂದು ಅವರು ತಿಳಿಸಿದ್ದಾರೆ.

ಉಭಯ ದೇಶಗಳ ಪೊಲೀಸ್ ಪಡೆಗಳ ನಡುವಿನ ಅಂತರರಾಷ್ಟ್ರೀಯ ಸಮನ್ವಯ ಒಳಗೊಂಡ ಕಾರ್ಯಾಚರಣೆ ಇದಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

400 ವಿಕೆಟ್ ಪಡೆದ ಆಸ್ಟ್ರೇಲಿಯಾ ಬೌಲರ್‌ಗಳು

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ*	ಶ್ರೇಷ್ಠ**
ಶೇನ್ ವಾರ್ನ್	145	708	71ಕ್ಕೆ8	128ಕ್ಕೆ12
ಗ್ಲೆನ್ ಮೆಗ್ರಾ	124	563	24ಕ್ಕೆ8	27ಕ್ಕೆ10
ನೇಥನ್ ಲಯನ್	101	403	50ಕ್ಕೆ8	154ಕ್ಕೆ13

* ಇನಿಂಗ್ಸ್ ** ಪಂದ್ಯ

ಆ್ಯಷಸ್ ಸರಣಿ: ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾಗೆ ಜಯ

ಪ್ಯಾಟ್ ನಾಯಕತ್ವಕ್ಕೆ 'ಸ್ವೀಟ್'

ಬ್ರಿಸ್ಬೇನ್ (ಎಎಫ್‌ಪಿ): ಮೂರನೇ ದಿನದಾಟದ ಮುಕ್ತಾಯದ ವೇಳೆ ಡ್ರಾದ ಭರವಸೆ ಮೂಡಿದ್ದ ಇಂಗ್ಲೆಂಡ್ ಪಾಳಯ ನಾಲ್ಕನೇ ದಿನ ಬೆಳಿಗ್ಗೆ ಆಘಾತಕ್ಕೆ ಒಳಗಾಯಿತು. ಅಮೋಘ ಬೌಲಿಂಗ್ ದಾಳಿ ಸಂಘಟಿಸಿದ ಆಸ್ಟ್ರೇಲಿಯಾ ತಂಡ ಗೆಲುವಿನ ಸಂಭ್ರಮದಲ್ಲಿ ಮಿಂದಿತು.

ಆ್ಯಷಸ್ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಒಂದು ದಿನ ಬಾಕಿ ಇರುವಾಗಲೇ ಒಂಬತ್ತು ವಿಕೆಟ್‌ಗಳಿಂದ ಜಯ ಗಳಿಸಿದ ಆತಿಥೇಯ ತಂಡ ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು. ವೇಗದ ಬೌಲರ್ ಪ್ಯಾಟ್ ಕಮಿನ್ಸ್ ನಾಯಕರಾಗಿ ಮುನ್ನಡೆಸಿದ ಮೊದಲ ಪಂದ್ಯವಾಗಿತ್ತು ಇದು.

ಗಾಬಾ ಕ್ರೀಡಾಂಗಣದಲ್ಲಿ 20 ರನ್ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 5.1 ಓವರ್‌ಗಳಲ್ಲಿ ದಡ ಸೇರಿತು.

ಮೊದಲ ಇನಿಂಗ್ಸ್‌ನಲ್ಲಿ 278 ರನ್‌ಗಳ ಹಿನ್ನಡೆ ಅನುಭವಿಸಿದ್ದ ಇಂಗ್ಲೆಂಡ್ ಮೂರನೇ ದಿನವಾದ ಶುಕ್ರವಾರ ಆರಂಭದಲ್ಲಿ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆಗ ಡೇವಿಡ್ ಮಲಾನ್ ಮತ್ತು ನಾಯಕ ಜೋ ರೂಟ್ ಚೇತರಿಕೆ ತುಂಬಿದ್ದರು. ಶತಕದ ಜೊತೆಯಾಟವಾಡಿ ಡ್ರಾ ಮಾಡಿಕೊಳ್ಳುವ ಭರವಸೆ ಮೂಡಿಸಿದ್ದರು. ಆದರೆ ಶನಿವಾರ 77 ರನ್ ಸೇರಿಸುವಷ್ಟರಲ್ಲಿ ಉಳಿದ ಎಂಟು ವಿಕೆಟ್‌ಗಳನ್ನು ಕಳೆದುಕೊಂಡಿತು.

ಗೆಲುವಿಗೆ 4 ರನ್ ಬೇಕಾಗಿದ್ದಾಗ ಆಸ್ಟ್ರೇಲಿಯಾ, ಅಲೆಕ್ಸ್ ಕ್ಯಾರಿ ವಿಕೆಟ್ ಕಳೆದುಕೊಂಡಿತು. ಇಂಗ್ಲೆಂಡ್ ಶನಿವಾರ ಭರವಸೆಯಿಂದಲೇ ಆಡಲಿಳಿದಿತ್ತು. ಮಾರ್ನಸ್ ಲಾಬುಶೇನ್‌ಗೆ ಕ್ಯಾಚ್ ನೀಡಿ ಡೇವಿಡ್ ಮಲಾನ್ ವಾಪಸಾಗುವುದರೊಂದಿಗೆ ತಂಡದ ಪತನ ಆರಂಭಗೊಂಡಿತು. ಮುಂದಿನ ಓವರ್‌ನಲ್ಲಿ ರೂಟ್ ಕೂಡ ಮರಳಿದರು. ಅದರ ನಂತರದ ಓವರ್‌ನಲ್ಲಿ ಒಲಿ ಪೋಪ್ ಕೂಡ ವಾಪಸಾದರು.

ವೇಗದ ದಾಳಿಯ ಬಿಸಿ ಮುಟ್ಟಿಸಿದ ಕಮಿನ್ಸ್ ಅವರು ಬೆನ್ ಸ್ಟೋಕ್ಸ್ ವಿಕೆಟ್ ಕಬಳಿಸಿದರು. ಗಲಿಯಲ್ಲಿದ್ದ ಕ್ಯಾಮರೂನ್ ಗ್ರೀನ್‌ಗೆ ಸ್ಟೋಕ್ಸ್ ಕ್ಯಾಚ್ ನೀಡಿದರು. ಗಾಯದ ಸಮಸ್ಯೆಯಿಂದಾಗಿ ಶುಕ್ರವಾರ ಚಹಾ ವಿರಾಮದ ನಂತರ ಬೌಲಿಂಗ್ ಮಾಡದೇ ಇದ್ದ ಜೋಶ್ ಹ್ಯಾಜಲ್‌ವುಡ್, ಜೋಸ್ ಬಟ್ಲರ್ ವಿಕೆಟ್ ಉರುಳಿಸುವುದರೊಂದಿಗೆ ತಂಡದ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದರು. ಇನಿಂಗ್ಸ್ ಸೋಲಿನ ಆತಂಕದಲ್ಲಿದ್ದ ಇಂಗ್ಲೆಂಡ್ ಬಳಗ ಕ್ರಿಸ್ ವೋಕ್ಸ್ ಮತ್ತು ಒಲಿ ರಾಬಿನ್ಸನ್ ಅವರ ದಿಟ್ಟ ಆಟದಿಂದ ನಿಟ್ಟುಸಿರು ಬಿಟ್ಟಿತು. ಇವರಿಬ್ಬರ 18 ರನ್‌ಗಳ ಜೊತೆಯಾಟವು ಆಸ್ಟ್ರೇಲಿಯಾವನ್ನು ಮತ್ತೆ ಬ್ಯಾಟಿಂಗಿಗೆ ಇಳಿಯುವಂತೆ ಮಾಡಿತು. ಲಯನ್ ಎಸೆತದಲ್ಲಿ ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸಿದ ರಾಬಿನ್ಸನ್ ಬ್ಯಾಕ್‌ವರ್ಡ್ ಸ್ಕ್ವೇರ್‌ಲೆಗ್‌ನಲ್ಲಿದ್ದ ಟ್ರಾವಿಸ್ ಹೆಡ್‌ಗೆ ಕ್ಯಾಚ್ ನೀಡಿದರು.

ಭೋಜನ ವಿರಾಮಕ್ಕೆ ನಿಗದಿಯಾಗಿದ್ದ ಸಮಯಕ್ಕೆ ಸ್ವಲ್ಪ ಮುನ್ನ ಮಾರ್ಕ್ ವುಡ್ ಅವರನ್ನು ಲಯನ್ ಪೆವಿಲಿಯನ್‌ಗೆ ಅಟ್ಟಿದರು. 9 ವಿಕೆಟ್ ಉರುಳಿದ್ದರಿಂದ ಅಂಪೈರ್‌ಗಳು ಭೋಜನ ವಿರಾಮಕ್ಕೆ ತೆರಳುವುದನ್ನು ಅರ್ಧ ತಾಸು ಮುಂದೂಡಿದರು. ವೋಕ್ಸ್ ವಿಕೆಟ್ ಪಡೆಯುವುದರೊಂದಿಗೆ ಕ್ಯಾಮರಾನ್ ಗ್ರೀನ್ ಎದುರಾಳಿಗಳ ಇನಿಂಗ್ಸ್‌ಗೆ ತೆರೆ ಎಳೆದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್ ಮೊದಲ ಇನಿಂಗ್ಸ್: 50.1 ಓವರ್‌ಗಳಲ್ಲಿ 147 ಮತ್ತು ಎರಡನೇ ಇನಿಂಗ್ಸ್ 103 ಓವರ್‌ಗಳಲ್ಲಿ 297 (ಡೇವಿಡ್ ಮಲಾನ್ 82, ಜೋ ರೂಟ್ 89; ಪ್ಯಾಟ್ ಕಮಿನ್ಸ್ 51ಕ್ಕೆ 2, ನೇಥನ್ ಲಯನ್ 91ಕ್ಕೆ 4, ಕ್ಯಾಮರಾನ್ ಗ್ರೀನ್ 23ಕ್ಕೆ 2). ಆಸ್ಟ್ರೇಲಿಯಾ: ಮೊದಲ ಇನಿಂಗ್ಸ್ 104.3 ಓವರ್‌ಗಳಲ್ಲಿ 425 ಮತ್ತು ಎರಡನೇ ಇನಿಂಗ್ಸ್ 5.1 ಓವರ್‌ಗಳಲ್ಲಿ 1 ವಿಕೆಟ್‌ಗೆ 20 (ಒಲಿ ರಾಬಿನ್ಸನ್ 13ಕ್ಕೆ 1). ಫಲಿತಾಂಶ: ಆಸ್ಟ್ರೇಲಿಯಾಗೆ 9 ವಿಕೆಟ್ ಜಯ; 5 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ; ಪಂದ್ಯಶ್ರೇಷ್ಠ: ಟ್ರಾವಿಸ್ ಹೆಡ್



ನೇಥನ್ ಲಯನ್

ಇಂಗ್ಲೆಂಡ್‌ಗೆ ಶೇ 100 ದಂಡ

ನಿಧಾನಗತಿಯಲ್ಲಿ ಬೌಲಿಂಗ್ ಮಾಡಿದ್ದಕ್ಕೆ ಇಂಗ್ಲೆಂಡ್ ತಂಡದಿಂದ ಪಂದ್ಯಶುಲ್ಕದ ಪೂರ್ಣ ಮೊತ್ತವನ್ನು ದಂಡದ ರೂಪದಲ್ಲಿ ಪಡೆದುಕೊಳ್ಳಲಾಗಿದೆ. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಐದು ಪಾಯಿಂಟ್‌ಗಳನ್ನೂ ಕಡಿಮೆ ಮಾಡಲಾಗಿದೆ.

ನಿಗದಿತ ಅವಧಿಯಲ್ಲಿ ಐದು ಓವರ್‌ಗಳಷ್ಟು ತಂಡ ಹಿಂದೆ ಉಳಿದಿತ್ತು. ಇದನ್ನು ಗಮನಿಸಿದ ರೆಫರಿಗಳ ತಂಡದ ಡೇವಿಡ್ ಬೂನ್ ದಂಡ ವಿಧಿಸಲು ಶಿಫಾರಸು ಮಾಡಿದ್ದರು.

ಒಂದು ವಿಕೆಟ್‌ಗೆ 11 ತಿಂಗಳು ಕಾದ ಲಯನ್

ಬ್ರಿಸ್ಬೇನ್ (ಎಪಿ): ಒಂದು ವಿಕೆಟ್‌ಗಾಗಿ 11 ತಿಂಗಳು ಕಾದ ಆಫ್ ಸ್ಪಿನ್ನರ್ ನೇಥನ್ ಲಯನ್ ಅವರ ಕನಸು ಶನಿವಾರ ನನಸಾಯಿತು. ಶತಕದತ್ತ ಹೆಜ್ಜೆ ಹಾಕಿದ್ದ ಡೇವಿಡ್ ಮಲಾನ್ ವಿಕೆಟ್ ಗಳಿಸುವುದರೊಂದಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ '400 ವಿಕೆಟ್ ಕ್ಲಬ್'ಗೆ ಲಯನ್ ಸೇರ್ಪಡೆಗೊಂಡರು.

ಸಂಕ್ಷಿಪ್ತ ಸುದ್ದಿ

ಹಾಕಿ: ಕರ್ನಾಟಕ ತಂಡದ ಶುಭಾರಂಭ

ಬೆಂಗಳೂರು: ಕರ್ನಾಟಕ ತಂಡ ಪುಣೆಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದೆ. ಶನಿವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ತಂಡ 14–0ಯಿಂದ ಜಮ್ಮು ಮತ್ತು ಕಾಶ್ಮೀರವನ್ನು ಮಣಿಸಿತು.

ಮೊಹಮ್ಮದ್ ರಹೀಲ್ (2, 14ನೇ ನಿಮಿಷ), ಸೋಮಣ್ಣ ಬಿ.ಪಿ (4, 47ನೇ ನಿ), ಪುನೀತ್ ಆರ್ (20, 55ನೇ ನಿ), ಭರತ್ ಕೆ.ಆರ್ (23, 30ನೇ ನಿ), ಎಸ್.ದೀಕ್ಷಿತ್ (27ನೇ ನಿ), ಚಿರಂತ್ ಸೋಮಣ್ಣ (42ನೇ ನಿ), ಲಿಖಿತ್ ಬಿ.ಎಂ (43, 60ನೇ ನಿ), ಕುಮಾರ್ ಯತೀಶ್ (52ನೇ ನಿ) ಮತ್ತು ಶಮಂತ್ ಸಿ.ಎಸ್ (60ನೇ ನಿ) ಗೋಲು ಗಳಿಸಿದರು.

ಚಿರಾಗ್ ಉತ್ತಮ ಸಾಧನೆ

ಬೆಂಗಳೂರು: ಕರ್ನಾಟಕದ ಯುವ ಚಾಲಕ ಚಿರಾಗ್ ಘೋರ್ಪಡೆ ಎಂಎಂಆರ್‌ಟಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕಾರ್ ರೇಸಿಂಗ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಆಗ್ರಾದ ಶಾಹನ್ ಅಲಿ ಮೊಹಸಿನ್ ಅವರನ್ನು ಹಿಂದಿಕ್ಕಿ ಚೊಚ್ಚಲ ಪ್ರಶಸ್ತಿ ಗಳಿಸಿದರು. ಬೆಂಗಳೂರಿನ ರಿಶಾನ್ ರಾಜೀವ್ ಮೂರನೇ ಸ್ಥಾನ ಗಳಿಸಿದರು.



ಚಿರಾಗ್


ಪ್ರಜಾವಾಣಿ ಭಾನುವಾರದ
ಪುರವಣಿ
ಭಾನುವಾರ, 12 ಡಿಸೆಂಬರ್ 2021



ನಗರದ ದೃಶ್ಯ ಸಂಸ್ಕೃತಿಗೊಂದು ಬಣ್ಣ 4



ಪ್ಯಾರಿಸ್ ಒಲಿಂಪಿಕ್ಸ್‌ನ ಕೌಂಟ್‌ಡೌನ್ ಮಾಡುವ ಗಡಿಯಾರವನ್ನೂ ಹೊಂದಿರುವ ತೋರಣಗಲ್ಲಿನ ವಿಶ್ವದರ್ಜೆಯ ಕ್ರೀಡಾ ತರಬೇತಿ ಕೇಂದ್ರ ಯುವ ಹೃದಯಗಳಲ್ಲಿ ಸಾಧನೆಯ ಹಸಿವನ್ನು ಹೆಚ್ಚಿಸುತ್ತಿದೆ



ಒಲಿಂಪಿಕ್ಸ್ ಪದಕದ ಕನಸು ಬಿತ್ತುತ್ತಿರುವ ತೋರಣಗಲ್ಲಿನ ಜೆಎಸ್‌ಡಬ್ಲ್ಯು ಕ್ರೀಡಾ ಸಂಕೀರ್ಣದ ನೋಟ
ಪ್ರಜಾವಾಣಿ ಚಿತ್ರಗಳು: ಬಿ.ಎಚ್. ಶಿವಕುಮಾರ್

ಬಿಸಿಲುನಾಡಿನಲ್ಲಿ ಅರಳುತಿವೆ
ಒಲಿಂಪಿಕ್ಸ್ ಕನಸುಗಳು

ಗಿರೀಶ ದೊಡ್ಡಮನಿ

‘ಕ್ರೀಡೆಯಲ್ಲಿ ಅತ್ಯುನ್ನತ ಸಾಧನೆ ಮಾಡಲು ಬಯಸುವ ಒಬ್ಬ ಅಥ್ಲೀಟ್‌ಗೆ ಬೇಕಾದ ಎಲ್ಲ ಸೌಲಭ್ಯಗಳು ಒಂದೇ ಸೂರಿನಡಿಯಲ್ಲಿ ಸಿಗುತ್ತಿರುವ ಸ್ಥಳ ಇದು. ಇಲ್ಲಿ ಎಲ್ಲವೂ ಇದೆ. ಇಲ್ಲಿಗೆ ಬಂದ ಮೇಲೆ ನನ್ನ ಜೀವನದ ದಿಕ್ಕು ಬದಲಾಗಿದೆ. ದೊಡ್ಡಮಟ್ಟದ ಸಾಧನೆ ಮಾಡುವ ಆತ್ಮವಿಶ್ವಾಸ ಮೂಡಿದೆ’

ಬಳ್ಳಾರಿ ಜಿಲ್ಲೆಯ ತೋರಣಗಲ್‌ನಲ್ಲಿರುವ ಜೆಎಸ್‌ಡಬ್ಲ್ಯು ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನ (ಐಐಎಸ್) ಬಾಕ್ಸಿಂಗ್ ರಿಂಗ್‌ನಲ್ಲಿ ತಮ್ಮ ಕೈಗಳ ಗ್ಲೌಸ್ ಸರಿಪಡಿಸಿಕೊಳ್ಳುತ್ತಿದ್ದ ವೈಶಾಖ ಹೇಳಿದ ಮಾತುಗಳಿವು. ಬೆಂಗಳೂರಿನ ಪ್ರತಿಭೆ ವೈಶಾಖ ಸದ್ಯ ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ಭರವಸೆಯ ಬಾಕ್ಸರ್. ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುತ್ತಿರುವ ವೈಶಾಖ ಅವರೊಂದಿಗೆ ಜೇಕಬ್ ಬೆಂಗಳೂರಿನ ಮತ್ತೊಬ್ಬ ಬಾಕ್ಸರ್. ‘ಕ್ರೀಡೆಯಲ್ಲಿ ಉನ್ನತ ಸಾಧನೆಗಾಗಿ ಬೇರೆ ಬೇರೆ ಊರುಗಳಿಂದ ಜನರು ಬೆಂಗಳೂರಿಗೆ ಬರುತ್ತಾರೆ. ಆದರೆ, ನಾವು ಬೆಂಗಳೂರಿನಿಂದ ಇಲ್ಲಿಗೆ ಬಂದಿದ್ದೇವೆ. ಇದೊಂದು ಅದ್ಭುತವಾದ ತಾಣ’ ಎನ್ನುತ್ತಾರೆ ಜೇಕಬ್.



ಕ್ರೀಡಾ ಸಂಕೀರ್ಣದಲ್ಲಿ ಕಾಣಸಿಗುವ ನಿತ್ಯದ ನೋಟ



ಇನ್‌ಸ್ಪೈರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನ (ಐಐಎಸ್) ಜಿಮ್ ಕೇಂದ್ರ

ಇವರಿಬ್ಬರ ತರಹ ಬೇರೆ ಬೇರೆ ರಾಜ್ಯಗಳಿಂದ ಬಂದು ಇಲ್ಲಿ ತರಬೇತಿ ಪಡೆಯುತ್ತಿರುವ 140 ಉದಯೋನ್ಮುಖ ಪ್ರತಿಭೆಗಳು ಇಲ್ಲಿವೆ. ಕ್ರೀಡೆಯಲ್ಲಿ ಅತ್ಯುನ್ನತ ಸಾಧನೆಯ ಕನಸು ಕಾಣುವ ಹದಿಹರೆಯದ ಹುಡುಗ–ಹುಡುಗಿಯರ ದೊಡ್ಡ ದಂಡು ಇಲ್ಲಿದೆ. ಕಠಿಣ ಕಸರತ್ತು ಮಾಡುತ್ತ, ಮೈತುಂಬಾ ಬೆವರು ಸುರಿಸುತ್ತ ಆತ್ಮವಿಶ್ವಾಸದ ಮುಗುಳ್ನಗು ಚೆಲ್ಲುವ ಈ ಉದಯೋನ್ಮುಖ ಕ್ರೀಡಾಪಟುಗಳ ಕಂಗಳಲ್ಲಿ ಪದಕದ ಹೊಳಪು ಇಣುಕುತ್ತದೆ.

2017–18ರಲ್ಲಿ ಜಿಂದಾಲ್ ಸೌಥ್ ವೆಸ್ಟ್ ಲಿಮಿಟೆಡ್‌ನ ಔದ್ಯಮಿಕ ಟೌನ್‌ಷಿಪ್‌ನಲ್ಲಿ ಐಐಎಸ್ ನಿರ್ಮಾಣಗೊಂಡಿದೆ. ಜೆಎಸ್‌ಡಬ್ಲ್ಯುನ ಪಾರ್ಥ್ ಜಿಂದಾಲ್ ಅವರ ಕನಸಿನ ಕೂಸು ಇದು. ಆರಂಭವಾಗಿ ನಾಲ್ಕು ವರ್ಷಗಳಲ್ಲಿಯೇ ಜಗದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. 42 ಎಕರೆ ಪ್ರದೇಶದಲ್ಲಿ ಅರಳಿ ನಿಂತಿರುವ ಈ ಸಂಸ್ಥೆಯ ಮೂಲ ಉದ್ದೇಶವೇ ಒಲಿಂಪಿಕ್ಸ್ ಮಟ್ಟದ ಸ್ಪರ್ಧಿಗಳನ್ನು ಸಿದ್ಧಗೊಳಿಸುವುದು. ಅದಕ್ಕಾಗಿ ಸಕಲ ಸೌಲಭ್ಯಗಳನ್ನೂ ಇಲ್ಲಿ ಅಭಿವೃದ್ಧಿಪಡಿಸಲಾಗಿದೆ. ಅಥ್ಲೆಟಿಕ್ಸ್, ಕುಸ್ತಿ, ಜುಡೊ ಮತ್ತು ಬಾಕ್ಸಿಂಗ್ ಕ್ರೀಡೆಗಳಿಗೆ ಇಲ್ಲಿ ತರಬೇತಿ ನೀಡಲಾಗುತ್ತಿದೆ.

ಅಷ್ಟೇ ಅಲ್ಲ. ಜೆಎಸ್‌ಡಬ್ಲ್ಯು ಮಾಲೀಕತ್ವ ಹೊಂದಿರುವ ಐಎಸ್‌ಎಲ್ ತಂಡ ಬೆಂಗಳೂರು ಫುಟ್‌ಬಾಲ್ ಕ್ಲಬ್, ಐಪಿಎಲ್‌ನ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಪ್ರೊ ಕಬಡ್ಡಿ ಲೀಗ್‌ನ ಹರಿಯಾಣ ಸ್ಟೀಲರ್ಸ್ ಆಟಗಾರರು ಪೂರ್ವಭಾವಿ ತರಬೇತಿಗಾಗಿ ಇಲ್ಲಿ ಬರುತ್ತಾರೆ.

ಟೋಕಿಯೊ ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದ ನೀರಜ್ ಚೋಪ್ರಾ, ಕಂಚಿನ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಮತ್ತು ಅಂತರರಾಷ್ಟ್ರೀಯ ಬಾಕ್ಸರ್‌ಗಳ ಕೌಶಲಗಳಿಗೆ ಇಲ್ಲಿ ಸಾಣೆ ಹಿಡಿಯಲಾಗಿದೆ. ಈಗಲೂ ಅವರಿಗೆ ಐಐಎಸ್ ಬೆಂಬಲವಾಗಿ ನಿಂತಿದೆ. ಅದರೊಂದಿಗೆ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುವ ಪ್ರತಿಭೆಗಳನ್ನು ಹುಡುಕಿ ಕರೆತಂದು ಇಲ್ಲಿ ತರಬೇತಿ ನೀಡಲಾಗುತ್ತಿದೆ. ಕ್ರೀಡೆಯ ಜೊತೆಗೆ ಶಿಕ್ಷಣ, ವೈದ್ಯಕೀಯ ನೆರವು ಮತ್ತು ಪೌಷ್ಟಿಕ ಆಹಾರೋಪಚಾರವನ್ನೂ ಇಲ್ಲಿ ನೀಡಲಾಗುತ್ತಿದೆ. ಇದೆಲ್ಲವೂ ಉಚಿತ.

ಐಐಎಸ್‌ನಲ್ಲಿ ಏನೇನಿದೆ?: ಇಲ್ಲಿರುವ ವಿಶಾಲವಾದ ಜಿಮ್ನಾಷಿಯಂನಲ್ಲಿ ಏಕಕಾಲಕ್ಕೆ 50–60 ಜನ ಅಭ್ಯಾಸ ಮಾಡಬಹುದು. ಪ್ರತಿಯೊಂದು ಕ್ರೀಡೆಗೆ ಬೇಕಾದ ಪ್ರತ್ಯೇಕ ವ್ಯಾಯಾಮಗಳಿಗೆಅನುಕೂಲವಾಗುವಂತಹ ಸಲಕರಣೆಗಳು ಇಲ್ಲಿವೆ.

ಕಾಂಬ್ಯಾಟ್ ಸ್ಪೋರ್ಟ್ಸ್ ವಿಭಾಗದ ಕಟ್ಟಡದಲ್ಲಿ ಅಂತರರಾಷ್ಟ್ರೀಯ ದರ್ಜೆಯ ಮ್ಯಾಟ್‌ಗಳಿರುವ ಕುಸ್ತಿ ಕಣ, ಬಾಕ್ಸಿಂಗ್ ರಿಂಗ್ ಮತ್ತು ಜೂಡೊ ಅಭ್ಯಾಸದ ಅರೆನಾ ಇವೆ. ಅದರ ಹಿಂದಿನ ಮೈದಾನದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಮತ್ತು ಫೀಲ್ಡ್ ಸೌಲಭ್ಯಗಳಿವೆ. ಒಲಿಂಪಿಕ್ ದರ್ಜೆಯ ಈಜುಕೊಳದ ನಿರ್ಮಾಣ ಭರದಿಂದ ಸಾಗುತ್ತಿದೆ.

ಮೂಲಸೌಲಭ್ಯಗಳಷ್ಟೇ ಅಲ್ಲ. ತರಬೇತಿ ವಿಷಯದಲ್ಲಿಯೂ ಇಲ್ಲಿ ವೃತ್ತಿಪರತೆ ಇದೆ. ಉನ್ನತ ಸಾಧಕರನ್ನೇ ಇಲ್ಲಿ ಕೋಚ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕುಸ್ತಿ ಕಣದಲ್ಲಿ ಕಾಲಿಟ್ಟರೆ, ಪುಷ್ಪಶೋಭಿತ ಹನುಮನ ವಿಗ್ರಹಕ್ಕೆ ನಮಿಸುವ ಮಹಿಳಾ ಕುಸ್ತಿಪಟುಗಳು, ಇಲ್ಲಿ ಕೋಚ್ ಆಗಿರುವ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕವಿಜೇತ ಕ್ಯೂಬಾದ ಯಾಂಡ್ರೊ ಕ್ವಿಂಟಾನಾ ಅವರ ಖಡಕ್ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಾರೆ.

ಪ್ರಜಾವಾಣಿ ನೋಡಿಯೊ
ತೋರಣಗಲ್‌ನ ಐಐಎಸ್ ಕೇಂದ್ರದ ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

ಇನ್ನೊಂದೆಡೆ ಇರಾನಿನ ಚಾಂಪಿಯನ್ ಕುಸ್ತಿ ಕೋಚ್ ಆಮಿರ್ ತವಾಕೊಲಿಯನ್ ಮಾರ್ಗದರ್ಶನದಲ್ಲಿ ಪುರುಷ ಕುಸ್ತಿಪಟುಗಳು ಅಥ್ಲೆಟಿಕ್ಸ್ ಅಂಗಳದಲ್ಲಿ ವ್ಯಾಯಾಮ, ಆಟೋಟಗಳಲ್ಲಿ ತೊಡಗಿ ತಮ್ಮ ಮಾಂಸಖಂಡಗಳಿಗೆ ಕಸುವು ತುಂಬಿಕೊಳ್ಳುತ್ತಾರೆ.

ಆಧುನಿಕ ಕಾಲದ ಕ್ರೀಡೆಯಲ್ಲಿ ಒಬ್ಬ ಕ್ರೀಡಾಪಟು ಸಿದ್ಧವಾಗಲು ದೈಹಿಕ ತರಬೇತಿಯಷ್ಟೇ ಸಾಕಾಗುವುದಿಲ್ಲ. ಅದಕ್ಕೆ ಪೂರಕವಾಗಿ ಹಲವು ಕೈಗಳು ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ಮನೋವೈದ್ಯರು, ಫಿಸಿಯೊಥೆರಪಿಸ್ಟ್, ಪೌಷ್ಟಿಕ ಆಹಾರ ತಜ್ಞರು ಮತ್ತು ಸ್ಟ್ರೆಂಥ್–ಕಂಡಿಷನಿಂಗ್ ಪರಿಣತರು ಕೂಡ ಇಲ್ಲಿದ್ದಾರೆ.


‘ಕ್ರೀಡಾಪಟುಗಳ ಸಾಮರ್ಥ್ಯ ನಿರ್ವಹಣೆ ಚೆನ್ನಾಗಿರಬೇಕಾದರೆ ಅವರು ಗಾಯಗೊಂಡಾಗ ಸೂಕ್ತ ಚಿಕಿತ್ಸೆ ಮತ್ತು ಪುನಃಶ್ಚೇತನ ನೀಡುವುದು ಒಂದು ಕ್ರಮ. ಅದಕ್ಕಿಂತ ಮುಖ್ಯವಾಗಿ ಅವರು ಗಾಯಗೊಳ್ಳದಂತೆ ಸಬಲರನ್ನಾಗಿರಿಸುವುದು ಮತ್ತೊಂದು ಕ್ರಮ. ಈ ಎರಡೂ ಪದ್ಧತಿಗಳನ್ನು ನಾವು ಇಲ್ಲಿ ಸಮರ್ಥವಾಗಿ ನಿಭಾಯಿಸುತ್ತಿದ್ದೇವೆ. ಗಾಯಗಳಿಂದ ರಕ್ಷಿಸಿಕೊಂಡು ಸದೃಢಗೊಳ್ಳುವ ವಿಧಾನಗಳನ್ನು ಇಲ್ಲಿಯ ಅಥ್ಲೀಟ್‌ಗಳಿಗೆ ಮಾರ್ಗದರ್ಶನ ಮಾಡುತ್ತೇವೆ. ಕ್ರೀಡಾಪಟುಗಳ ದೈಹಿಕ ಸಾಮರ್ಥ್ಯ, ಮಾನಸಿಕ ಸಾಮರ್ಥ್ಯಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಅವರಿಗೆ ಚಿಕಿತ್ಸೆ, ಆರೈಕೆ ಮತ್ತು ಆಹಾರ ಕ್ರಮಗಳ ಕುರಿತು ತಿಳಿವಳಿಕೆ ನೀಡಲಾಗುತ್ತದೆ. ಔಷಧೋಪಚಾರದ ಕುರಿತು ಸೂಕ್ತ ತಿಳಿವಳಿಕೆ ನೀಡುತ್ತೇವೆ’ ಎಂದು ಇಲ್ಲಿಯ ಫಿಸಿಯೊಥೆರಪಿ ವಿಭಾಗದ ಮುಖ್ಯಸ್ಥ ಧನಂಜಯ್ ಕೌಶಿಕ್ ವಿವರಿಸುತ್ತಾರೆ.

ಇಲ್ಲಿರುವ ಅಚ್ಚುಕಟ್ಟಾದ ಊಟದ ಮನೆಯಲ್ಲಿ ಭಾರತದ ಬೇರೆ ಬೇರೆ ರಾಜ್ಯಗಳಿಂದ ಬಂದವರಿಗಾಗಿ ಸಿದ್ಧಪಡಿಸಲಾದ ಎಲ್ಲ ವಿಧದ ಆಹಾರಗಳೂ ಲಭ್ಯ. ಆದರೆ, ಪೌಷ್ಟಿಕ ಆಹಾರ ತಜ್ಞರು ತಮಗೆ ನೀಡಿದ ಡಯಟ್ ಸೂಚಿಯ ಪ್ರಕಾರವೇ ಅಥ್ಲೀಟ್‌ಗಳು ಆಹಾರ ಆಯ್ಕೆ ಮಾಡಿಕೊಳ್ಳುತ್ತಾರೆ.


ಪ್ಯಾರಿಸ್ ಕೌಂಟ್‌ಡೌನ್... ಐಐಎಸ್‌ನ ಆಡಳಿತ ಕಟ್ಟಡದ ಪ್ರವೇಶ ದ್ವಾರದಲ್ಲಿ ಹಾಕಿರುವ ದೊಡ್ಡದೊಂದು ಡಿಜಿಟಲ್ ಗಡಿಯಾರದಲ್ಲಿ 2024ರ ಒಲಿಂಪಿಕ್ಸ್‌ನ ಕೌಂಟ್‌ಡೌನ್ ನಡೆಯುತ್ತಿದೆ. ಈ ಗಡಿಯಾರದಲ್ಲಿ ಪ್ರತಿಕ್ಷಣವೂ ಬದಲಾಗುವ ಅಂಕಿಗಳು ಇಲ್ಲಿಯುವ ಯುವಹೃದಯಗಳಲ್ಲಿ ಸಾಧನೆಯ ಹಸಿವು ಹೆಚ್ಚಿಸುತ್ತಿವೆ. ಅದಕ್ಕಾಗಿ ಮತ್ತಷ್ಟು, ಮಗದಷ್ಟು ಶ್ರಮವಹಿಸಿ ಅಭ್ಯಾಸ ಮಾಡಲು ಪ್ರೇರಣೆ ಸಿಗುತ್ತಿದೆ.

‘ವಿಶ್ವದ ಬೇರೆಲ್ಲ ಅಥ್ಲೀಟ್‌ಗಳಿಗೆ ಸರಿಸಮನಾದ ಪ್ರತಿಭೆಗಳು ಭಾರತದಲ್ಲಿಯೂ ಇವೆ. ಆದರೆ ಅವರಿಗೆ ಸೂಕ್ತ ಸಮಯಕ್ಕೆ ಸರಿಯಾದ ಪೋಷಣೆ, ಪ್ರೋತ್ಸಾಹ ಮತ್ತು ಮಾರ್ಗದರ್ಶನ ಕೊಡಬೇಕು. ಅದು ಇಲ್ಲಿ ಸಿಗುತ್ತದೆ’ ಎಂದು ಡಿಜಿಟಲ್ ಗಡಿಯಾರದ ಮುಂದೆ ನಿಂತಿದ್ದ ಬಾಕ್ಸಿಂಗ್ ಮುಖ್ಯಕೋಚ್, ಇಂಗ್ಲೆಂಡ್‌ನ ಜಾನ್ ವರ್ಬರ್ಟನ್ ನುಡಿಗಳಲ್ಲಿ ಭಾರತದ ಕ್ರೀಡೆಯ ಭವ್ಯ ಭವಿಷ್ಯದ ಭರವಸೆ ಎದ್ದು ಕಾಣುವಂತದ್ದು.

ಇದೇ ಕಟ್ಟಡದ ಮುಂಭಾಗದಲ್ಲಿರುವ ನೀರಜ್ ಚೋಪ್ರಾ ಮಾರ್ಗದಲ್ಲಿ ಪ್ರತಿದಿನ ಹೆಜ್ಜೆ ಹಾಕುವ ಹುಡುಗ–ಹುಡುಗಿಯರ ಕಂಗಳಲ್ಲಿ ಪದಕದ ಹೊಳಪು ಇಣುಕುತ್ತದೆ.



ಯಾಂಡ್ರೊ ಕ್ವಿಂಟಾನಾ



ಪ್ರೊ. ಬಿ.ಎ. ವಿವೇಕ್ ರೈ – ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ವಿನಯಕ್ಕೆ ಅನ್ವರ್ಥ ‘ವಿವೇಕ’ ಪಂಥ

ಸಂಧ್ಯಾ ಹೆಗಡೆ

ವಿನಯಕ್ಕೆ ಅನ್ವರ್ಥದಂತಿರುವ ಪ್ರೊ. ಬಿ.ಎ. ವಿವೇಕ ರೈ ಅವರಿಗೆ ಈಗ 75ರ ಸಂಭ್ರಮ. ಪಂಪನ ಕಾವ್ಯಗಳ ವಿಶ್ಲೇಷಣಾತ್ಮಕ ಗ್ರಂಥ ರಚನೆಗೆ ಈ ಅಮೃತ ಸಂವತ್ಸರವನ್ನು ಸಾಕ್ಷೀಕರಿಸುವುದು ಅವರ ಕನಸು. ಪ್ರಾಚೀನ ಕಾವ್ಯ, ಅನುವಾದ, ಜಾನಪದ, ವಿಮರ್ಶೆ ಹೀಗೆ ಸಾಹಿತ್ಯದ ಮಜಲುಗಳಲ್ಲಿ ಮಾಗಿದ ವಿವೇಕ ರೈ, ಈವರೆಗೆ ಒಟ್ಟು 51 ಕೃತಿಗಳನ್ನು ರಚಿಸಿದ್ದಾರೆ. ಕತ್ರಿನ್ ಬಿಂದರ್ ಜತೆ ಸೇರಿ ತೇಜಸ್ವಿಯವರ ‘ಕರ್ವಾಲೋ’ ಕಾದಂಬರಿಯನ್ನು ಜರ್ಮನ್ ಭಾಷೆಗೆ ಅನುವಾದಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಅವರನ್ನು ‘ಹರಸಿ’ ಬಂದಿವೆ. ವೃತ್ತಿ ಮತ್ತು ಪ್ರವೃತ್ತಿ ಯಾನದ ಝಲಕ್ ಅನ್ನು ಅವರು ಇಲ್ಲಿ ಹಂಚಿಕೊಂಡಿದ್ದಾರೆ.

ಪ್ರಜಾವಾಣಿ ನೋಡಿಯೊ
ವಿವೇಕ ರೈ ಅವರ ಮಾತುಗಳಲ್ಲೇ ಅವರ ಬಾಳಯಾನದ ಕಥೆ ಕೇಳಲು ಇಲ್ಲಿ ಸ್ಕ್ಯಾನ್ ಮಾಡಿ...

- **75ರ ವಸಂತದಲ್ಲಿ ಹಿಂದೊಮ್ಮೆ ಹೊರಳಿದರೆ ನಿಮ್ಮನ್ನು ನೇವರಿಸುವ ನೆನಪುಗಳು...**

75 ವರ್ಷಗಳಾಗಿವೆ ಎನ್ನುವುದು ಬೆರಗೇನು ಅಲ್ಲ. ಆರೋಗ್ಯವಂತ ಮನುಷ್ಯನ ಬದುಕಿನಲ್ಲಿ ಆಗುವ ಸಹಜ ಪ್ರಕ್ರಿಯೆ. ವಯಸ್ಸಿನಲ್ಲಿ ಹಿರಿಯನಾಗಿದ್ದೇ ಸಾಧನೆಯೂ ಅಲ್ಲ. ಬಾಲ್ಯ ಮತ್ತು ಇಳಿಸಂಜೆಯ ನಡುವೆ ಅನಾಯಾಸವಾಗಿ ಸಿಕ್ಕ ಅವಕಾಶಗಳು, ಸವಾಲುಗಳು ಇಲ್ಲಿಯವರೆಗೆ ಕೈಹಿಡಿದು ನಡೆಸಿವೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಪುಣಚ ಗ್ರಾಮದ ಸಣ್ಣ ಕೃಷಿಕ ಕುಟುಂಬದ ನಾನು ಹೈಸ್ಕೂಲ್ ಶಿಕ್ಷಣ ಪಡೆದೆ ಎಂಬುದೇ ಅಚ್ಚರಿ. ಆರ್ಥಿಕ ಬಲ ಇಲ್ಲದ ಕುಟುಂಬ, ಶಿಕ್ಷಣ ಮೊಟಕುಗೊಳ್ಳಬೇಕಿತ್ತು. ತಂದೆ ಪುರಂದರ ರೈ ಅವರ ಕಾಳಜಿಯಿಂದ ಕಾಲೇಜು ಶಿಕ್ಷಣದ ಕನಸು ಗರಿಬಿಚ್ಚಿತು. ಭೌತ ವಿಜ್ಞಾನದಲ್ಲಿ ಎಂ.ಎಸ್ಸಿ ಮಾಡುವ ಹಂಬಲ, ಅದೇ ವೇಳೆಗೆ 1968ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ವಿಭಾಗ ಮಂಗಳೂರಿನಲ್ಲಿ ಪ್ರಾರಂಭ, ವಿಜ್ಞಾನದೆಡೆಗಿನ ಆಸಕ್ತಿ ಕನ್ನಡದೆಡೆಗೆ ಹೊರಳಿ, ಕನ್ನಡ ಎಂ.ಎ.ಗೆ ಪ್ರವೇಶ ಪಡೆದಿದ್ದೇ ನನ್ನ ಬದುಕಿನ ದೊಡ್ಡ ತಿರುವು. ಬದುಕಿನುದ್ದಕ್ಕೂ ಆಕಸ್ಮಿಕಗಳೇ ಅದೃಷ್ಟವಾಗಿ ಬಂದಿದ್ದು ನನ್ನ ಭಾಗ್ಯ.

- **ವಿಶ್ವವಿದ್ಯಾಲಯದ ಅಧ್ಯಾಪಕನಾಗುವುದು ನಿಮ್ಮ ಕನಸಾಗಿತ್ತಾ ?**

ನಾನು ಕನ್ನಡ ಎಂ.ಎ. ಆಯ್ದುಕೊಂಡಿದ್ದು ಇಂದಿಗೂ ವಿಸ್ಮಯವೇ. ಮೊದಲ ರ್‍ಯಾಂಕ್ ಪಡೆದ ನನಗೆ ದೇ. ಜವರೇಗೌಡರು ಮತ್ತು ಹಾ.ಮಾ. ನಾಯಕರು ಕರೆದು ಉದ್ಯೋಗ ಕೊಟ್ಟರು. ಹಾ.ಮಾ.ನಾಯಕರು ಬಿಳಿಹಾಳೆ ನೀಡಿ, ಅರ್ಜಿ ಬರೆಯಲು ಹೇಳಿಕೊಟ್ಟರು. ಅನಿರೀಕ್ಷಿತವೆಂಬಂತೆ, ವಿಶ್ವವಿದ್ಯಾಲಯದ ಅಧ್ಯಾಪಕನಾಗಿ ವೃತ್ತಿ ಜೀವನ ಆರಂಭಿಸಿದಾಗ ಸಾಹಿತ್ಯದ ಜ್ಞಾನ ಇರಲಿಲ್ಲ. ವಿದ್ಯಾರ್ಥಿಗಳಿಗೆ ಪಾಠ ಮಾಡುವ ಕಾರಣಕ್ಕೆ ಪ್ರಾಚೀನ ಕಾವ್ಯ, ಛಂದಸ್ಸು, ವ್ಯಾಕರಣ, ಜಾನಪದ ಎಲ್ಲವನ್ನೂ ನನ್ನೊಳಗೆ ಇಳಿಸಿಕೊಂಡೆ. ನಂತರ ಪ್ರೊಫೆಸರ್, ರೀಡರ್ ಆಗಿದ್ದು ನನಗೆ ಮುಖ್ಯವೇ ಅಲ್ಲ, ನಾನೊಬ್ಬ ಅಧ್ಯಾಪಕನಾದೆ ಅನ್ನುವುದೇ ಈಗಲೂ ಕೌತುಕ. ಸಾಂಸ್ಕೃತಿಕ ಮಾನವವಿಜ್ಞಾನವು ನನ್ನ ಪಾಲಿಗೆ ಓದು ಅಧ್ಯಯನದ ಶಿಸ್ತು, ದೇವರು, ಧರ್ಮ, ಸಾಮಾಜಿಕ ಸ್ವರೂಪವನ್ನು ತಿಳಿಸಿದ ಗುರು.

> ಬಾಳಿನ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ವಿದ್ವಾಂಸ ವಿವೇಕ ರೈ ಜೊತೆಗೊಂದು ಮಾತು ಮಂಥನ

- **ಜನಪದ ನಿಮ್ಮ ಮೇಲೆ ಪ್ರಭಾವ ಬೀರಿದ್ದು ಹೇಗೆ ?**

ಬದುಕಿನ ಸೂಕ್ಷ್ಮಗಳನ್ನು ನನ್ನ ಒಳಗಣ್ಣಿನಲ್ಲಿ ದಾಖಲಿಸಿದವರು ಜನಪದರು. ವಿದ್ವತ್ತಿಗಿಂತ ಹೆಚ್ಚಾಗಿ ಬದುಕಿನ ಒಳನೋಟ ತೆರೆದಿಟ್ಟಿದ್ದು ಜನಪದ ಕಾರ್ಯದ ಅಧ್ಯಯನ. ‘ತುಳು ಜನಪದ ಸಾಹಿತ್ಯ’ಕ್ಕೆ ಡಾಕ್ಟರೇಟ್ ಪಡೆದಿದ್ದು, ಜನಪದರೊಂದಿಗಿನ ಒಡನಾಟ ಹೆಚ್ಚಿದ್ದು, ಮುಂದೆ ಗ್ರಂಥಗಳ ಅಧ್ಯಯನಕ್ಕೆ ನೆಲೆಗಟ್ಟು ಕಟ್ಟಿಕೊಟ್ಟಿತು.

- **ಶಿಕ್ಷಣ ಸಂಸ್ಥೆಗಳು, ಅಧ್ಯಯನ ಪೀಠ, ಅಕಾಡೆಮಿಗಳನ್ನು ನೀವು ಕಟ್ಟಿ ಬೆಳೆಸಿದ್ದು ಈಗಲೂ ಜನರ ಮನದಲ್ಲಿ ಅಚ್ಚೊತ್ತಿದೆ. ಇದು ಸಾಧ್ಯವಾಗಿದ್ದು ಹೇಗೆ ?**

ಮೊದಲೇ ಹೇಳಿದೆನಲ್ಲ ಹಾಗೆ, ಅವಕಾಶಗಳು ಆಕಸ್ಮಿಕವಾಗಿ ಬಂದವು. 1985ರಲ್ಲಿ ಪ್ರೊಫೆಸರ್ ಆದೆ. ಹೊಸದಾಗಿ ಬಂದ ಕುಲಪತಿಯವರು, ಹೊಸಬರಿಗೆ ಉತ್ಸಾಹ ತುಂಬುತ್ತಿದ್ದರು. ಒಂದಿನಿತು ಹೆಚ್ಚು ಭಾರ ನನ್ನ ಮೇಲೆ ತೂಗಿ, ಕೆಲಸಕ್ಕೆ ಹಚ್ಚುತ್ತಿದ್ದರು. ತುಳು ಪೀಠ ಕಟ್ಟುವಾಗ ಶೂನ್ಯದಿಂದ ಕೆಲಸ ಪ್ರಾರಂಭಿಸಿದೆ. ‘ಇಲ್ಲ’ಗಳ ಕೊರಗು ನನ್ನನ್ನು ಕಾಡಲಿಲ್ಲ. ‘ಎಲ್ಲ’ವನ್ನೂ ನಾನೇ ಆಗಿ ನಿಭಾಯಿಸಿದೆ. ವೀರಪ್ಪ ಮೊಯಿಲಿ ಮುಖ್ಯಮಂತ್ರಿ ಆಗಿದ್ದಾಗ ಡಾ. ಶಿವರಾಮ ಕಾರಂತ ಪೀಠ ಅಸ್ತಿತ್ವಕ್ಕೆ ಬಂತು. ಅದನ್ನು ಮುನ್ನಡೆಸುವ ಹೊಣೆಯೂ ಹೆಗಲಿಗೇರಿತು. ಕಾರಂತರು ಬದುಕಿರುವ ತನಕ ಅವರೇ ಈ ಪೀಠಕ್ಕೆ ಶಕ್ತಿಯಾಗಿದ್ದರು. ಪ್ರಸಾರಾಂಗ ಕಟ್ಟುವಾಗಲೂ ಇದೇ ಅನುಭವ. ಈ ಕಟ್ಟುವಿಕೆಯ ಪ್ರಕ್ರಿಯೆಗೆ ನನಗೆ ಬೆಂಬಲವಾದದ್ದು ಮಂಗಳೂರು ವಿಶ್ವವಿದ್ಯಾಲಯ.

1994ರಲ್ಲಿ ತುಳು ಅಕಾಡೆಮಿ ಅಧ್ಯಕ್ಷನಾದಾಗ ನನ್ನ ಬಳಿ ಇದ್ದಿದ್ದು ಆದೇಶದ ಪ್ರತಿ ಮಾತ್ರ. ಐದಾರು ತಿಂಗಳು ಅಧ್ಯಕ್ಷನಿಂದ ಜವಾನನವರೆಗೆ ಎಲ್ಲವೂ ನಾನೇ. ಈಗ ತುಳು ಅಕಾಡೆಮಿಗೆ 25ರ ಹರೆಯ. ಹಣ ಇಲ್ಲದೆ ಸಂಸ್ಥೆ ಕಟ್ಟಿದರೆ ಮುಂದೆ ಅವು ಬೆಳೆಯುತ್ತವೆ. ರಿಸ್ಕ್ ತೆಗೆದುಕೊಳ್ಳದಿದ್ದರೆ ಸಂಸ್ಥೆ ಕಟ್ಟಲು ಸಾಧ್ಯವಿಲ್ಲ. ಹಣ ನಮ್ಮ ಆದ್ಯತೆ ಆಗಲೇ ಬಾರದು, ಹಣಕ್ಕಾಗಿ ಸಂಸ್ಥೆ ಕಟ್ಟಲೂಬಾರದು. ದುಡ್ಡು ಇದ್ದಾಕ್ಷಣ ಹೆಚ್ಚು ಕೆಲಸ ಆಗುತ್ತದೆ ಎನ್ನಲೂ ಆಗದು. ಗಾಂಧಿವಾದಿಯಾಗಿದ್ದ ನನ್ನ ತಂದೆಯ ಮಾತು ‘ಹಣ ಪಡೆದರೆ ಗುಲಾಮಿ ಮನಃಸ್ಥಿತಿ ಬರುತ್ತದೆ.’ ಇದು ನನ್ನ ಆದರ್ಶ.

2ನೇ ಪುಟಕ್ಕೆ...

ಜಾರುಹಾದಿಯಲ್ಲಿ ಪಣಜಿ ಚಿತ್ರೋತ್ಸವ?

ಪ್ರೇಮಕುಮಾರ್ ಹರಿಯಬ್ಬೆ

ಪಣಜಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಖಾಸಗಿಯವರಿಗೆ ವಹಿಸುವ ಉದ್ದೇಶ ಸರ್ಕಾರಕ್ಕಿದೆಯೇ? ಈಚೆಗೆ ಮುಕ್ತಾಯವಾದ 52ನೆಯ ಚಿತ್ರೋತ್ಸವವನ್ನು ಸೂಕ್ಷ್ಮವಾಗಿ ಗಮನಿಸಿದರೆ ಸರ್ಕಾರ ಆ ನಿಟ್ಟಿನತ್ತ ಹೆಜ್ಜೆ ಇಟ್ಟಿದೆ ಎಂದೆನಿಸುತ್ತದೆ. ಪಣಜಿ ಚಿತ್ರೋತ್ಸವಕ್ಕೆ ಭವಿಷ್ಯವಿಲ್ಲ ಎಂದು ಚಿತ್ರೋದ್ಯಮದ ಹಲವು ಗಣ್ಯರು ಹೇಳಿದ್ದ ಮಾತು ಇಷ್ಟು ಬೇಗ ನಿಜವಾಗುವ ಕಾಲ ಸನ್ನಿಹಿತವಾಯಿತೇ? ಚಿತ್ರೋತ್ಸವ ಜಾರು ಹಾದಿಯಲ್ಲಿ ಸಾಗುತ್ತಿದೆಯೇ? ಹೌದು, ಹೀಗೆ ಭಾವಿಸಬಹುದಾದ ಹಲವು ಬೆಳವಣಿಗೆಗಳು ಸ್ಪಷ್ಟವಾಗಿ ಈಗ ಕಾಣಿಸಿವೆ. ಪ್ರಸ್ತುತ ಸರ್ಕಾರ ಖಾಸಗೀಕರಣದ ಪರವಾಗಿರುವುದರಿಂದ ಈ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಚಿತ್ರೋತ್ಸವ ನಡೆಸುವುದು ದೇಶದ ಪ್ರತಿಷ್ಠೆಗಾಗಿ. ಉದ್ಘಾಟನೆ, ಸಮಾರೋಪ ಸಮಾರಂಭಗಳು ಅದ್ದೂರಿಯಾಗಿ ನಡೆದು ಬಿಟ್ಟರೆ ಚಿತ್ರೋತ್ಸವ ಯಶಸ್ವಿಯಾದಂತೆ ಎಂದು ಸರ್ಕಾರ ಭಾವಿಸಿದಂತಿದೆ. ಈ ಸಲ ಉದ್ಘಾಟನೆ ಮತ್ತು ಸಮಾರೋಪ ಎರಡೂ ಖಾಸಗಿ ಪ್ರಾಯೋಜಕತ್ವದಲ್ಲಿ ಅದ್ದೂರಿಯಾಗಿ ನಡೆದವು. ಚಿತ್ರೋತ್ಸವದಲ್ಲಿ ಪ್ರದರ್ಶನವಾದ ಸಿನಿಮಾಗಳನ್ನು ಒಟಿಟಿ ವೇದಿಕೆಗಳಲ್ಲಿ ನೋಡುವ ಅವಕಾಶವೂ ಇತ್ತು. ಈ ಬೆಳವಣಿಗೆ ಬಗ್ಗೆ ಉದ್ಯಮದವರು ಏನು ಹೇಳುತ್ತಾರೆ ಎನ್ನುವುದು ಗೊತ್ತಿಲ್ಲ.

2004ರಲ್ಲಿ ಪಣಜಿಯಲ್ಲಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ನಡೆಸುವ ಅಂದಿನ ಸರ್ಕಾರದ ನಿರ್ಧಾರ ಚಿತ್ರೋದ್ಯಮದ ಮಂದಿಗೆ ಪಥ್ಯವಾಗಿರಲಿಲ್ಲ. ಗೋವಾದಲ್ಲಿ ಚಿತ್ರೋದ್ಯಮ ಬೆಳೆದಿಲ್ಲ. ಆ ರಾಜ್ಯದ ಜನರಿಗೆ ಸಿನಿಮಾ ನೋಡುವ ಹವ್ಯಾಸವೂ ಇಲ್ಲ. ಅದು ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದ ರಾಜ್ಯವೇ ಹೊರತು ಸಿನಿಮಾಕ್ಕಲ್ಲ ಇತ್ಯಾದಿ ಮಾತುಗಳು ಕೇಳಿ ಬಂದಿದ್ದವು. ಪಣಜಿ ಚಿತ್ರೋತ್ಸವದ ಕಾಯಂ ನೆಲೆಯೂ ಆದ ಮೇಲೂ ಅಪಸ್ವರದ ಮಾತುಗಳು ಕೇಳಿ ಬರುತ್ತಲೇ ಇದ್ದವು.

ಚಿತ್ರೋತ್ಸವದಲ್ಲಿ ಬಾಲಿವುಡ್ ಮಂದಿಗೆ ಮಣೆ ಹಾಕಿ, ಪ್ರಾದೇಶಿಕ ಸಿನಿಮಾದವರನ್ನು ದೂರ ಇಡುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪವೂ ಇತ್ತು. ಇವನ್ನೆಲ್ಲ ಅರಗಿಸಿಕೊಂಡು ಚಿತ್ರೋತ್ಸವ ಯಶಸ್ವಿಯಾಗಿ ನಡೆದು, ಅದು ಪಣಜಿಯಲ್ಲಿ ನೆಲೆಯೂರುವ ಲಕ್ಷಣಗಳು ಕಾಣಿಸಿದ್ದವು. ಆದರೆ ಇತ್ತೀಚಿನ ಮೂರ್ನಾಲ್ಕು ವರ್ಷಗಳ ಅವಧಿಯಲ್ಲಿ ಅದು ಕಳೆಗುಂದುತ್ತಿದೆ. ಪಣಜಿಗೆ ಬರುವ ಪ್ರತಿನಿಧಿಗಳ ಸಂಖ್ಯೆಯೂ ಕಡಿಮೆ ಆಗುತ್ತಿದೆ.

ಈ ವರ್ಷದ ಚಿತ್ರೋತ್ಸವಕ್ಕೆ ಹೆಸರು ನೋಂದಾಯಿಸಿಕೊಂಡ ಪ್ರತಿನಿಧಿಗಳ ಸಂಖ್ಯೆ ಎರಡು ಸಾವಿರ. ಕೊರೊನಾ ಭಯ, ಒಟಿಟಿಯಲ್ಲೇ ಸಿನಿಮಾ ನೋಡುವ ಅವಕಾಶ ಇದ್ದುದರಿಂದ ಹೆಚ್ಚು ಜನ ಬರಲಿಲ್ಲ ಎಂದು ಹೇಳಲಾಯಿತು.

3ನೇ ಪುಟಕ್ಕೆ...



ಪಣಜಿಯ 52ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಾಧುರಿ ದೀಕ್ಷಿತ್ ಅವರನ್ನು ಸನ್ಮಾನಿಸಿದಾಗ...

ಶೃಂಗಾರದಲ್ಲಿ ಅದ್ದಿ ತೆಗೆದ ಕಂಬನಿ

ಬಿ.ಎಂ. ಹನೀಫ್

ಒಟ್ಟು 54 ಕವಿತೆಗಳ ಸಂಕಲನವಿದು. ಜೊತೆಗೆ 'ಹನಿ- ಇಬ್ಬನಿ' ಎನ್ನುವ ಶೀರ್ಷಿಕೆಯಲ್ಲಿ 34 ಹನಿಕವಿತೆಗಳೂ ಇವೆ. ಕವಯಿತ್ರಿ ಲಲಿತಾ ಸಿದ್ಧಬಸವಯ್ಯ ಮೋಹಪರವಶರಾಗಿ ಸುದೀರ್ಘ ಮುನ್ನುಡಿಯೊಂದನ್ನೂ ಬರೆದಿದ್ದಾರೆ. ಅವರ ಪ್ರಕಾರ ಇಲ್ಲಿರುವ ಬಹುತೇಕ ಕವಿತೆಗಳೂ ರತಿಯ ಕಂಬನಿಯೇ. 'ನಂದಿನಿಯವರ ಈ ಸಂಕಲನ ಕವಯಿತ್ರಿಯೊಬ್ಬರು ಕನ್ನಡಕ್ಕೆ ಕೊಟ್ಟ ಮೊದಲ ಪ್ರಣಯಾಯಣ. ಹೆಣ್ಣಿನ ಲೈಂಗಿಕ ಬಯಕೆಯನ್ನು ಇಡೀ ಸಂಕಲನದ ಪ್ರಧಾನ ವಸ್ತುವನ್ನಾಗಿಸಿಕೊಂಡು ಬಹು ಪ್ರಾಮಾಣಿಕತೆಯಿಂದ ಕಟ್ಟಿಕೊಟ್ಟ ಕನ್ನಡದ ಮೊದಲ ಕವನಗುಚ್ಛ' ಎನ್ನುತ್ತಾರೆ ಅವರು.

'ಬಿಸಿರಕ್ತದ ಯುವಜನರು 20ರ ಹರೆಯದಲ್ಲಿ ಕಮ್ಯುನಿಸ್ಟರಾಗಬೇಕು. 30ರ ಹರೆಯದಲ್ಲಿ ಸಮಾಜವಾದಿಗಳಾಗಬೇಕು' ಎನ್ನುವ ಮಾತಿದೆ. ಇದನ್ನೇ ಕಾವ್ಯಲೋಕಕ್ಕೆ ಅನ್ವಯಿಸುವುದಾದರೆ, '20ರ ಹರೆಯದಲ್ಲಿ ಪ್ರೇಮಕವಿತೆಗಳನ್ನು ಬರೆಯುವವರು, 30ರ ಹರೆಯದಲ್ಲಿ ಪ್ರಣಯ ಕವಿತೆಗಳನ್ನು ಬರೆಯಬೇಕು' ಎನ್ನಬಹುದು. ಕವಿಗಳೇನೋ ಅದಕ್ಕೆ ರೆಡಿ. ಆದರೆ ಕವಯಿತ್ರಿಯರು? ಮಡಿವಂತಿಕೆಯೇ ಹೆಚ್ಚಿರುವ ನಮ್ಮ ಪರಿಸರದಲ್ಲಿ ಇದು ಕಷ್ಟವೇ.

ಕವಯಿತ್ರಿಯರ ಇಂತಹ ದೇಹ – ಮೋಹ ಕೇಂದ್ರಿತ ಕವಿತೆಗಳು ಬಿಡಿಯಾಗಿ ಕಾಣಸಿಗುತ್ತವಾದರೂ ಒಂದಿಡೀ ಸಂಕಲನ ಇದಕ್ಕೇ ಮುಡಿಪಾಗಿರುವಂತಹದ್ದು ಕಾಣ ಸಿಗುವುದಿಲ್ಲ. ಕನ್ನಡದಲ್ಲಿ ಇಂತಹ ಕವಿತೆಗಳನ್ನು ತನ್ನದೇ ಆದ ಶೈಲಿಯಲ್ಲಿ ಬರೆದಿರುವ ಪ್ರತಿಭಾ ನಂದಕುಮಾರ್ ನೆನಪಾಗುತ್ತಾರಾದರೂ ಅವರ ಕವಿತೆಗಳು ಪ್ರೀತಿ-ಮೋಹಗಳನ್ನೂ ಮೀರಿ ಹೊಸ ಚೌಕಟ್ಟುಗಳನ್ನು ನಿರ್ಮಿಸಿಕೊಳ್ಳುತ್ತವೆ. ಎಚ್.ಆರ್.ಸುಜಾತ ಅವರ ಪ್ರೇಮದಲ್ಲೇ ಅದ್ದಿ ತೆಗೆದಂತಹ ಕವಿತೆಗಳೂ ನೆನಪಾಗುತ್ತವೆ. ಆದರೆ ಈ ಸಂಕಲನದ ಕವಿತೆಗಳು ಅವೆರಡಕ್ಕಿಂತಲೂ 'ಬೋಲ್ಡ್' ಆಗಿರುವಂಥವು.

ನಂದಿನಿಯವರ ಈ ಸಂಕಲನದಲ್ಲಿ ಒಬ್ಬ ನಾಯಕಿ ಇದ್ದಾಳೆ. ನಿಂತಲ್ಲಿ ನಿಲ್ಲದ, ಕೂತಲ್ಲಿ ಕೂರದ 'ಮೋಹಿ'ನಿ ಈಕೆ. ಆದರೆ ಈಕೆ ಶ್ರೀಕೃಷ್ಣನನ್ನೇ ತನ್ನ ಪತಿಯೆಂದು ಭಾವಿಸಿ ಭಕ್ತಿಪರವಶೆಯಾದ ಮೀರಾಳಂತೆಯೂ ಅಲ್ಲ; ಚೆನ್ನಮಲ್ಲಿಕಾರ್ಜುನನೇ ಪರದೈವ ಎಂದು ಬಗೆದು ಅಲೌಕಿಕದಾಚೆಗೆ ಜಿಗಿಯುವ ಅಕ್ಕಮಹಾದೇವಿಯಂತೆಯೂ ಅಲ್ಲ. ಇಲ್ಲೊಬ್ಬ ಅಗೋಚರ ಪ್ರೇಮಿಯಿದ್ದಾನೆ. ಆದರೆ ಆತ ಶಿವನಲ್ಲ, ಬುದ್ಧನಲ್ಲ, ರಾಮನೂ ಅಲ್ಲ. ಇಲ್ಲಿನ ಕವಿತೆಗಳಲ್ಲಿ ಇವರೆಲ್ಲರೂ ಬರುತ್ತಾರೆ. ಆದರೆ ಎಲ್ಲರ ಜೊತೆಗೂ ಜಗಳ ಈ ಕವಯಿತ್ರಿಯದ್ದು. ಜಗಳದ ಮೂಲ ಪ್ರೇಮ ಮತ್ತು ಮೋಹವೇ.

'ಮೂರನೇ ಕಣ್ಣು ಮುಚ್ಚಿ/ ಸುಮ್ಮನೇ ಮಲಗೋ ಶಿವನೇ/ ನಿನಗೇನು ಗೊತ್ತು ರಾಜಾರೋಷ ಪ್ರೇಮದ ಬಗ್ಗೆ/ ನಾನಾದರೋ ಜೋಡಿ ಹೆಜ್ಜೆ ಗುರುತುಗಳ ಬೇಜಾನು/ ಬಿಟ್ಟು ಬಂದಿರುವೆ ರೇವೆಯಲ್ಲಿ...' (ರಾಜಾರೋಷ) - ಎನ್ನುತ್ತಾ ಶಿವನ ಜೊತೆಯಲ್ಲಿ ಜಗಳವಾಡುವ ನಾಯಕಿಯ ಮುಂದೆ ರಾಮನೂ ಬಂದುಹೋಗುತ್ತಾನೆ. ಆದರೆ ಕಾವ್ಯನಾಯಕಿಗೆ ರಾಮನಿಗಿಂತ ಹೆಚ್ಚಾಗಿ ಮಾರೀಚನ ಮೇಲೆ ಮೋಹ. **'ನೆಲದ ಸೀತೆಯರದ್ದು ಮುಗಿಯದ ಬಯಕೆ/ ಇಂದಾದರೂ ಬಂದೀತೆ ನನ್ನ ಅಂಗಳಕೆ/ ಮಾರೀಚನ ಜಿಂಕೆ?/ ತಡವರಿಸಿಯಾದರೂ ಓಡಬೇಕಿದೆ ಈ ಜಗದ ಆಚೆ/ ನೋಡಬಲ್ಲೆನೇ ನಾನೂ ಕನಕಪುರಿ ಲಂಕೆ?'** ಎನ್ನುತ್ತಾ ಈ ನಾಯಕಿ ಲಕ್ಷ್ಮಣ ರೇಖೆ ಇರುವುದೇ ದಾಟುವುದಕ್ಕೆ ಎನ್ನುತ್ತಾಳೆ.

ಅಧ್ಯಾತ್ಮಗುರು ಬುದ್ಧನ ಮೇಲೂ ಮೋಹದ ದಾಳಿ ಈ ನಾಯಕಿಯದ್ದು. ಬುದ್ಧನನ್ನೇ ಅಪಹರಿಸುವ ಈ ಕವಿತೆ ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗವೋ ಎಂಬ ಅನುಮಾನ ಮೂಡಿಸುತ್ತಲೇ **'ಒದ್ದಾಡೋ ಬುದ್ಧ, ಒದೆಯುವ ಬುದ್ಧ, ಮೊಲೆ ಕುಡಿವ ಬುದ್ಧ, ಅಂಬೆಗಾಲಿನ ಬುದ್ಧ.. ಎಷ್ಟೊಂದು ಬುದ್ಧರು, ಈ ಜಗದ ಉದ್ದ'** ಎನ್ನುತ್ತಾ ಹೊಸ ದಾರಿಯೊಂದಕ್ಕೆ ತೆರೆದುಕೊಳ್ಳುತ್ತದೆ.

ವಿಮರ್ಶೆ

ನಂದಿನಿಯವರ ಎಲ್ಲ ಕವಿತೆಗಳಲ್ಲೂ ಇರುವ ಚಿತ್ರಕಶಕ್ತಿ ಗಮನಾರ್ಹ. 'ಲಯ ವಿಲಯ' ಇದಕ್ಕೊಂದು ಉದಾಹರಣೆ. ಶೈಲಿಯಲ್ಲಿ ಎಚ್.ಎಸ್.ಶಿವಪ್ರಕಾಶರ ಕವಿತೆಗಳನ್ನು ನೆನಪಿಸುವ ಈ ಕವಿತೆ ಕಟ್ಟಿಕೊಡುವ ಮನೋಲೋಕ ಮಾತ್ರ ವಿಭಿನ್ನವಾದದ್ದು. 'ಕನಸಿನೊಳಗಿನ ಕಣಸು' ಬೇಂದ್ರೆ ಮತ್ತು ಜಿಎಸ್ಸೆಸ್ ಕವಿತೆಗಳನ್ನು ನೆನಪಿಸುತ್ತದೆ. ಆದರೆ, **'ಮೊಗದ ತುಂಬೆಲ್ಲ ಮೆತ್ತಿಕೊಂಡಿದೆ/ ಯಾವುದೋ ಲೋಕದ ಮಮತೆ'** ಎನ್ನುತ್ತಲೇ ತಮ್ಮದೇ ಆದ ಕವಲುದಾರಿಗೆ ಹೊರಳುತ್ತಾರೆ ಕವಯಿತ್ರಿ. ಕಿರುಬೆರಳ ತುದಿಯಲ್ಲಿ ಕರೆದರೂ ಗುಬ್ಬಚ್ಚಿಗಳ ಹಿಂಡಿನಂತೆ ಬಂದಿಳಿಯುವ ಪ್ರತಿಮೆಗಳ ರಾಶಿಯೇ ಈ ಸಂಕಲನದಲ್ಲಿದೆ. ಆ ಪ್ರತಿಮೆಗಳೂ ಹೆಣ್ಣಲೋಕದಲ್ಲಿ ಮಾತ್ರ ಸಿಗಬಹುದಾದವು ಎನ್ನುವುದು ಗಮನಾರ್ಹ. ಗಝಲ್‌ಗಳ ಭಾವತೀವ್ರತೆ, ಭಾವಗೀತೆಗಳ ಲಾಲಿತ್ಯ ಎರಡನ್ನೂ ಮಿಶ್ರಣ ಮಾಡಿದಂತೆ ಕಾಣುವ ಹಲವು ಸಾಲುಗಳು ಕವಿತೆಗಳ ಓದನ್ನು ಮುದಗೊಳಿಸುತ್ತದೆ.

ಎಲ್ಲವನ್ನೂ ಓದಿದ ಬಳಿಕ 'ನಡೆದ ಹಾದಿಯಲ್ಲೇ ನಡೆದು ಎಷ್ಟು ದೂರ ಸಾಗಬಹುದು?' ಎನ್ನುವ ಪ್ರಶ್ನೆ ಮೂಡುತ್ತದೆ. ಅದೇ ವೇಳೆ 'ಕೆಂಪು ಹಾಡೊಂದು' ಕಾಣಿಸುತ್ತದೆ. ಆದರೆ ಅದು ತನ್ನ ಹಾದಿಯಲ್ಲ ಎನ್ನುತ್ತಾರೆ ಕವಯಿತ್ರಿ. 'ಕವಿತೆ ಕಟ್ಟುವುದಲ್ಲ, ಹುಟ್ಟುವುದು' ಎನ್ನುವುದು ಅವರ ದೃಢನಂಬಿಕೆ. ಹೀಗಾದಾಗ ಆರಂಭದ ಸಾಲಿನ ಲಯಬದ್ಧ ಬಂಧ, ಬಳಿಕ ಅಡ್ಡಾದಿಡ್ಡಿ ತೆವಳಿ ರಸಭಂಗವಾಗುವ ಉದಾಹರಣೆಗಳೂ ಇಲ್ಲಿವೆ. 105 ಸಾಲುಗಳ ಸುದೀರ್ಘ ಕವಿತೆಯಲ್ಲೂ (ಅಕಾರಣ, ಅಕಾಲದಲ್ಲಿ) ಕವಿತೆಯ ಹೃದಯ ತೆರೆದುಕೊಳ್ಳುವುದು 50ನೇ ಸಾಲಿನ ಬಳಿಕ. ಕೊನೆಯ ಸಾಲಿಗೆ ಬಂದರೆ **'ಇದು ಧಗೆಯ ದೂಳು ತುಂಬಿದ ಒಂದು ಮಧ್ಯಾಹ್ನ/ ಆರಂಭವಾಗಿಲ್ಲ ನನ್ನ ಪ್ರೀತಿಯಿನ್ನೂ'** ಎಂದು ಮುಗಿಯುತ್ತದೆ. ಪ್ರೇಮ-ಮೋಹದ ಹಾದಿಯಲ್ಲಿ ತಾನು ಇನ್ನಷ್ಟು ನಡೆಯಬೇಕಿದೆ ಎನ್ನುವುದನ್ನೇ ಸೂಚಿಸುವಂತಿದೆ ಈ ಕವಿತೆ.

ಇತ್ತೀಚೆಗೆ ಬಂದಿರುವ ಕವಿತೆಗಳ ಸಾಲಿನಲ್ಲಿ ವಿಭಿನ್ನವಾಗಿ ನಿಲ್ಲುವ ಗಮನಾರ್ಹ ಸಂಕಲನವಿದು. ಆದರೆ ಸವೆದ ಹಾದಿಯಲ್ಲೇ ಮತ್ತೆ ಮತ್ತೆ ಹೆಜ್ಜೆ ಹಾಕುವಾಗ ಹೊಸ ಹುಲ್ಲು ಹುಟ್ಟುವುದಿಲ್ಲ ಎನ್ನುವುದನ್ನೂ ನೆನಪಿಸಿಕೊಳ್ಳುವುದು ಒಳ್ಳೆಯದು. ಕೊನೆಯ ಕೆಲವು ಕವಿತೆಗಳೂ ಈ ಮಾತನ್ನು ಸಮರ್ಥಿಸುವಂತಿವೆ. ಲಯಗಾರಿಕೆ, ಚಿತ್ರಕ ಶಕ್ತಿಗಳ ಮೂಲಕ ಗಮನ ಸೆಳೆಯುವ ಕವಯಿತ್ರಿ ಆರಂಭದಲ್ಲಿ ಹೇಳಿದಂತೆ, ತಾವು ಕಂಡುಂಡ ಕಾಫಿ ತೋಟ, ಹಸಿರು ವನರಾಶಿ, ಕೆರೆಕಟ್ಟೆ, ಅಮ್ಮನ ಮನೆಯೆಂಬ ಮೂರು ಬೆಟ್ಟದ ತಪ್ಪಲಿನ ಸ್ವರ್ಗ, ನಾಕು ಹೆಜ್ಜೆ ಇಟ್ಟರೆ ಸಿಗುವ ಪಾರ್ವತಮ್ಮನ ಬೆಟ್ಟದಲ್ಲಿ ಹುಟ್ಟಬಹುದಾದ ಕಾವ್ಯತೊರೆಗಳನ್ನು ಇನ್ನಷ್ಟೇ ಹುಡುಕಬೇಕಿದೆ. ಸೀಮಿತ ವಸ್ತುವಿನ ಆಯ್ಕೆ, ಮಿತಿಯೂ ಆಗದಂತೆ ನೋಡಿಕೊಳ್ಳಬೇಕಿದೆ. ವ್ಯಕ್ತಿಕೇಂದ್ರಿತ ಬಿಂದುವಿನಿಂದ ಸಮಷ್ಟಿಯ ಆಕಾಶಕ್ಕೆ ಜಿಗಿಯುವತ್ತ ಮನಸ್ಸು ಮಾಡಬೇಕಿದೆ. ❖



ರತಿಯ ಕಂಬನಿ
ಕವನ ಸಂಕಲನ
ನಂದಿನಿ ಹೆದ್ದುರ್ಗ
ಪ್ರ: ವಿಕಾಸ ಪ್ರಕಾಶನ
ಸಂ: 9900095204
ಪು: 168 ₹160

ಕಾಲವೇ ಕಥೆಯಾಗಿ, ಕನ್ನಡಿಯಾಗಿ...

ರಘುನಾಥ ಚ.ಹ.

'ಬೆತ್ತಲೆ ಸಂತ' ಇಸ್ಮಾಯಿಲ್ ತಳಕಲ್ ಅವರ ಚೊಚ್ಚಿಲ ಕಥಾಸಂಕಲನ. ಕನ್ನಡ ಕಥಾಧಾರೆಯಲ್ಲಿ ಮುಸ್ಲಿಂ ಸಮುದಾಯದ ಯುವಧ್ವನಿಗಳು ಪ್ರಮುಖವಾಗಿ ಕೇಳಿಸುತ್ತಿರುವ ಕಾಣಿಸುತ್ತಿರುವ ಸಂದರ್ಭದಲ್ಲಿ, ಆ ಯುವಧಾರೆಯ ಭಾಗವಾಗಿ ಇಸ್ಮಾಯಿಲ್‌ರ ಕಥೆಗಳನ್ನು ನೋಡಬಹುದು. ಮುಸ್ಲಿಂ ಸಮುದಾಯ ವರ್ತಮಾನದಲ್ಲಿ ಅನುಭವಿಸುತ್ತಿರುವ ಸಂಕಟಗಳನ್ನು ಚಿತ್ರಿಸುವುದರ ಜೊತೆಗೆ, ಆ ತವಕ ತಲ್ಲಣಗಳನ್ನು ಮಗ್ಗುಲು ಬದಲಿಸುತ್ತಿರುವ ಸಮಾಜಕ್ಕೆ ಹಿಡಿದ ಕನ್ನಡಿಯೂ ಆಗಿಸಿರುವುದು 'ಬೆತ್ತಲೆ ಸಂತ' ಸಂಕಲನದ ವಿಶೇಷ.

ಕೊಪ್ಪಳ ಜಿಲ್ಲೆಯ ಇಸ್ಮಾಯಿಲ್ ತಮ್ಮ ಪರಿಸರದ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಬಲ್ಲರು. ವರ್ತಮಾನದ ವಿದ್ಯಮಾನಗಳಿಗೆ ಬಿಡುಗಣ್ಣಾಗಿರುವ ಅವರು, ತಾವು ಬದುಕುತ್ತಿರುವ ಕಾಲವನ್ನೇ ಕಥೆಗಳನ್ನಾಗಿಸುವ ಉತ್ಸಾಹಿ. ಅವರ ಕಥೆಗಳಲ್ಲಿನ ಪಾತ್ರಗಳ ನೋವು ಮತ್ತು ಅಸಹಾಯಕತೆ ಸಹೃದಯರನ್ನು ಕಂಗೆಡಿಸುವಂತಹದ್ದು ಹಾಗೂ ರೋಗಗ್ರಸ್ತ ಸಮಾಜದ ಬಗ್ಗೆ ಗಮನ ಸೆಳೆಯುವಂತಹದ್ದು.

ಕಥೆಗಾರರಾಗಿ ಇಸ್ಮಾಯಿಲ್‌ರ ಶಕ್ತಿ ಹಾಗೂ ಮಿತಿ ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ 'ರೋಗಗ್ರಸ್ತ' ಹಾಗೂ 'ಗುಲಾಬಿ ಹೂವಿನ ಫ್ರಾಕು' ಕಥೆಗಳನ್ನು ಗಮನಿಸಬಹುದು.

ಕೊರೊನಾ ಸಂದರ್ಭದಲ್ಲಿ ಮುಸ್ಲಿಂ ಕುಟುಂಬವೊಂದು ತನ್ನೂರಿನಲ್ಲಿ ಇದ್ದಕ್ಕಿದ್ದಂತಲೇ ಅಪರಿಚಿತ ಭಾವನೆ ಅನುಭವಿಸುವುದರ ವಿವರಗಳು 'ರೋಗಗ್ರಸ್ತ' ಕಥೆಯಲ್ಲಿವೆ. ಲಾಕ್‌ಡೌನ್ ಸಮಯದಲ್ಲಿ ಮಸೀದಿಯ ಬಾಗಿಲು ತೆರೆದು ಆಜಾನ್ ಕೂಗಿದ ಅಲ್ಲಾಸಾಬ್‌ನನ್ನು ಹಿಂದೂ ಸಮುದಾಯದ ಕೆಲವರು ತರಾಟೆಗೆ ತೆಗೆದುಕೊಂಡಿದ್ದಾರೆ. ಹೋಟೆಲ್‌ನಲ್ಲಿ ಆತನನ್ನು ಆಗಂತುಕನಂತೆ ಕಾಣಲಾಗುತ್ತದೆ. ಅಲ್ಲಾಸಾಬ್‌ನ ಹೆಂಡತಿ ರಮ್ಜಾನ್‌ಬೀ, ಮಗ ಮಹಮ್ಮದ ಹಾಗೂ ಸೊಸೆ ಸಲ್ಮಾರನ್ನು ಕೂಡ ಊರಿನ ವಿದ್ಯಮಾನಗಳು ಕಂಗೆಡಿಸಿವೆ. ಎರಡು ಮನೆಗಳ ನಡುವಿನ ಮಲ್ಲಿಗೆ ಬಳ್ಳಿಯ ಜಾಗದಲ್ಲಿ ಗೋಡೆ ಏಳುತ್ತದೆ. ಕಥೆಯ ಕೊನೆಗೆ, ಸೋಂಕು ತಗುಲಿದೆ ಎನ್ನುವ ಕಾರಣಕ್ಕಾಗಿ ತುಂಬುಗರ್ಭಿಣಿ ಸಲ್ಮಾಳನ್ನು ಜಿಲ್ಲಾಡಳಿತ ಬಲವಂತವಾಗಿ ಆಸ್ಪತ್ರೆಗೆ ಕರೆದೊಯ್ಯುತ್ತದೆ.

ಅಲ್ಲಾಸಾಬ್ ಕುಟುಂಬದ ಈ ಕಥೆ, ನಿರ್ದಿಷ್ಟ ಸಮುದಾಯದ ಮೇಲೆ ಕೊರೊನಾ ಉಂಟುಮಾಡಿದ ಪರಿಣಾಮಗಳನ್ನಷ್ಟೇ ಹೇಳುತ್ತಿಲ್ಲ; ಇಡೀ ಸಮಾಜ ಸಂವೇದನೆಯನ್ನು ಕಳೆದುಕೊಂಡು ರೋಗಗ್ರಸ್ತವಾಗಿರುವುದನ್ನು ಸೂಚಿಸುತ್ತಿದೆ. ವ್ಯಕ್ತಿ ಹಾಗೂ ಸಮಷ್ಟಿಯ ಅಂತಃಕರಣ ಆರ್ದ್ರತೆ ಕಳೆದುಕೊಂಡಿರುವುದನ್ನು ಹೇಳುತ್ತಿದೆ. ಆದರೆ, ಕಥೆಯ ಕೊನೆಗೆ ಉಳಿಯುವ, ಸಲ್ಮಾಳ ಜಾಗದಲ್ಲಿ ಸಿದ್ಧಲಿಂಗಪ್ಪನ ಸೊಸೆ ಇದ್ದಿದ್ದರೆ ಏನಾಗುತ್ತಿತ್ತು ಎನ್ನುವ ಪ್ರಶ್ನೆ ಹಾಗೂ ಅದಕ್ಕೆ ದೊರೆಯಬಹುದಾದ ಉತ್ತರ, ಕಥೆಯಲ್ಲಿ ಕಥನವನ್ನು ಮೀರಿ ವಿಚಾರ ಕಾಣಿಸಿಕೊಂಡಿರುವುದನ್ನು ಸ್ಪಷ್ಟಪಡಿಸುತ್ತದೆ.


ವಿಮರ್ಶೆ

'ರೋಗಗ್ರಸ್ತ' ಕಥೆಗೆ ಹೋಲಿಸಿದರೆ 'ಗುಲಾಬಿ ಹೂವಿನ ಫ್ರಾಕು' ಹೆಚ್ಚು ಪ್ರಾಮಾಣಿಕವಾದುದು. ರಂಜಾನ್ ಸಂದರ್ಭದಲ್ಲಿ, ಪೇಟೆಬೀದಿಯಲ್ಲಿ ಸಾಗುವ ಅಮ್ಮ-ಮಗಳ ಹೆಜ್ಜೆಗಳ ಮೂಲಕ ಕಥೆ ಬಿಚ್ಚಿಕೊಳ್ಳುತ್ತದೆ. ಅಮ್ಮನ ಕೊನೆಮೊದಲಿಲ್ಲದ ಸಂಕಟಗಳು ಹಾಗೂ ಮಗಳ ರಮ್ಯ ಕನಸುಗಳ ಲೋಕ ಪೇಟೆ ಬೀದಿಯೊಂದಿಗೆ ಅನಾವರಣಗೊಳ್ಳುತ್ತದೆ. ಮಗಳ ರಮ್ಯ ಕನಸುಗಳಿಗಿಂತಲೂ ಅಮ್ಮನ ತಲ್ಲಣಗಳೇ ಮುಂದಾಗಿ, 'ಗುಲಾಬಿ ಹೂವಿನ ಫ್ರಾಕು' ಗಗನಕುಸುಮವಾಗಿಯೇ ಉಳಿಯುತ್ತದೆ. ಯಾವ ವಿವರವೂ ಅಸಹಜವೆನ್ನಿಸದ, ಓದುಗರ ಅಂತಃಕರಣ ತಾಕುವ ಕಥೆಯಿದು.

ತನ್ನ ಸರಳತೆಯಿಂದ ಬಾಲಕನ ಆಸೆ ಮತ್ತು ಅದರಿಂದ ಅನುಭವಿಸುವ ಅವಮಾನವನ್ನು 'ಚಾಕೊಲೇಟ್' ಕಥೆ ಸಹೃದಯರ ಅನುಭವಕ್ಕೆ ತರುತ್ತದೆ. ಆದರೆ, ಈ ಅವಮಾನದ ವೇದಿಕೆಯಾಗಿ ಖಾಸಗಿ ಶಾಲೆಯನ್ನು ಚಿತ್ರಿಸಿರುವುದು ಅಸಹಜವಾಗಿದೆ.

'ಬೆತ್ತಲೆ ಸಂತ' ಸಂಕಲನದ ಕಥೆಗಳಲ್ಲಿನ ಸ್ತ್ರೀಲೋಕ ಕುತೂಹಲಕರವಾದುದು. ಸ್ವಾಭಿಮಾನ, ಆತ್ಮಗೌರವದ ಹೆಣ್ಣುಮಕ್ಕಳ ಬದುಕನ್ನು ಕಥೆಗಾರರು ಘನತೆಯಿಂದ ನಿರೂಪಿಸಿದ್ದಾರೆ. ಮಗಳನ್ನು ಬೆನ್ನಿಗೆ ಕಟ್ಟಿಕೊಂಡು ಆತ್ಮಗೌರವದಿಂದ ಬದುಕುವ ಪರ್ವೀನಾ, ಪ್ರೀತಿಗಾಗಿ ಮನೆಯನ್ನು ಬಿಟ್ಟುಬರುವ ಹುಲಿಗೆಮ್ಮ, ದುಡಿಯುವ ಭೂಮಿಯನ್ನು ಉಳಿಸಿಕೊಳ್ಳುವ ಸಾಹಸದಲ್ಲಿ ಅಪ್ಪ-ಅಮ್ಮನೊಂದಿಗೆ ತನ್ನನ್ನೂ ಅರ್ಪಿಸಿಕೊಳ್ಳುವ ದುರುಗಿ – ಇವರೆಲ್ಲ ಸಮಾಜದ ಕಡೆಗಣನೆಗೆ ಒಳಗಾಗಿರುವ ಮಹಿಳೆಯರಾಗಿರುವಂತೆಯೇ, ಹೆಣ್ಣಿನ ಘನತೆ ಮತ್ತು ಆತ್ಮವಿಶ್ವಾಸದ ಪ್ರತೀಕಗಳೂ ಹೌದು.

ಇಸ್ಮಾಯಿಲ್ ಅವರದು ಭಾವುಕ ಕವಿಮನಸ್ಸು. ಕವಿ-ಕಥೆಗಾರನಿಗೆ ಭಾವುಕತೆ ಅಗತ್ಯ. ಆದರೆ, ಭಾವನದಿಯ ಹರಿವಿಗೊಂದು ಸೃಜನಶೀಲ ಹದ ತಂದುಕೊಡುವ ಚೌಕಟ್ಟು ಅಗತ್ಯ. ಆ ಕೌಶಲ್ಯದ ಹದವೂ ಸೇರಿಕೊಂಡರೆ ಇಸ್ಮಾಯಿಲ್‌ರ ಕಥೆಗಳ ಹೊಳಪು ಮತ್ತಷ್ಟು ಹೆಚ್ಚಲಿದೆ. ❖



ಬೆತ್ತಲೆ ಸಂತ
ಲೇ: ಇಸ್ಮಾಯಿಲ್ ತಳಕಲ್ಲು
ಪ್ರ: ಕಥನ, ಬೆಂಗಳೂರು
ಸಂ: 9902659164
ಪು: 96 ₹80

'ವಿವೇಕ'ದ ಪಂಥ

ಒಂದನೇ ಪುಟದಿಂದ...

- **ಕುಲಪತಿ ಹುದ್ದೆಯಲ್ಲಿದ್ದಾಗ ವೃತ್ತಿ ಮತ್ತು ಆಸಕ್ತಿ ನಡುವೆ ತಾಕಲಾಟಗಳು ಎದುರಾದವೇ? ನಿವೃತ್ತಿ ನಂತರವೇ ಹೆಚ್ಚು ಕೃತಿಗಳು ಪ್ರಕಟಗೊಂಡವಲ್ಲ...**

ಕುಲಪತಿ ಹುದ್ದೆ ಹೂವಿನ ಹಾಸಿಗೆಯಲ್ಲ. ಸಮಸ್ಯೆಗಳನ್ನು ಮೀರಿ, ಎಲ್ಲರನ್ನೂ ಅರ್ಥೈಸಿಕೊಳ್ಳುವ ಆಡಳಿತದ ಗುಣ, ಜಾತಿ, ಧರ್ಮ, ಪಂಥ ಎಲ್ಲದರಲ್ಲೂ 'ನಮ್ಮದು' ಎನ್ನುವ ಭಾವ ಮೀರಿ, ವಿಶ್ವಮಾನವ ತತ್ವವನ್ನು ದೈನಂದಿನ ಜೀವನದಲ್ಲಿ ಪ್ರಕಟಿಸಬೇಕು. ಸಾಹಿತ್ಯ ರಚನೆಯಷ್ಟೇ ಬದುಕಿನ ವಿನ್ಯಾಸಗಳೂ ಮುಖ್ಯ.

ಎರಡು ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆ ಕೂಡ ನನಗೆ ಆಕಸ್ಮಿಕವೇ. ಅದು ನನ್ನ ಆಯ್ಕೆ ಆಗಿರಲಿಲ್ಲ. ಈ ಹುದ್ದೆ ನಿಭಾಯಿಸಿದ ಕಾರಣಕ್ಕೆ ಬರವಣಿಗೆಗೆ ಹಿನ್ನಡೆ ಆಯಿತೆಂಬ ಭಾವ ಕಿಂಚಿತ್ತೂ ಇಲ್ಲ. 'ಕೆಲಸದಲ್ಲಿ ಶ್ರದ್ಧೆ ಇರಲಿ' ಎಂಬ ನನ್ನ ಗುರು ಪ್ರೊ. ಪರಮೇಶ್ವರ ಭಟ್ಟರ ಮಾತು ತನ್ಮಯತೆಯನ್ನು ಜಾಗೃತಗೊಳಿಸುವ ಶಕ್ತಿ ಇದ್ದಂತೆ. ನನಗೆ ಬದುಕಿನಲ್ಲಿ ಎಲ್ಲೂ ವಿಷಾದ ಇಲ್ಲ, ಅದ್ಭುತ ಮಾಡಿದ್ದೇನೆ ಎನ್ನುವ ಭ್ರಮೆಯೂ ಇಲ್ಲ. ಭ್ರಮೆ ಇಲ್ಲದಾಗ ನಿರಾಶೆಯಾಗುವುದೂ ಇಲ್ಲ. ನಿವೃತ್ತಿ ನಂತರ ಬರವಣಿಗೆ, ಅನುವಾದ ಕಾರ್ಯ ವೇಗದ ನಡಿಗೆಯಲ್ಲಿ ಸಾಗುತ್ತಿರುವುದು ನಿಜ.

- **ಜಾನಪದ ಅಧ್ಯಯನಕ್ಕೆ ವಿದೇಶಿ ವಿದ್ವಾಂಸರನ್ನು ಸೆಳೆದು, ಅದಕ್ಕೊಂದು ಜಾಗತಿಕ ಆಯಾಮ ದೊರಕಿಸಿಕೊಡಲು ಸಾಧ್ಯವಾದದ್ದು ಹೇಗೆ ?**

ಉಡುಪಿಯಲ್ಲಿ ಹರಿದಾಸ ಭಟ್ಟರು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಫಿನ್‌ಲ್ಯಾಂಡ್‌ನ ಜಾನಪದ ವಿದ್ವಾಂಸ ಡಾ.ಲೌರಿ ಹಾಂಕೊ ಭಾಗವಹಿಸಿದ್ದರು. ನಾನು ತುಳು ಪಾಡ್ದನಗಳ ಮೇಲೆ ಅಲ್ಲಿ ಇಂಗ್ಲಿಷ್ ಪ್ರಬಂಧ ಮಂಡಿಸಿದ್ದೆ. ಇಲ್ಲಿಂದ ನಮ್ಮ ಜಂಟಿ ಅಧ್ಯಯನ ಪಯಣ ಆರಂಭ. ಹಾಂಕೊ ನೇತೃತ್ವದಲ್ಲಿ ನಾನು, ಡಾ.ಚಿನ್ನಪ್ಪ ಗೌಡ ಹಾಗೂ ಗಾಯಕ ಗೋಪಾಲ ನಾಯ್ಕ ಅವರನ್ನೊಳಗೊಂಡು 'ಸಿರಿ ಮಹಾಕಾವ್ಯ' ಸಂಗ್ರಹ ಮಾಡಿ, 16 ಸಾವಿರ ಸಾಲುಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ, ಎರಡು ಸಂಪುಟಗಳಲ್ಲಿ ಪ್ರಕಟಿಸಿದೆವು. ತುಳು ಸಿರಿ ಕಾವ್ಯದಿಂದಾಗಿ ಜಾಗತಿಕ ಮಹಾಕಾವ್ಯಗಳಲ್ಲಿ ಭಾರತದ ಮಹಾಕಾವ್ಯಕ್ಕೆ ಸ್ಥಾನ ದೊರೆತಿದ್ದು ಹೆಮ್ಮೆಯ ಸಂಗತಿ. ಜನಪದ ಕಾವ್ಯ ಕಟ್ಟುವ ಕ್ರಮ ಯುರೋಪಿಗಿಂತ ಭಿನ್ನ ಎನ್ನುವ ಮನ್ನಣೆಯೂ ಪ್ರಾಪ್ತವಾಯಿತು. ಮೌಖಿಕ ಸಿದ್ಧಾಂತದ ನೋಟವನ್ನೇ ಬದಲಾಯಿಸಿದ ಜಾಗತಿಕ ವಿದ್ಯಮಾನ ಇದು. ಕಲಾವಿದ ಕೇಂದ್ರಿತ, ಗಾಯಕ ಕೇಂದ್ರಿತವಾಗಿ ಕಾವ್ಯಗಳೆಡೆಗೆ ಸಾಹಿತಿಗಳ ದೃಷ್ಟಿ ನೆಟ್ಟಿದ್ದು ಇಲ್ಲಿಂದಲೇ.

- **ಬದುಕಿನಲ್ಲಿ ಖುಷಿ ಕೊಡುವ ಸಣ್ಣ ಸಣ್ಣ ತೊರೆಗಳು...**

ನನ್ನ ಹಳ್ಳಿ ಪುಣಚ ಈಗಲೂ ಸ್ಫೂರ್ತಿಯ ಸೆಲೆ. ಮನೆಯೆದುರಿನ ತೋಡಿನಲ್ಲಿ ಮೀನಿಗೆ ಗಾಳ ಹಾಕಿದ್ದು, ಕೆರೆಯಲ್ಲಿ ಬಾಳೆದಿಂಡು ಹಾಕಿ ಈಜಿದ್ದು, ಹಳ್ಳಿಯ ಊಟ ಇವೆಲ್ಲ ಹಸಿಮಣ್ಣಿನ ವಾಸನೆಯಂತೆ, ಸದಾ ಸುಖ ಕೊಡುತ್ತವೆ. ಭತ್ತದ ಗದ್ದೆಯ ಗಂಧಶಾಲಿ ಸುಗಂಧದ ಕಂಪು, ಮಕ್ಕಳ ಸೃಜನಶೀಲತೆ, ಅಜ್ಜಿಯರ ಕತೆಗಳು ಪುಳಕ ಮೂಡಿಸುತ್ತವೆ. ಜನಪದ ಕ್ಷೇತ್ರ ಕಾರ್ಯದಲ್ಲಿ ಭೇಟಿಯಾಗಿದ್ದ ಕ್ಷೌರಿಕ ಮಹಿಳೆ ಮುಂಡ್ಯಪ್ಪು ಮತ್ತು ಬುಡಕಟ್ಟು ಮಹಿಳೆ ಕಪ್ಪೆ ಭೌತಿಕವಾಗಿ ಇಲ್ಲ, ನನ್ನೊಳಗೆ ಇವರಿಬ್ಬರೂ ಚಿರಂಜೀವಿಗಳು.

- **75ರ ನಂತರದ ನವ ಕನಸುಗಳು...**

ಪಂಪನ ಕಾವ್ಯಗಳ ಬಗ್ಗೆ ವಿಶ್ಲೇಷಣಾತ್ಮಕ ಗ್ರಂಥ ರಚನೆ, ಪ್ರಾಚೀನ ಕಾವ್ಯಗಳಲ್ಲಿ ಈವರೆಗೆ ಅನುವಾದ ಆಗದಿರುವ ಕಾವ್ಯಗಳ ಇಂಗ್ಲಿಷ್ ಅನುವಾದ ಸದ್ಯಕ್ಕೆ ನನ್ನೆದುರು ಇರುವ ಯೋಜನೆ. ಸವಾಲಿನ ಒತ್ತಡಗಳಿಲ್ಲದ ನಿವೃತ್ತಿ ಜೀವನ ಒಂಥರಾ ಡಲ್. ಕೊರೊನಾ ಲಾಕ್‌ಡೌನ್‌ನಿಂದ ಆಗುತ್ತಿರುವ ಬೌದ್ಧಿಕ ಕುಂಠಿತ ಮೀರದಿದ್ದರೆ, ಕನ್ನಡದ ಸಂದರ್ಭದಲ್ಲಿ ಮುಂದೆ ಅಪಾಯವಿದೆ. ಏಕಮುಖ ಮಾತಿನ ಆನ್‌ಲೈನ್ ವೇದಿಕೆ, ಸಮಾಲೋಚನೆ, ಸಂವಾದವನ್ನು ಕಸಿದಿದೆ. ಸಂವಾದಗಳು ಪ್ರಜಾಪ್ರಭುತ್ವದ ಲಕ್ಷಣ. ಹಿಂದೆ ಸಾಹಿತ್ಯ ಸಂವಾದಗಳಲ್ಲಿ ವೈಚಾರಿಕ ಭಿನ್ನತೆ ಇದ್ದರೂ, ಕೊಠಡಿಯಾಚೆಗಿನ ಸ್ನೇಹದ ಬಂಧ ಎಲ್ಲರನ್ನೂ ಬೆಸೆಯುತ್ತಿತ್ತು. ಕರ್ನಾಟಕದಲ್ಲಿ ಇಂದು ಈ ವಾತಾವರಣ ಹೊರಟುಹೋಗಿದೆ. ಇದರಿಂದ ಕನ್ನಡಕ್ಕೆ ದೊಡ್ಡ ಊನ ಬಂದಿದೆ. ಈ ಬಗೆಯ ಕೊರತೆ – ಗುಲಾಮಿತನದಿಂದ ಹೊರ ಬರಬೇಕಾಗಿದೆ. ❖

ಬಹುಶ್ರುತ ವಿದ್ವತ್ತಿನ ಒಂದು ಮುಖ

ಪಿನಾಕ

ಅಪಾರ ವಿದ್ವತ್ತಿನ ವಿವೇಕ ರೈ ಅವರ ಹೆಸರು ಪ್ರಸ್ತಾಪವಾದಾಗಲೆಲ್ಲ ತಟ್ಟನೆ ನೆನಪಿಗೆ ಬರುವುದು ಅವರ ಸರಳ ಹಾಗೂ ಸೌಜನ್ಯದ ವ್ಯಕ್ತಿತ್ವ. ಎರಡೆರಡು ವಿಶ್ವವಿದ್ಯಾಲಯಗಳ ಕುಲಪತಿಯಾಗಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳ ಸದಸ್ಯರಾಗಿ ಅನವರತ ಕನ್ನಡ ಕಟ್ಟುವ ಕೆಲಸವನ್ನು ಮಾಡಿದ ಅವರು, ತುಳು ಭಾಷೆಯ ಬೆಳವಣಿಗೆಗೂ ನೀರು ಎರೆದವರು. ನಾಡಿನ ವಿದ್ವತ್ ಪರಂಪರೆಯ ಅನನ್ಯ ಪ್ರತಿನಿಧಿಯಂತಿರುವ ಅವರು, ಬಾಳ ಪಯಣದಲ್ಲಿ 60, 70 ವಸಂತಗಳ ಮೈಲುಗಲ್ಲು ತಲುಪಿದಾಗ ಅಭಿನಂದನಾ ಗ್ರಂಥ ಬೇಡವೇ ಬೇಡವೆಂದು ಹಟ ಹಿಡಿದವರು. ಇದೀಗ ಈ ಸಾಧಕ, ಬದುಕಿನ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದಾರೆ. ರೈಗಳೊಂದಿಗಿನ 'ಒಡನಾಟದ ನೆನಪು'ಗಳನ್ನು ಅವರ ಐವರು ಗೆಳೆಯರು ಈ ಹೊತ್ತಿನಲ್ಲಿ ದಾಖಲಿಸುವ ಮೂಲಕ ಇದುವರೆಗೆ ಅಭಿನಂದನಾ ಗ್ರಂಥ ಬರದಂತೆ ನೋಡಿಕೊಂಡಿದ್ದ ಅವರ ವಿರುದ್ಧ ಸಣ್ಣದಾಗಿ 'ಸೇಡ'ನ್ನೂ ತೀರಿಸಿಕೊಂಡಿದ್ದಾರೆ!

ರೈಗಳ ಜತೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಅವರ ಬಹುಕಾಲದ ಒಡನಾಡಿ ಸಿ.ಎನ್. ರಾಮಚಂದ್ರನ್ ಅವರು ಈ ವಿಶಿಷ್ಟ ಸಂಕಲನವನ್ನು ಸಂಪಾದಿಸಿದ್ದಾರೆ. ಸಿಎನ್ಆರ್ ಅವರಲ್ಲದೆ ಚಿನ್ನಪ್ಪಗೌಡ, ಪುರುಷೋತ್ತಮ ಬಿಳಿಮಲೆ, ಹಿ.ಚಿ.ಬೋರಲಿಂಗಯ್ಯ ಹಾಗೂ ಹೈಡ್ರುನ್ ಬ್ರೂಖ್‌ನರ್ ಅವರು ಬರೆದ ಸುದೀರ್ಘ ಲೇಖನಗಳು ಇಲ್ಲಿವೆ.

ಈ ಸಂಕಲನವನ್ನು ಸಿಎನ್‌ಆರ್ 'ಶೈಕ್ಷಣಿಕ ಕಾರ್ಯ' ಎಂದು ಕರೆದಿದ್ದಾರೆ. ಅದಕ್ಕೆ ಕಾರಣವೂ ಇದೆ. ಸಂಕಲನದ ಐವರೂ ಲೇಖಕರು ರೈಗಳ ಜತೆ ಶೈಕ್ಷಣಿಕವಾಗಿ ತೊಡಗಿಸಿಕೊಂಡಿದ್ದನ್ನಷ್ಟೆ ಇಲ್ಲಿ ದಾಖಲಿಸಿದ್ದಾರೆ. ಪ್ರಾಧ್ಯಾಪಕರಾಗಿ, ಸಂಶೋಧನಾ ಮಾರ್ಗದರ್ಶಕರಾಗಿ, ವಿಚಾರ ಸಂಕಿರಣಗಳ ಆಯೋಜಕರಾಗಿ, ಶೈಕ್ಷಣಿಕ ಆಡಳಿತಗಾರರಾಗಿ ರೈಗಳು ಮಾಡಿದ ಸಾಧನೆಯನ್ನು ಇಲ್ಲಿನ ಲೇಖನಗಳು ಕಟ್ಟಿಕೊಡುತ್ತವೆ. ಆದರೆ, ವಿಶ್ವವಿದ್ಯಾಲಯದ ಅಂಗಳದಿಂದ ಆಚೆಗೆ ಅವರ ಸಾಹಿತ್ಯ ಕೃಷಿ, ಕನ್ನಡದ ಪರಿಚಾರಿಕೆ ಹಾಗೂ ಕಟ್ಟಿಕೊಂಡ ವಿದ್ವತ್‌ಪೂರ್ಣ ವ್ಯಕ್ತಿತ್ವದ ಕುರಿತು ಹೆಚ್ಚು ಮಾತನಾಡುವುದಿಲ್ಲ (ಅದು ಈ ಸಂಕಲನದ ವ್ಯಾಪ್ತಿಯೂ ಅಲ್ಲ). ಆ ಮಟ್ಟಿಗೆ ಈ ಹೊತ್ತಿಗೆಯದು ಸೀಮಿತ ಚೌಕಟ್ಟು. ಆ ಮಿತಿಯನ್ನು ಸಂಪಾದಕರು ಆರಂಭದಲ್ಲೇ ಒಪ್ಪಿಕೊಂಡಿದ್ದಾರೆ.


ರೈಗಳು 1984ರಲ್ಲಿ ಮಂಗಳೂರು ವಿ.ವಿ.ಯ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ ಅಲ್ಲಿಯ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದವರು ಸಿಎನ್‌ಆರ್. ಪರಸ್ಪರ ಪೂರಕವಾದ ಭಾಷಾ ವಿಭಾಗಗಳ ಮುಖ್ಯಸ್ಥರಾಗಿ, ಜೊತೆಯಾಗಿ ಯೋಜಿಸಿದ ವಿಚಾರ ಸಂಕಿರಣಗಳ ಕುರಿತು ಮೊದಲ ಲೇಖನದಲ್ಲಿ ಅವರು ಸುದೀರ್ಘ ಮಾಹಿತಿಯನ್ನು ಕೊಟ್ಟಿದ್ದಾರೆ. ರೈಗಳ ಶೈಕ್ಷಣಿಕ ಬದುಕಿನ ಒಂದು ಮೇಲ್ನೋಟವನ್ನು ಕಟ್ಟಿಕೊಡುವಲ್ಲಿಯೂ ಈ ಲೇಖನ ಯಶಸ್ವಿಯಾಗಿದೆ.

ಬಿಳಿಮಲೆ ಅವರು ರೈಗಳ ಮೊದಲ ಸಂಶೋಧನಾ ವಿದ್ಯಾರ್ಥಿ ಆಗಿದ್ದವರು. ಸಂಶೋಧನಾ ಪ್ರಕ್ರಿಯೆಯಲ್ಲಿ ಬಿಳಿಮಲೆ ಅವರಿಗೆ ದೊರೆತ ಮಾರ್ಗದರ್ಶನದ ಸ್ವರೂಪ ನೋಡಿದರೆ ಅದು ಇಂದಿನ ಮಾರ್ಗದರ್ಶಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಪಾಲಿಗೆ ದಾರಿದೀಪವಾಗಿ ಒದಗಿ ಬರುತ್ತದೆ. ನಾಲ್ಕು ದಶಕಗಳಿಗೂ ಹೆಚ್ಚು ಸಮಯದಿಂದ ರೈಗಳ ಒಡನಾಟದಲ್ಲಿರುವ ಚಿನ್ನಪ್ಪ ಗೌಡರು ಪ್ರೀತಿ-ಗೌರವಗಳಿಂದ ಅವರ ವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ. ಕಿರಿಯ ಸಹೋದ್ಯೋಗಿಗಳು ಹಾಗೂ ವಿದ್ಯಾರ್ಥಿಗಳಿಗೆ ರೈಗಳು ಕೊಡುತ್ತಿದ್ದ ವೈಚಾರಿಕ ಸ್ವಾತಂತ್ರ್ಯದ ಕುರಿತು ಅವರು ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ.

ಒಳನೋಟ

ರೈಗಳು ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದಾಗ ಅಲ್ಲಿಯೇ ವಿಭಾಗದ ಮುಖ್ಯಸ್ಥರಾಗಿದ್ದ ಹಿ.ಚಿ. ಬೋರಲಿಂಗಯ್ಯನವರು (ಮುಂದೆ ಕುಲಪತಿಯೂ ಆದರು) ವಿ.ವಿ.ಯ ಪ್ರಗತಿಗೆ ರೈಗಳು ಕೊಟ್ಟ ಕೊಡುಗೆಯನ್ನು ಸ್ಮರಿಸಿದ್ದಾರೆ. ವಿ.ವಿ.ಯು ಹೆಮ್ಮರವಾಗಿ ಬೆಳೆಯಲು ಅವರು ಹಾಕಿಕೊಟ್ಟ ಬುನಾದಿ ಹೇಗೆ ನೆರವಿಗೆ ಬಂತು ಎಂಬುದನ್ನೂ ವಿವರಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಈಗಿನ ಬೆಳವಣಿಗೆ ನೆನೆದರೆ ರೈಗಳು ಬೆಳೆಸಿದ ವಿ.ವಿ ಇದೆಯೇ ಎಂದು ನಿಟ್ಟುಸಿರು ಬಿಡುವಂತಾಗುತ್ತದೆ.

ಜರ್ಮನಿಯ ವ್ಯೂರ್ತ್ಸ್‌ಬರ್ಗ್ ವಿ.ವಿ.ಯ ಇಂಡಾಲಜಿ ವಿಭಾಗದ ಮುಖ್ಯಸ್ಥರಾಗಿದ್ದ ಹೈಡ್ರುನ್ ಬ್ರೂಖ್‌ನರ್ ಅವರೂ ಒಡನಾಟದ ದಿನಗಳನ್ನು ಆಪ್ತವಾಗಿ ಮೆಲುಕು ಹಾಕಿದ್ದಾರೆ. ರೈಗಳು ತಮ್ಮ ವಿದ್ವತ್ತು-ಕರ್ತೃತ್ವ ಶಕ್ತಿಗಳ ಮೂಲಕ ಮಾಡಿದ ಶೈಕ್ಷಣಿಕ ಸಾಧನೆಗಳನ್ನು ಈ ಲೇಖನಗಳು ದಾಖಲಿಸುತ್ತವೆ. ❖



ಬಿ.ಎ. ವಿವೇಕ ರೈ
ಒಡನಾಟದ ನೆನಪುಗಳು
ಸಂ: ಸಿ.ಎನ್. ರಾಮಚಂದ್ರನ್
ಪ್ರ: ಅಂಕಿತ
ಸಂಪರ್ಕ: 080 26617100
ಪು: 144 ₹150

ಮೊದಲ ಓದು


ಮಹಾನ್ ನಾಗರಿಕತೆಗಳ ಕಥನ

ಜಗತ್ತಿನಲ್ಲಿ ನದಿ ಮೂಲಗಳು ಅಥವಾ ನದಿ ಹರಿಯುವ ಪ್ರದೇಶ ಹಲವಾರು ನಾಗರಿಕತೆಗಳ ಉದಯಕ್ಕೆ ಕಾರಣವಾಗಿದೆ. ಇವುಗಳಲ್ಲಿ ಕೆಲ ನಾಗರಿಕತೆಗಳು ಸಮುದಾಯವಾಗಿ ರೂಪುಗೊಂಡವು. ಅತ್ಯಂತ ರೋಚಕ ಮಾಹಿತಿ, ಕಥೆಗಳನ್ನು ಇವುಗಳು ಹೊಂದಿವೆ. ಇಂಥ ಮಹಾನ್ ನಾಗರಿಕತೆಗಳ ಬಗ್ಗೆ ವಿಶಿಷ್ಟ ನೋಟವನ್ನು ಬೀರುವ ಕಥನ 'ಜಗತ್ತಿನ ಮಹಾನ್ ನಾಗರಿಕತೆಗಳು'.

ವಲಸೆ ಮಾನವನ ಮೂಲ ಗುಣ. ಇದೇ ನಾಗರಿಕತೆಯ ಹುಟ್ಟಿಗೂ ಕಾರಣ. ಆರಂಭದಲ್ಲಿ 'ಹೊಸ ದಿಗಂತಗಳ ಹುಡುಕಾಟದಲ್ಲಿ ಆದಿಮಾನವನ ವಲಸೆ' ಎಂಬ ಶೀರ್ಷಿಕೆಯಡಿ ಮಾನವನ ಮೂಲ, ನಕ್ಷೆ ಸಹಿತ ಮಹಾವಲಸೆಯ ಹಾದಿ, ಭಾರತಕ್ಕೆ ಆದ ಮಹಾವಲಸೆಯ ಬಗ್ಗೆ ಚಿತ್ರ ಸಹಿತ ಮಾಹಿತಿಯ ಮೂಲಕ ಡಿ.ಎಸ್. ಲಿಂಗರಾಜು ಅವರು ಕಥನ ಆರಂಭಿಸಿದ್ದಾರೆ.

ಹಲವು ಶತಮಾನಗಳಿಂದ ಇತಿಹಾಸಕಾರರಿಗೆ ಫ್ಯಾಂಟಸಿಯಾಗಿ ಕಾಡಿದ 'ಅಟ್ಲಾಂಟಿಸ್ ಕಥಾನಕ'ದಿಂದ ಈ ನಾಗರಿಕತೆಗಳ ಕಥನ ಆರಂಭವಾಗುತ್ತದೆ. ನಾಗರಿಕತೆಗಳ ತೊಟ್ಟಿಲು, ಜಗತ್ತಿನ ಅತಿ ಪುರಾತನ ನಾಗರಿಕತೆಯಾದ 'ಮೆಸಪೊಟೇಮಿಯ'ದ ಹಿನ್ನೆಲೆ, ಆ ನಾಗರಿಕತೆಯ ಗಣಿತ ಜ್ಞಾನ, ಅವರ ವೈದ್ಯಕೀಯ ಹಾಗೂ ತಾಂತ್ರಿಕ ಜ್ಞಾನದ ವಿವರಣೆ ಇಲ್ಲಿದೆ.

'ಈಜಿಪ್ಟ್ ಎಂಬ ಮಾಯಾಲೋಕ' ಕಥೆಯಂತೆ ಆರಂಭವಾಗುತ್ತದೆ. ಇಂಥ ಮಾಯಾಲೋಕವನ್ನು ಏಲಿಯನ್ಸ್‌ಗಳೇ ನಿರ್ಮಾಣ ಮಾಡಿದಂತೆ ಲೇಖಕರಿಗೆ ಭಾಸವಾಗುತ್ತದೆ. ಇಲ್ಲಿನ ಬೃಹತ್ ಶಿಲ್ಪಗಳು, ಶವಗಳ ಮಮ್ಮೀಕರಣದ ಕ್ರಿಯೆಯ ಜೊತೆ ನೈಲ್ ನದಿ ಹಾಗೂ ಅಲ್ಲಿನ ಪಿರಮಿಡ್‌ಗಳ ವೈಶಿಷ್ಟ್ಯ ಹಾಗೂ ರಹಸ್ಯವನ್ನೂ ಇಲ್ಲಿ ಬಿಚ್ಚಿಡಲಾಗಿದೆ. ಇವುಗಳ ಜೊತೆಗೆ ನೋಕ್ ನಾಗರಿಕತೆ, ಆಸ್ಟ್ರೇಲಿಯನ್ ಬುಶ್‌ಮ್ಯಾನ್ ಕಥನವೂ ಇಲ್ಲಿದೆ. ❖




ಜಗತ್ತಿನ ಮಹಾನ್ ನಾಗರಿಕತೆಗಳು
ಲೇ: ಡಿ.ಎಸ್.ಲಿಂಗರಾಜು
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900
ಪು: 192 ₹ 190

ನೀತಿಗಳನ್ನು ಹೇಳುವ ಷಟ್ಪದಿಗಳು

ಹೊತ್ತುಬಸಿರೊಳು ಮಾಸಗಳೆದೊಡೆ/ ಹೆತ್ತುಧರಣಿಗೆ ಸಿರಿಯನೀಡುವ/ ಮತ್ತೆಲೋಕದಿ ಮಾನ್ಯಳವಳೋ ಜೀವಸಂಕುಲದಿ/ ಅತ್ತೆನಾದಿನಿ ಸೊಸೆಯು ವರಸತಿ/ ಬಿತ್ತರಿಪುದಾ ಮಾತೆಮೌಲ್ಯವ/ ಸತ್ತಿಗೆಯದೊರೆ ನೃಪರುಸಂತರು ಪಾದಕೆರಗುವರೋ

ಹೆಣ್ಣಿನ ಮಹತ್ವವನ್ನು ಅತ್ಯಂತ ಸೊಗಸಾಗಿ, ಸುಲಲಿತವಾಗಿ ಹಿಡಿದಿಟ್ಟ ಷಟ್ಪದಿ ಇದು. ಇಂತಹ ನೂರೆಂಟುಷಟ್ಪದಿಗಳ ಸಂಗ್ರಹವೇ ರಾಮ ಸುಬ್ರಾಯ ಶೇಟ್ ಅವರ ಈ ಕೃತಿ. ಹರಿಪಂಥ, ಹರಪಂಥಗಳ ನಡುವೆ ಅಭಿಪ್ರಾಯ ಬೇಧಗಳು ತಾರಕಕ್ಕೇರುತ್ತಿರುವ ಕಾಲಘಟ್ಟದಲ್ಲಿ ಸಕಾಲಿಕ ಷಟ್ಪದಿಯೊಂದು ಹೊತ್ತಗೆಯೊಳಗೆ ಕೂತುಬಿಟ್ಟಿದೆ. ಪರರ ಹಿತವನ್ನು ಬಯಸುವಂತೆ ತಿಳಿಹೇಳುವ, ಬಾಯಿಚಪಲಕ್ಕೆ ಬಲಿಯಾಗದಂತೆ ಎಚ್ಚರಿಸುವ ನೀತಿಗಳು ಇಲ್ಲಿನ ಪ್ರತೀ ಷಟ್ಪದಿಯ ವಿಶೇಷ. ಪ್ರತಿಯೊಂದಕ್ಕೂ ಗಾಢ ಅರ್ಥಗಳಿವೆ. ಅದಕ್ಕೆ ಎರಡು ಪುಟಗಳ ವಿವರಣೆ ಕೊಡುವ ಮೂಲಕ ಸಾಮಾನ್ಯ ಓದುಗನೂ ಷಟ್ಪದಿಯನ್ನು ಅರ್ಥ, ವ್ಯಾಖ್ಯಾನ ಸಹಿತ ತಿಳಿದುಕೊಳ್ಳುವಂತೆ ಮಾಡಿದ್ದಾರೆ.

ಇಲ್ಲಿ ಪುರಾಣದ ಅದರಲ್ಲೂ ರಾಮಾಯಣದ ಪಾತ್ರಗಳೇ ಪ್ರತಿಮೆ. ಅಧ್ಯಾತ್ಮ, ಭಕ್ತಿಯ ಆಯಾಮವೇ ಪ್ರಧಾನ. ಅಭಿಪ್ರಾಯಬೇಧದ ಹೆಸರಿನಲ್ಲಿ ಸಂಘರ್ಷಕ್ಕೆ ಎಡೆಮಾಡಿಕೊಡದೇ ಸಾಗಬಹುದಾದ ಸಾತ್ವಿಕ ಜೀವನದರ್ಶನದ ಸಾರವನ್ನು ಲೇಖಕರು ವಿವರಿಸಿದ್ದಾರೆ. ❖



ನೀತಿ ಷಟ್ಪದಿ ನೂರೆಂಟು
ಲೇ: ರಾಮ ಸುಬ್ರಾಯ ಶೇಟ್
ಪ್ರ: ಶ್ರೀ ರಾಮತತ್ವ ಪ್ರಕಾಶನ ಸಮಿತಿ ಚಿಕ್ಕಮಗಳೂರು
ಸಂ: 94483 12851
ಪು: 263 ₹200

ವಿಭಿನ್ನ ನಿರೂಪಣೆಯ ಕಥೆಗಳು

ಪತ್ರಕರ್ತ ಕುಮಾರ ಬೇಂದ್ರೆ ಅವರು ಇದುವರೆಗೆ ತಾವು ಬರೆದ ನಲ್ವತ್ತು ಕಥೆಗಳಲ್ಲಿ ಆಯ್ದ 12 ಕಥೆಗಳ ಗುಚ್ಛವನ್ನು 'ಕೆಂಪು ದೀಪದ ಮನೆಯಲ್ಲಿ' ಕೃತಿಯ ಮೂಲಕ ಓದುಗರ ಎದುರು ಇರಿಸಿದ್ದಾರೆ. ವೈಶಿಷ್ಟ್ಯಪೂರ್ಣ ಕಥಾಹಂದರ ಹಾಗೂ ಅನನ್ಯ ಪಾತ್ರಗಳ ಮೂಲಕ ಇಲ್ಲಿನ ಕಥೆಗಳು ಗಮನಸೆಳೆಯುತ್ತವೆ.

'ಕೆಂಪು ದೀಪದ ಮನೆಯಲ್ಲಿ' ದೇಸಾಯಿ ಮಾಸ್ತರು ವಿಸ್ಕಿ ಗಂಟಲಲ್ಲಿ ಇಳಿಸಿಕೊಳ್ಳುತ್ತಾ ತೆರೆದಿಟ್ಟ 'ಆ ಲೋಕ'ದ ಕಥನ ಭಿನ್ನ ದೃಷ್ಟಿಯನ್ನು ಹೊಂದಿದೆ. ಚಿನ್ನಾಭರಣಗಳ ವ್ಯಾಪಾರಿಯಾಗಿದ್ದ ಮಾದಪ್ಪ ತನ್ನದೇ ನಡತೆಯಿಂದ ಅನಾಥ ಶವವಾಗಿ ಸ್ಮಶಾನ ಸೇರುವ 'ಮಾದಪ್ಪನ ಸಾವು' ಈ ಸಂಕಲನದ ಮತ್ತೊಂದು ಯಶಸ್ವಿ ಕಥೆ. ನಿರುದ್ಯೋಗ, ಪ್ರೀತಿ ಪ್ರೇಮದ ಸಮಸ್ಯೆಯೊಂದಿಗೆ ಕೆಟ್ಟ ಒಡನಾಟಗಳಿಂದ ಆಗುವ ದುಷ್ಪರಿಣಾಮಗಳನ್ನು ಅದು ಸಾರುತ್ತದೆ. ಅಸ್ಥಿ ವಿಸರ್ಜನೆಗಾಗಿ ಸಂಗಮಕ್ಕೆ ಬರುವ ಕುಟುಂಬದ ಸುತ್ತ ಬೆಳೆಯುವ 'ಅದೃಶ್ಯ ಲೋಕದ ಮಾಯೆ' ಕಥೆಯಲ್ಲಿ ಬಳಕೆಯಾದ ನಿರೂಪಣಾ ತಂತ್ರ ವಿಶಿಷ್ಟವಾಗಿದೆ. 'ರೊಟ್ಟಿ ಮತ್ತು ಕಲೆ' ಕಥೆಯೂ ಕುತೂಹಲಕಾರಿಯಾಗಿದೆ. 'ಚಹರೆ', 'ದೇವರ ನೆಲೆ' ಸಂಕಲನದಲ್ಲಿರುವ ಓದಿಸಿಕೊಂಡು ಹೋಗುವ ಇತರ ಕಥೆಗಳು. ❖




ಕೆಂಪು ದೀಪದ ಮನೆಯಲ್ಲಿ
ಲೇ: ಕುಮಾರ ಬೇಂದ್ರೆ
ಪ್ರ: ಶ್ರೀ ಚೂಡಾ ಪ್ರಕಾಶನ, ಮೈಸೂರು
ಸಂ: 9945664214
ಪು: 120 ₹110

ಕಾಡುವ ಪಾತ್ರಗಳ 'ಪ್ರೇಮಪತ್ರ'

ವೈಕಂ ಮುಹಮ್ಮದ್ ಬಷೀರ್ ಅವರ ಇಪ್ಪತ್ತಮೂರು ಮಲಯಾಳಂ ಕಥೆಗಳ ಅನುವಾದ ಕೃತಿ 'ಪ್ರೇಮಪತ್ರ'. ಈ ಮೂಲಕ ಮೋಹನ ಕುಂಟಾರ್ ಎರಡನೇ ಬಾರಿಗೆ ಬಷೀರ್ ಅವರ ಕಥೆಗಳ ಅನುವಾದ ಸಂಕಲನವನ್ನು ಕನ್ನಡಕ್ಕೆ ತಂದಿದ್ದಾರೆ. ಕರ್ನಾಟಕ–ಕೇರಳ ಗಡಿಯಾದ ಕಾಸರಗೋಡಿನ ಮೋಹನ ಅವರು, ಕನ್ನಡಿಗರಿಗೆ ಮಲಯಾಳಂ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಪರಿಚಯಿಸುತ್ತಾ ಬಂದಿದ್ದಾರೆ. ಈ ಹಿಂದೆ 1999ರಲ್ಲಿ 'ಬಶೀರ್ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಮೋಹನ ಅವರು ಬಷೀರ್ ಅವರ ಹತ್ತು ಕಥೆಗಳನ್ನು ಅನುವಾದ ಮಾಡಿದ್ದರು. ಇದೀಗ ಈ ಅನುವಾದಗಳನ್ನು ಪರಿಷ್ಕರಿಸಿ, ಹೊಸದಾಗಿ 13 ಕಥೆಗಳನ್ನು ಅನುವಾದಿಸಿ 'ಪ್ರೇಮಪತ್ರ' ಎಂಬ ಹೊಸ ಸಂಕಲನಕ್ಕೆ ಸೇರಿಸಿದ್ದಾರೆ.

ಇಲ್ಲಿ ಬದುಕಿನ ಹೋರಾಟ ಕಟ್ಟಿಕೊಡುವ ಕಥೆಗಳಿವೆ, ಹೀಗೆನ್ನುವುದಕ್ಕಿಂತ ಕಥೆ ಇರುವುದೇ ಜನ ಸಾಮಾನ್ಯರದ್ದು ಎನ್ನಬಹುದು. ಪ್ರೀತಿ, ಪ್ರೇಮಕ್ಕೆ ಹಲವು ಆಯಾಮಗಳು ಹಲವು ಕಥೆಗಳಲ್ಲಿ ಕಾಣಸಿಗುತ್ತವೆ. ಕೆಲವೆಡೆ ಮೊನಚಾದ ವಿನೋದದ ಧಾಟಿಯೂ ಇದೆ. ತಮ್ಮದೇ ನೋವು ನಲಿವುಗಳಿಗೂ ಅಕ್ಷರರೂಪ ನೀಡಿ ತಮ್ಮ ಬದುಕನ್ನೂ ಬಷೀರ್ ಇಲ್ಲಿ ದಾಖಲಿಸಿದ್ದಾರೆ. ಮೂಲಲೇಖಕರ ಭಾಷೆ, ಶೈಲಿಯನ್ನು ಉಳಿಸಿಕೊಳ್ಳುವ ಮೂಲಕ ಆ ಕಥೆಗಳಲ್ಲಿ ಹೆಚ್ಚಾಗಿರುವ ಸಂಸ್ಕೃತ, ಆಂಗ್ಲಮಿಶ್ರಿತ ಮಲಯಾಳಂ ಹಾಗೂ ವಿಶಿಷ್ಟ ಅರ್ಥ ಹೊಂದಿರುವ ಪದಗಳ ಸೊಗಡನ್ನು ಮೋಹನ್ ಅವರು ಉಳಿಸಿಕೊಂಡಿದ್ದಾರೆ. ❖



ಪ್ರೇಮಪತ್ರ
ವೈಕಂ ಮುಹಮ್ಮದ್ ಬಷೀರ್ ಕತೆಗಳು
ಅನುವಾದ: ಮೋಹನ ಕುಂಟಾರ್
ಪ್ರ: ಯಾಜಿ ಪ್ರಕಾಶನ
ಸಂ: 9448722800
ಪು: 302 ₹350

ಸಪ್ತ ಸಹೋದರಿಯರು!

ಶ್ರೀಧರ್ ಎಸ್. ಸಿದ್ದಾಪುರ

ಪ್ರವಾಸ

ನಮ್ಮ ಕಾರನ್ನು ರಸ್ತೆಗೆ ಇಳಿಸಿ ಕಾರೊಳಗೆ ತೂರಿಕೊಂಡಾಗ ಕಣ್ಣೊಳಗೆ ಸಿಕ್ಕಿಂನ ಕಾಮನಬಿಲ್ಲು. ಅಂಕುಡೊಂಕಿನ ರಸ್ತೆಯಲಿ ಕಾರು ಚಲಿಸಲು ಹೆಣಗುತ್ತಿತ್ತು.

ಗ್ಯಾಂಗ್‌ಟಾಕ್ ದಾಟುತ್ತಲೇ ದರುಶನಕೊಟ್ಟ 'ಸಪ್ತ ಸಹೋದರಿಯರು'. ಏಳು ಜಲಪಾತಗಳ ಸರಣಿ ರಸ್ತೆಗುಂಟ ಮೈ ಚೆಲ್ಲಿತ್ತು. ಸುತ್ತಲಿನ ವನರಾಶಿಯನ್ನು ಅಪ್ಪುತ್ತಾ ಬಂಡೆಗಳನು ತಡವುತ್ತಾ ಬಳುಕಿತ್ತು ಜಲರೇಖೆ. ಒಂದಕ್ಕಿಂತ ಒಂದು ಚಂದ. ಗಂಟೆಗಳ ಪ್ರಯಾಣಕ್ಕೆ ಸೋನೆ ಮಳೆಯ ಕೊನೆ. ಮಳೆ ಮುಗಿಯುತ್ತಲೇ ಹೆಜ್ಜೆ ಹೊರಗಿಟ್ಟು ಕ್ಲಿಕ್ ಕ್ಲಿಕ್ ಕೋಲ್ಗೇಟ್ ಜಾಹೀರಾತಿನಂತೆ ಫೋಟೊ ಶೂಟ್ ಪ್ರಾರಂಭ. ಎಷ್ಟು ಫೋಟೊ ತೆಗೆದಿದ್ದವೋ ಲೆಕ್ಕವಿಟ್ಟಿಲ್ಲ!


ಬೆಳಕಿನ ಜೊತೆಗೆ ಕಾಡುವ ವಿಷಾದ

ಕೆಳಗಿನ ತಿರುವಿನಲ್ಲೆಲ್ಲೋ ಮೋಟಾರ್ ಸದ್ದು. ಬಳುಕಿನ ಸುಂದರಿಯ ಬಗ್ಗಿಸಿ ಬೆಳಕ ತಯಾರಿಯಲಿ ತೊಡಗಿಸಿದ್ದರು. ಅಚ್ಚರಿಯ ಜೊತೆಗೊಂದಿಷ್ಟು ವಿಷಾದ ತೇಲಿತು. ಉತ್ತರಾಖಂಡದ ಉದ್ದಗಲಕ್ಕೂ ಇಂತಹ ನೂರಾರು ವಿದ್ಯುತ್ ಗಿರಣಿಗಳ ಬಿಡಾರವೇ ಬೀಡುಬಿಟ್ಟಿದ್ದರಿಂದ 2014ರ ಜಲಪ್ರಳಯಕ್ಕೆ ಕಾರಣ ಎನ್ನಲಾಗುತ್ತಿದೆ.

'ಸಪ್ತ ಸಹೋದರಿ'ಯರನ್ನು ಸುಮೋಹಿಸಿ ಗ್ಯಾಂಗ್‌ಟಾಕ್‌ನ ಉತ್ತರಕ್ಕೆ ಪ್ರಯಾಣಿಸಿದೆವು. ಗಿಲೀಟಿನ ರಸ್ತೆ. ಗಾಳಿಗೆ ತೊನೆಯುವ ವಿಚಿತ್ರ ಬಾವುಟಗಳು. ಚದುರಿದ ಹನಿಗಳನು ಚದುರಿಸುತ್ತಾ ಚಲಿಸುವ ಜೀಪ್ ಚಕ್ರಗಳ ಹಿಮ್ಮೇಳದ ದನಿ. ಹಸಿರು ಮುಕ್ಕಳಿಸುವ ಬೆಟ್ಟಗಳ ಭುಜಕ್ಕಂಟಿದ ಪ್ರಯಾಣ. ಎದುರಿಗೆಲ್ಲಾ ಒಬ್ಬರ ಮೇಲೊಬ್ಬರು ಆತು ನಿಂತಂತಿರುವ ಬೆಟ್ಟ ಸಾಲುಗಳು. ಬೆಟ್ಟವನ್ನು ಅಮರಿಕೊಂಡ ಮೋಡ. ಅಲ್ಲಲ್ಲಿ ಗುಡ್ಡ ಕುಸಿತ. ಕಾಡ ತೊಟ್ಟಿಲಿನಲಿ ಜೀಕುವ ನೀರ ಜೋಕಾಲಿಗಳು. ಸಾಸಿವೆ ಚದುರಿದಂತೆ ಮನೆಗಳು. ಅಲ್ಲಿಂದ ನಿರುಕುವ ಮುದುಕರ ನಿರುಪದ್ರವಿ ನೋಟ. ಚಲಿಸುವ ಗಾಲಿಗಡ್ಡ ಬರುವ ಅವರ ಕೋಳಿ ಹಿಂಡುಗಳು. ಶತಮಾನಗಳಿಂದ ಹರಿವ ನೀರ ಹಾಡು. ಇಲ್ಲಿನ ಕಾಡುಗಳಿಗೆ, ಸ್ನೇಹಮಯಿ ಜನಕ್ಕೆ, ಅವರ ಪ್ರೀತಿಗೆ ಸಾಟಿ ಎಲ್ಲಿ? ಹೊಟ್ಟೆ ಚುಂಯಿಗುಡುವುದಕ್ಕೂ ಕ್ಯಾವೆಂಡಿಶ್, ಲಿಚಿಯ ದರುಶನಕ್ಕೂ ಸರಿ ಹೋಯ್ತು. ಎಲ್ಲವನ್ನೂ ಹೊಟ್ಟೆ ದೇವರಿಗೆ ಅರ್ಪಿಸಿದೆವು. ಜೊತೆಗೊಂದಿಷ್ಟು ಅನ್ನ ಸಾಂಬಾರು ಹೊಟ್ಟೆಗಿಳಿಸಿ ಜೀಪಿಗೂ ಪೆಟ್ರೋಲು ಉಣಿಸಿ, ಜೀಪಿನೊಳಗೆ ತೂರಿಕೊಂಡು ಮತ್ತೊಂದಿಷ್ಟು ಜಲರೇಖೆಯನು ಸವಿಯಲು ಲಾಚೆನ್‌ನತ್ತ ಹೊರಟೆವು. ಅಲ್ಲಲ್ಲಿ ಕೈ ಬೀಸುವ ಸುಂದರಿಯರು. ಅವರ ನಗು, ನಾಚಿಕೆ. ಜೊತೆಗೆ ಲಾಚೆನ್ ಸಾಗುವವರೆಗೂ ಬೀದಿಗೊಂದು ಬಸವನಂತೆ ಕಾಣಸಿಕ್ಕ ಜಲರೇಖೆಗಳ ಮೇಳ. ಅವುಗಳೊಂದಿಗೆ ನಮ್ಮ ಸರಸ ಮುಂದುವರಿದಿತ್ತು.

ಗ್ಯಾಂಗ್‌ಟಾಕ್ vs ಲಾಚೆನ್

ನಿಯಾನ್ ಸರಣಿ ಬೆಳಕಿನಿಂದ ಸಿಕ್ಕಿಂನ ನಿಜದ ನೆಲೆಗಳಿಗೆ



ಆಕಾಶದಿಂದಲೇ ಧುಮ್ಮಿಕ್ಕುವಂತೆ ಭಾಸವಾಗುವ ಸಿಕ್ಕಿಂನ ಜಲಕನ್ನಿಕೆ

ತೆರೆದುಕೊಂಡಿತ್ತು ಕಣ್ಣು. ಸಿಕ್ಕಿದ್ದನ್ನೆಲ್ಲಾ ಮಾರಾಟಕ್ಕಿಟ್ಟ ಲೌಕಿಕ ಗ್ಯಾಂಗ್‌ಟಾಕ್‌ನ ಮುಂದೆ ಲಾಚೆನ್ ಸಿಕ್ಕಿಂನ ಅಲೌಕಿಕತೆ ತೆರೆದಿಟ್ಟಿತ್ತು. ಲೌಕಿಕ ಜಗತ್ತಿಗಿಂತ ಈ ಜಗತ್ತು ಇಷ್ಟವಾಗಿತ್ತು ಎನ್ನುವುದು ಕಡಿಮೆಯೆ. ನೈಜ ಸಹಜ ಜೀವನವನ್ನು ಹೊಂದಿದ ಮುಗ್ಧ ಜನ ಸಮೂಹ.

ಅಲ್ಲಲ್ಲಿ ನನ್ನನ್ನು ಬಳಸಿ ಎಂಬ ಬೋರ್ಡನ್ನು ತಬ್ಬಿದ ಬುಟ್ಟಿ. ಬಯಲು ಶೌಚಕ್ಕೆ ನಿರ್ಬಂಧ. ಸಿಕ್ಕಿ ಬಿದ್ದರೆ ₹ 5 ಸಾವಿರದವರೆಗೆ ದಂಡ! ಸಪ್ತ ಸುಂದರಿಯರ ದರ್ಶನವಿತ್ತು ಹೊರಟು ಲಾಚೆನ್ ಬೀದಿ ತಲುಪಿ ಅರಮನೆಯಂತಹ ರೆಸಾರ್ಟ್ ಒಂದರಲ್ಲಿ ತಂಗಿದೆವು. ರೆಸಾರ್ಟ್ ಎದುರಿಗೇ ಅತಿ ಸುಂದರ ಜಲಧಾರೆ.

ಉರಗ ಸುಂದರಿಯ ಸುತ್ತು ಬಳಸಿ

ಬೆಳಗ್ಗೆ ನಾಲ್ಕಕ್ಕೆದ್ದು ಗುರುದೊಂಗ್‌ಮಾರ ಸರೋವರಕ್ಕೆ ಸುತ್ತು ಬಂದು ಲಾಚುಂಗ್‌ಗೆ ಹೊರಟಾಗ ಕಾಣ ಸಿಕ್ಕ ಮತ್ತೊಬ್ಬ ಚೆಲುವಿಯ ಹೆಸರು 'ಕೀಮಾ'. 'ಕೀಮಾ' ಎಂದರೆ ಹಾವು. ಸ್ನೇಕ್ ಫಾಲ್ಸ್ ಎಂಬ ವಿಶೇಷಣ ಹೊತ್ತ ಈಕೆ ನಿಜಕ್ಕೂ ಅಪ್ರತಿಮ ಸುಂದರಿಯೇ. ತನ್ನ ಬಳುಕು ಮೈ ಮಾಟವನ್ನು ರಸ್ತೆಗುಂಟ ಸ್ವಲ್ಪವೂ ನಾಚಿಕೆ ಇಲ್ಲದೆ ಹರವಿ ನಿಂತಿದ್ದಳು!

ಜಲಧಾರೆ ನೋಡುತ್ತಲೆ ಹೊಟ್ಟೆ ಚುಂಯ್‌ಗುಡ ಹತ್ತಿತು. ಸಣ್ಣ ಗೂಡಂಗಡಿ ಹೊಕ್ಕು ತಿಂಡಿಗೆ ಆರ್ಡರಿಸಲು ಹೋದೆವು. ಅಂಗಡಿ ಮುಚ್ಚಿತ್ತು. ಜಲಪಾತವನ್ನೇ ನಿರುಕಿಸುತ್ತಾ ಕಾರು ಏರಿದೆವು. ಅಲ್ಲಿಂದ ಹೊರಟಿದ್ದು ಲಾಚುಂಗ್ ಕಡೆಗೆ.


ಲಾಚುಂಗ್ ಮತ್ತು ಹೆಸರಿಲ್ಲದ ಸುಮನೋಹರಿ!

ಲಾಚುಂಗ್‌ನ ನಮ್ಮ ಹೊಟೇಲ್ ಎದುರಿನ ಬೀದಿಯಲಿ ಹಗಲು ರಾತ್ರಿ ಎನ್ನದೇ ಧೋ ಎಂದು ಸುರಿವ ಸುಂದರಿಯ ಕಡೆಗೆ ಯಾರೂ ಗಮನ ಕೊಟ್ಟಂತಿಲ್ಲ. ಬಜ್ಜಿ ತಿನ್ನುವಾಗ ಅದರ ಸೌಂದರ್ಯವನ್ನೇ ನೆಂಜಿಕೊಂಡು ತಿಂದೆ. ಹೆಸರಿನ ಫಲಕ ಜಲಧಾರೆಯ ಸನಿಹ ನನಗೆ ಕಾಣಿಸದೇ ನಿರಾಶೆಯಾಯಿತು. ಇಷ್ಟೊಂದು ನಿರ್ಲಕ್ಷವೇ? ಎನ್ನುವಂತೆ ಒಂದೆರಡು ಚಿತ್ರಗಳನ್ನು ಕ್ಯಾಮೆರಾಕ್ಕೆ ಸೇರಿಸಿದೆ. ಜಲ ರೇಖೆಯ ಸನಿಹದಲ್ಲೆಲ್ಲಾ ಬೆಳೆದ ವೈಲ್ಡ್ ಸ್ಟ್ರಾಬೆರಿ ಹಣ್ಣುಗಳು.

ನಮ್ಮೂರಿನಲ್ಲಾದರೆ ಜಲಧಾರೆಯನ್ನು ಕಮರ್ಷಿಯಲ್ ಆಗಿಸಿ ಸ್ಟ್ರಾಬೆರಿ ಕೊಯ್ದು ಮಾರುತ್ತಿದ್ದರು. ಅವರ ಈ ಮುಗ್ಧತೆ, ಅಲೌಕಿಕತೆ ಇಷ್ಟವಾಯಿತು. ಬುದ್ಧನ ನಾಡು ಇಲ್ಲಿಂದ ಕೆಲವೇ ಕಿಲೊಮೀಟರ್. ಹೀಗೆ ಬುದ್ಧನ ನಾಡಿನಲ್ಲೊಮ್ಮೆ ಮನಸೋ ಇಚ್ಛೆ ಅಲೆಯಬೇಕು.

ಕೊನೆಯಲ್ಲಿ ಸಿಕ್ಕವಳು!

ಲಾಚುಂಗ್‌ನ ಜೀರೊ ಪಾಯಿಂಟ್ ತಲುಪಿ ಅಲ್ಲಿಂದ ಮತ್ತೆ ಗ್ಯಾಂಗ್‌ಟಾಕ್‌ಗೆ ಹೊರಟಾಗ ಕಂಡ ಜಲಧಾರೆಯನು ಜೀವನದಲಿ ಮರೆಯಲುಂಟೆ. ನಮ್ಮ ಜೋಗಕ್ಕಿಂತಲೂ ಎತ್ತರದ ನೋಟ, ಮೈ ಮಾಟ. ನಾವು ನೋಡುತ್ತಲೇ ಮೋಡದ ಸೆರಗಿನಲ್ಲಿ ಅಡಗಿದ ಕೊನೆಯ ಜಲರೇಖೆಯನ್ನು ನೋಡುತ್ತಲೆ ನೆನಪು ತಮ್ಮ ತಮ್ಮ ಪ್ರೇಯಸಿ/ ಪ್ರಿಯತಮನ ಕಡೆಗೆ ವಾಲಿದ್ದರಿಂದ ಎಲ್ಲರೂ ಮೌನ. ಇಹಕ್ಕೆ ಕಾಲಿಟ್ಟರೂ ಮೋಡದ ಸೆರಗಿನಿಂದ ಸತಾಯಿಸುತ್ತಲೇ ಇತ್ತು. ಸುತ್ತಲಿನ ಮಂಗಗಳು ಏನಾದರು ತಿಂಡಿ ಸಿಗಬಹುದೇ ಎಂದು ನಿರುಕಿಸಹತ್ತಿ ನಮ್ಮ ಚೀಲಗಳನ್ನು ತಡವಲು ಬಂದವು. ಹೆಸರ ಹುಡುಕಾಟದಲಿ ತೊಡಗಿದವನಿಗೆ ಸಿಕ್ಕಿದ್ದು ನಿರಾಶೆ. ಗಾಳಿಯಬ್ಬರಕ್ಕೆ ಸಿಡಿದ ಕೆಲವು ಹನಿಗಳು ಕ್ಯಾಮೆರಾ ಹೊಕ್ಕವು. ತೆರೆದ ನೋಟ್‌ಬುಕ್ಕಿನಲಿ ಆ ಕೊನೆಯ ಜಲರೇಖೆ ದಾಖಲಾಯಿತು. ನೆನಪ ಬುತ್ತಿಯೊಳಗೆ ಈ ಸುಂದರ ಹೆಸರೊಂದು ಅಚ್ಚಾಯಿತು.



ದೂರದಲ್ಲೇ ಬೆಟ್ಟಗಳ ನಡುವೆ ಗೋಚರಿಸುವ ಲಾಚುಂಗ್‌ನ ಜಲಸಿರಿ



ಇವಳೇ ನೋಡಿ ಉರಗ ಸುಂದರಿ



ಹೆಸರು ಹೇಳದ ನೀಳ ಸುಂದರಿ ಕ್ಯಾಮೆರಾದಲ್ಲಿ ಸೆರೆಯಾದದ್ದು ಹೀಗೆ

ಮುನ್ನೋಟ 12-12-2021 ರಿಂದ 18-12-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕಲಾವಿದರಿಗೆ ವಿವಿಧ ಕ್ಷೇತ್ರಗಳಲ್ಲಿ ಅವಕಾಶಗಳು ದೊರೆಯುತ್ತವೆ ಹಾಗೂ ಅವರ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತ ವೇದಿಕೆಗಳು ಸಿಗುತ್ತವೆ. ಉನ್ನತ ವ್ಯಾಸಂಗ ಮಾಡುವವರು ವ್ಯಾಸಂಗದಲ್ಲಿ ಸೂಕ್ತ ಆಯ್ಕೆಯನ್ನು ಮಾಡಿಕೊಳ್ಳುವುದು ಒಳ್ಳೆಯದು. ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡು ಮನಸ್ಸಿಗೆ ನಿರಾಳ ಎನಿಸುತ್ತದೆ. ಯತ್ನಿಸಿದ ಕೆಲವು ಕಾರ್ಯಗಳಲ್ಲಿ ಉತ್ತಮ ಫಲವನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸ್ನೇಹಿತರ ಮತ್ತು ಬಂಧುಬಾಂಧವರ ಆರ್ಥಿಕ ಸಹಾಯದಿಂದ ಕೈಗೆತ್ತಿಕೊಂಡ ಕೆಲಸದಲ್ಲಿ ಯಶಸ್ಸನ್ನು ಕಾಣುವಿರಿ. ಬೇರೆಯವರ ತಳುಕಿನ ಮಾತಿಗೆ ಬೆರಗಾಗಿ ಬಂಡವಾಳವನ್ನು ಹೂಡದಿರಿ. ವೃತ್ತಿಯಲ್ಲಿದ್ದ ಕಿರಿಕಿರಿಗಳು ದೂರವಾಗುತ್ತವೆ. ಆರ್ಥಿಕ ಸಂಪನ್ಮೂಲಗಳು ಒದಗಿಬರುತ್ತವೆ. ಹೊಸ ವ್ಯಾಪಾರವನ್ನು ಆರಂಭಿಸುವ ಮುಂಚೆ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ಹಣದ ಒಳಹರಿವು ಸಾಮಾನ್ಯವಾಗಿ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕುಟುಂಬದವರೊಂದಿಗೆ ಸ್ನೇಹ ಮತ್ತು ಸಹನೆಯಿಂದಾಗಿ ಎದುರಾದ ಬಿಕ್ಕಟ್ಟುಗಳು ಮಂಜಿನಂತೆ ಕರಗುತ್ತವೆ. ದೂರದ ಸಂಬಂಧಿಗಳು ನಿಮ್ಮಿಂದ ಸಹಾಯ ಅರಸಿ ಬರುತ್ತಾರೆ. ಕೆಲಸಕಾರ್ಯಗಳಲ್ಲಿ ಸಾಕಷ್ಟು ಪ್ರಗತಿಯನ್ನು ಕಾಣಬಹುದು. ಸಂಗಾತಿಯ ಸಲಹೆಗಳು ಸಮಯೋಚಿತವಾಗಿ ಉಪಯೋಗಕ್ಕೆ ಬರುತ್ತವೆ. ಕ್ಷೀರೋತ್ಪನ್ನಗಳ ಮಾರಾಟ ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮನ್ನು ಅರ್ಥಮಾಡಿಕೊಳ್ಳಲು ಆಗದವರಿಂದ ನಿಮಗೆ ಮುಜುಗರ ಆಗಬಹುದು. ತಂದೆಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಮಕ್ಕಳಿಂದ ಆರ್ಥಿಕ ಸಹಾಯ ಒದಗಿಬರುತ್ತದೆ. ಈ ರಾಶಿಯ ಹಿರಿಯರು ಸಲಹೆ ಸೂಚನೆಯನ್ನು ಕೊಡುವಾಗ ಯೋಗ್ಯರಿಗೆ ಕೊಡುವುದು ಉತ್ತಮ. ಇಲ್ಲವಾದಲ್ಲಿ ನಿಮಗೆ ಅವಮಾನವಾಗುವ ಸಾಧ್ಯತೆಗಳಿವೆ. ಬೇರೆಯವರ ವಿವಾದಗಳನ್ನು ಪರಿಹರಿಸುವಾಗ ಎಚ್ಚರವಾಗಿರಿ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸಮಾಜದ ಒಳಿತಿಗಾಗಿ ಕೆಲವರು ಕೈಗೊಂಡ ಕೆಲಸಗಳನ್ನು ಮಾಡಿ ಮುಗಿಸುವರು. ಬಂಧುಗಳಲ್ಲಿ ಸ್ನೇಹಸಂಬಂಧಗಳು ವೃದ್ಧಿಸುವ ಸಾಧ್ಯತೆಗಳಿವೆ. ವ್ಯವಹಾರಗಳಲ್ಲಿ ಸಂಬಂಧಗಳು ಹಳಸದಂತೆ ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನಗಳು ಖಂಡಿತ ದೊರೆಯುತ್ತವೆ. ಪ್ರಯಾಣ ಕಾಲದಲ್ಲಿ ಕಳ್ಳಕಾಕರ ಬಗ್ಗೆ ಜಾಗೃತರಾಗಿರುವುದು ಒಳ್ಳೆಯದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದೂರ ಪ್ರಯಾಣ ಅಥವಾ ಪ್ರವಾಸಕ್ಕಾಗಿ ನಿರ್ಧಾರ ಮಾಡುವಿರಿ. ವಿದ್ಯಾರ್ಥಿಗಳಿಗೆ ವ್ಯಾಸಂಗದ ಕಡೆ ಹೆಚ್ಚು ಗಮನ ಹರಿಯುತ್ತದೆ. ಪಾಲುದಾರರಿಂದ ಸ್ವಲ್ಪ ಕಷ್ಟ ಆಗುವ ಸಂದರ್ಭವಿರುವುದರಿಂದ ಸ್ವತಂತ್ರ ವ್ಯವಹಾರ ಒಳ್ಳೆಯದು. ಕುಟುಂಬದವರೊಂದಿಗಿನ ಭಿನ್ನಾಭಿಪ್ರಾಯಗಳಿಂದಾಗಿ ನಿಂತು ಹೋಗಿದ್ದ ಕೆಲಸಗಳು ಈಗ ಒಟ್ಟಾಗಿ ಆರಂಭವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3
ಧನಾದಾಯ ಉತ್ತಮವಾಗಿರುತ್ತದೆ. ಆದರೂ ಖರ್ಚು ಹೆಚ್ಚಿಗೆ ಬರುವುದರಿಂದ ಅದನ್ನು ಸರಿದೂಗಿಸಿಕೊಂಡು ಹೋಗಬೇಕಾದ ಅನಿವಾರ್ಯತೆ ಇರುತ್ತದೆ. ಸಂತರು ಗುರುಗಳಿಗೆ ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರಿಸುತ್ತದೆ. ದಿನಸಿ ವ್ಯಾಪಾರಿಗಳಿಗೆ ಲಾಭ ಹೆಚ್ಚಾಗುತ್ತದೆ. ಭೂಮಿ ಹಾಗೂ ಸ್ಥಿರಾಸ್ತಿ ವ್ಯಾಪಾರ ಮಾಡುವ ಮಧ್ಯವರ್ತಿಗಳಿಗೆ ಹೆಚ್ಚಿನ ಕಮಿಷನ್ ದೊರೆಯುತ್ತದೆ.

ವೃಶ್ಚಿಕ — ವಿಶಾಖ 4 ಅನುರಾಧ, ಜ್ಯೇಷ್ಠ
ವಾಸ್ತು ವಿನ್ಯಾಸ ಮುಂತಾದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವವರಿಗೆ ವಿಪುಲವಾದ ಅವಕಾಶಗಳು ದೊರೆಯಲಿವೆ. ಸ್ನೇಹದ ವಿಚಾರದಲ್ಲಿ ಎಡವುವ ಸಾಧ್ಯತೆ ಇದೆ. ಹಾಗಾಗಿ ಅಪರಿಚಿತರಲ್ಲಿ ಸ್ನೇಹ ಮಾಡುವ ಮೊದಲು ಎಚ್ಚರ. ಹೊಸ ವಾಹನ ಖರೀದಿ ಮಾಡುವ ಯೋಗವಿದೆ. ಸಂಗಾತಿಯ ಕಡೆಗೆ ಹೆಚ್ಚಿನ ಗಮನ ಅಗತ್ಯ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಅನೇಕ ಯೋಜನೆಗಳನ್ನು ಒಮ್ಮೆಗೆ ಆರಂಭಿಸಬೇಡಿರಿ. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ. ಕೆಲವೊಂದು ಕೆಲಸಗಳು ನಿಮ್ಮ ನಡೆಯಿಂದ ನಿಧಾನವಾಗಬಹುದು. ದೃಢನಿರ್ಧಾರದಿಂದ ವ್ಯವಹರಿಸಿದಾಗ ಒಳಿತಾಗುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ರೈತಾಪಿ ವರ್ಗದವರಿಗೆ ಸೂಕ್ತ ಪರಿಕರಗಳು ದೊರೆತು ಸಂತಸ ಮೂಡುತ್ತದೆ. ಸಿದ್ಧಪಡಿಸಿದ ವಸ್ತ್ರಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚುತ್ತದೆ. ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಅಭಿವೃದ್ಧಿ ಇದೆ. ಸ್ಥಿತಪ್ರಜ್ಞರಾಗಿ ಕೆಲಸ ಮಾಡುವುದರಿಂದ ಮೇಲಧಿಕಾರಿಗಳ ಮೆಚ್ಚುಗೆ ದೊರೆಯುತ್ತದೆ. ಆಳವಾಗಿ ಆಲೋಚಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರು ಯೋಚಿಸಿ ಕಾರ್ಯಪ್ರವೃತ್ತರಾಗುವುದು ಒಳಿತು. ದುಡುಕಿನ ನಿರ್ಧಾರಗಳಿಂದ ನಷ್ಟ ಅನುಭವಿಸಬೇಕಾಗಬಹುದು. ವಿದ್ಯಾರ್ಥಿಗಳಿಗೆ ಅತ್ಯಂತ ಶುಭವಾರ. ಯಂತ್ರೋಪಕರಣಗಳನ್ನು ಮಾರಾಟ ಮಾಡುವವರಿಗೆ ಅತ್ಯಂತ ಲಾಭದಾಯಕವಾಗಿರುತ್ತದೆ. ಜನಪ್ರತಿನಿಧಿಗಳು ಅಥವಾ ಸಮಾಜದ ಗೌರವಾನ್ವಿತರು ತಮ್ಮ ಮಾತಿನಿಂದ ಸಾರ್ವಜನಿಕ ರಂಗದಲ್ಲಿ ಮುಜುಗರಕ್ಕೆ ಒಳಗಾಗುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆತ್ಮಗೌರವಕ್ಕೆ ಧಕ್ಕೆ ಬರದಂತೆ ಯೋಚಿಸಿ ಸಹವಾಸ ಮಾಡುವುದು ಒಳ್ಳೆಯದು. ಹಣದ ವಿಚಾರದಲ್ಲಿ ಸ್ವಲ್ಪ ಜಾಗರೂಕರಾಗಿರುವುದು ಒಳಿತು. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸಂಬಂಧವಿಲ್ಲದ ವಿಷಯಗಳಲ್ಲಿ ಮೂಗು ತೂರಿಸಿ ಮುಜುಗರಕ್ಕೆ ಒಳಗಾಗುವಿರಿ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಸಂಗಾತಿಯೊಡನೆ ಮನಬಿಚ್ಚಿ ಮಾತನಾಡುವುದು ಬಹಳ ಒಳ್ಳೆಯದು.

ಇನ್ನೆಲ್ಲಿ ಬಳ್ಳಾರಿಯ ಆ ಗಾನಸುಧೆ?

ಹೊನ್ನತೇಜ

ಸ್ಮರಣೆ

'ಲಾಲಿಸಿದಳು ಮಗನ ಯಶೋದೆ, ಲಾಲಿಸಿದಳು ಮಗನ ಯಶೋದೆ... ಅರಳೆಲೆ ಮಾಗಾಯಿ ಬೆರಳಿಗುಂಗುರವಿಟ್ಟು, ತರಳನ ಮೈಸಿರಿ ತರುಣಿ ನೋಡುತ ಹಿಗ್ಗಿ...'

'ಧಾನಿ ರಾಗ'ದಲ್ಲಿ ಹಿಂದೂಸ್ತಾನಿ ಗಾಯಕಿ ಬಳ್ಳಾರಿಯ ವಿಜಯಾ ಕಿಶೋರ್ 'ಫೇಸ್‌ಬುಕ್ ಲೈವ್'ನಲ್ಲಿ ಪ್ರಸ್ತುತಪಡಿಸಿದ್ದ ಪುರಂದರ ದಾಸರ ಈ ಕೀರ್ತನೆ ಸಂಗೀತಪ್ರಿಯರ ಮನಸೂರೆಗೊಂಡಿತ್ತು. ಅವರದ್ದು ಕೋಗಿಲೆಯ ಕಂಠ. ಮಾಧುರ್ಯ ತುಂಬಿದ ದನಿ. ಪರವಶ ಭಾವದಿಂದ ಹಾಡಿದ್ದ ಕೀರ್ತನೆಗೆ ಅಭಿಮಾನಿಗಳು ತಲೆದೂಗಿದ್ದರು. ಹಿತವಾದ ಮೆದುದನಿ ಗಾಯನಕ್ಕೆ ಮತ್ತಷ್ಟು ಮೆರಗು ನೀಡಿತ್ತು.

ಕೋವಿಡ್ ಭೀತಿ ಇರದಿದ್ದರೆ ಅಭಿಮಾನಿಗಳ ಮುಂದೆ ವಿಜಯಾ ಕಿಶೋರ್ ಲೈವ್ ಕಾರ್ಯಕ್ರಮ ನೀಡುತ್ತಿದ್ದರು. ಈ ಅವಕಾಶ ತಪ್ಪಿಹೋಗಿದ್ದು ದುರದೃಷ್ಟ. ವಿಜಯಾ, ಬಳ್ಳಾರಿ ಚಂದ್ರಶೇಖರ ಗವಾಯಿ ಅವರ ಬಳಿ ಹಲವು ವರ್ಷ ಹಿಂದೂಸ್ತಾನಿ ಸಂಗೀತ ಅಭ್ಯಾಸ ಮಾಡಿದ್ದರು. ಗವಾಯಿ ಅವರಿಗೆ 'ಗುರು ನಮನ' ಸಲ್ಲಿಸುವುದಕ್ಕಾಗಿಯೇ ಫೇಸ್‌ಬುಕ್ ಲೈವ್ ನಡೆಸಿದ್ದರು. ಇದೇ ಅವರ ಕೊನೆಯ ಕಾರ್ಯಕ್ರಮವಾಯಿತು. ಕಳೆದ ವಾರ (ಡಿಸೆಂಬರ್ 8ರಂದು) ಬಂದ ಅವರ ನಿಧನದ ಸುದ್ದಿ ಸಂಗೀತಪ್ರಿಯರಿಗೆ ಆಘಾತ ಉಂಟುಮಾಡಿತು.

'ಇದು ಯಾರು ಹೂಡಿದ ಆಟವೋ; ಯಾರು ಮಾಡಿದ ಮಾಟವೋ; ಮಾಯೆಯೆಂಬ ಜಾಲ ಹೂಡಿ ತೆರೆದ ಭಾಗ್ಯದ ನೋಟವೋ...' ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕವಿತೆಯನ್ನು 'ಖಮಾಜ್ ರಾಗ'ದಲ್ಲಿ ಅವರು ಅಂದು ಹಾಡಿದ್ದರು. ದ.ರಾ ಬೇಂದ್ರೆಯವರ 'ಸಿಂಗಾರಿ ನಿನ್ನ ಮುಖ...' ಕವಿತೆಯನ್ನೂ ಚಾರುಕೇಶಿ ರಾಗದಲ್ಲಿ ಮನದುಂಬಿ ಹಾಡಿದ್ದರು. ಅಂದು ಅವರ ಕಂಠದಿಂದ ಕವಿತೆಗಳು, ವಚನಗಳು ಮತ್ತು ಕೀರ್ತನೆಗಳು ಸೊಗಸಾಗಿ ಹೊರಹೊಮ್ಮಿದ್ದವು. ವಿಶೇಷವೆಂದರೆ, ಚಂದ್ರಶೇಖರ ಗವಾಯಿ ರಾಗ ಸಂಯೋಜನೆ ಮಾಡಿದ್ದ ರಚನೆಗಳನ್ನೇ ಆಯ್ಕೆ ಮಾಡಿಕೊಂಡು ಪ್ರಸ್ತುತಪಡಿಸಿ, ಗುರುವಿಗೆ ಕಡೇ ನಮನ ಸಲ್ಲಿಸಿದ್ದರು.

ವಿಜಯಾ ಮೂಲತಃ ಮೈಸೂರಿನವರು. ಹಿರಿಯ ರಂಗ ಕಲಾವಿದರಾಗಿದ್ದ ಕೊಟ್ಟೂರಪ್ಪನವರ ಮೊಮ್ಮಗಳು. ಮನೆಯಲ್ಲಿದ್ದ ವಾತಾವರಣದಿಂದ ಐದನೇ ವಯಸ್ಸಿನಿಂದ ಶಾಸ್ತ್ರೀಯ ಸಂಗೀತ ಅಭ್ಯಾಸ ಆರಂಭಿಸಿದ್ದರು. ಮೈಸೂರಿನಲ್ಲಿ ಕರ್ನಾಟಕ ಸಂಗೀತ ಕಲಿತರು. 1980ರಲ್ಲಿ ಮದುವೆ ಆಗಿ ಬಳ್ಳಾರಿಗೆ ಬಂದ ಬಳಿಕ ಗವಾಯಿ ಬಳಿ ಹಿಂದೂಸ್ತಾನಿ ಸಂಗೀತ ಕಲಿತರು. ಗವಾಯಿಗಳು ತಮ್ಮ ಗುರುಗಳಾಗಿದ್ದ ಸಿದ್ದರಾಮ ಜಂಬಲ್‌ದಿನ್ನಿ ಅವರಿಂದ ಕಲಿತಿದ್ದನ್ನು ವಿಜಯಾ ಅವರಿಗೆ ಧಾರೆ ಎರೆದಿದ್ದರು. ಇಂಪಾದ ದನಿ, ನಯ- ವಿನಯ, ಮಿತವಾದ ಮಾತು, ಸಂಗೀತದ ಮೇಲಿನ ಪ್ರೀತಿ ಮುಂತಾದ ಗುಣಗಳಿಂದ ವಿಜಯಾ ಗುರುವಿಗೆ ಮೆಚ್ಚಿನ ಶಿಷ್ಯೆಯಾಗಿದ್ದರು.

ಹಾಡು- ಸಂಗೀತವೇ ವಿಜಯಾರ ಬದುಕಾಗಿತ್ತು. ಅದನ್ನು ಬಿಟ್ಟು ಬೇರೆ ಪ್ರಪಂಚ ಅವರಿಗಿರಲಿಲ್ಲ. ಹೀಗಾಗಿ, ತಾವು ಕಲಿತಿದ್ದನ್ನು ನೂರಾರು ಮಕ್ಕಳಿಗೆ ಹೇಳಿಕೊಡಲು 'ಸುಸ್ವರ ಸಂಗೀತ ವಿದ್ಯಾಲಯ' ಸ್ಥಾಪಿಸಿ, ಬದುಕಿನ ಅಂತಿಮ ಕ್ಷಣದವರೆಗೂ ಮಕ್ಕಳಿಗೆ ಸಂಗೀತ ಹೇಳಿಕೊಟ್ಟರು. ಮಕ್ಕಳು ನಿಖರವಾಗಿ ಕಲಿಯುವವರೆಗೂ ಬಿಡುತ್ತಿರಲಿಲ್ಲ. ಅವರ ಬಳಿ ಕಲಿತ ಕೆಲವು ಮಕ್ಕಳು ಟಿ.ವಿ ಚಾನೆಲ್‌ಗಳ 'ರಿಯಾಲಿಟಿ ಷೋ'ಗಳಲ್ಲಿ ಹಾಡಿ, ಮಿಂಚಿದ್ದಾರೆ. ಹೀಗಾಗಿ, ಅವರೊಬ್ಬ ಅತ್ಯುತ್ತಮ ಸಂಗೀತ ಶಿಕ್ಷಕಿಯೂ ಆಗಿದ್ದರು.

ದೂರದರ್ಶನ, ಆಕಾಶವಾಣಿಯ 'ಬಿ' ಹೈ ಶ್ರೇಣಿ ಕಲಾವಿದರಾಗಿದ್ದ ವಿಜಯಾ ಅವರು ಅನೇಕ ಗಾಯನ ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ಹಂಪಿ ಉತ್ಸವ, ಮೈಸೂರು ದಸರಾ, ಆನೆಗುಂದಿ ಉತ್ಸವ, ಪುರಂದರ ದಾಸರ ಆರಾಧನಾ ಮಹೋತ್ಸವಗಳಲ್ಲೂ ಹಾಡಿದ್ದರು. ದೆಹಲಿಯಲ್ಲೂ ಕಾರ್ಯಕ್ರಮ ನೀಡಿದ್ದರು. ಹೋದಕಡೆಗಳಲ್ಲಿ ತಮಗೆ ಇಷ್ಟವಾದ ಕವಿತೆ, ವಚನ ಮತ್ತು ಕೀರ್ತನೆಗಳನ್ನು ಅದ್ಭುತವಾಗಿ ಪ್ರಸ್ತುತಪಡಿಸುತ್ತಿದ್ದರು. ಅವು ಕೇಳುಗರ ಕಿವಿಗೂ ಹಿತವಾಗಿರುತ್ತಿದ್ದವು.

ತಮ್ಮ ನೋವನ್ನು ಯಾರ ಬಳಿ ಹೇಳಿಕೊಳ್ಳದೆ, ತಮ್ಮ ಪಾಡಿಗೆ ತಾವು ಬದುಕಲು ಸಂಗೀತವೇ ಅವರಿಗೆ ಸಂಗಾತಿಯಾಗಿತ್ತು. ಪ್ರತಿಭಾವಂತ ಗಾಯಕಿ ಯಾಗಿದ್ದರೂ ಎಲೆಮರೆ ಕಾಯಾಗಿದ್ದರು. ತಮಗೆ ಸೂಕ್ತ ಮನ್ನಣೆ ಸಿಗಲಿಲ್ಲ ಎನ್ನುವ ಕೊರಗಿನಲ್ಲೇ ವಿಜಯಾ ಕಣ್ಮರೆಯಾದರು. ಆದರೆ, ಅವರು ಪ್ರಸ್ತುತಪಡಿಸಿದ ಭಾವಗೀತೆಗಳು, ಕೀರ್ತನೆಗಳು ನಮ್ಮೊಂದಿಗೆ ಶಾಶ್ವತವಾಗಿ ಉಳಿದಿವೆ.



ಹಿಂದೂಸ್ತಾನಿ ಗಾಯಕಿ ವಿಜಯಾ ಕಿಶೋರ್

ಪಣಜಿ ಚಿತ್ರೋತ್ಸವ

...ಮೊದಲ ಪುಟದಿಂದ

ಬಂದವರಿಗೆ ನೆಮ್ಮದಿಯಾಗಿ ಸಿನಿಮಾ ನೋಡುವ ಅವಕಾಶವೂ ಸಿಗಲಿಲ್ಲ. ಚಿತ್ರೋತ್ಸವದ ಹೊಣೆ ಹೊತ್ತ ಚಲನಚಿತ್ರೋತ್ಸವ ನಿರ್ದೇಶನಾಲಯ (ಡಿಎಫ್‌ಎಫ್) ಕೈಗೊಂಡ ಕೆಲ ಏಕಪಕ್ಷೀಯ ನಿರ್ಧಾರಗಳಿಂದ ಪ್ರತಿನಿಧಿಗಳು ಅಕ್ಷರಶಃ ಪರದಾಡಿದರು.

ಚಿತ್ರೋತ್ಸವ ನಡೆಸುವುದು ಯಾರಿಗಾಗಿ? ಈ ಪ್ರಶ್ನೆಗೆ ಉತ್ತರ ಹೇಳುವವರು ಇರಲಿಲ್ಲ. ಅವ್ಯವಸ್ಥೆಗಳ ಬಗ್ಗೆ ಡಿಎಫ್‌ಎಫ್ ಮುಖ್ಯಸ್ಥರು ತಲೆಕೆಡಿಸಿಕೊಳ್ಳಲಿಲ್ಲ. ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿಕೊಂಡು ಪಣಜಿಗೆ ಬಂದ ಪ್ರತಿನಿಧಿಗಳ ಅಹವಾಲುಗಳನ್ನು ಕೇಳಿಸಿಕೊಳ್ಳುವ ಸೌಜನ್ಯವೂ ಡಿಎಫ್‌ಎಫ್ ತೋರಲಿಲ್ಲ.

2010 ದಶಕದಲ್ಲಿ ನಡೆದ ಐದಾರು ಚಿತ್ರೋತ್ಸವಗಳು ನಿಜಕ್ಕೂ ಅತ್ಯುತ್ತಮವಾಗಿದ್ದವು. ಅವು ಅಕ್ಷರಶಃ ಸಿನಿಮಾ ಹಬ್ಬಗಳಂತೇ ನಡೆದವು. ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಎಲ್ಲಾ ಕೊರತೆಗಳು ಮುಚ್ಚಿ ಹೋಗಿದ್ದವು. ಪ್ರತಿನಿಧಿಗಳು ಎಲ್ಲವನ್ನೂ ಮರೆತು ಜಗತ್ತಿನ ಅತ್ಯುತ್ತಮ ಸಿನಿಮಾಗಳನ್ನು ನೋಡಿ ಸಂತೋಷಪಟ್ಟಿದ್ದರು. ಈ ವರ್ಷವೂ ಹಲವು ಉತ್ತಮ ಸಿನಿಮಾಗಳಿದ್ದವು. ಆದರೆ ಅವನ್ನು ನೋಡುವ ಅವಕಾಶ ಎಲ್ಲರಿಗೂ ಸಿಕ್ಕಲಿಲ್ಲ. ಡಿಎಫ್‌ಎಫ್‌ನ ಧೋರಣೆಯೇ ಎಲ್ಲ ಅವ್ಯವಸ್ಥೆಗೆ ಕಾರಣ. ಡಿಎಫ್‌ಎಫ್ ತನ್ನ ನಿಲುವು ಬದಲಾಯಿಸಿಕೊಳ್ಳದಿದ್ದರೆ ಪಣಜಿ ಚಿತ್ರೋತ್ಸವಕ್ಕೆ ಭವಿಷ್ಯವಿಲ್ಲ.

ಪ್ರತಿವರ್ಷ ಪಣಜಿಯ ಐನಾಕ್ಸ್ ಕಾಂಪ್ಲೆಕ್ಸ್‌ನ ಆರು ತೆರೆಗಳು ಮತ್ತು ಸಮೀಪದಲ್ಲೇ ಇರುವ ಕಲಾ ಅಕಾಡೆಮಿಯ ಒಂದು ದೊಡ್ಡ ತೆರೆಯಲ್ಲಿ ಸಿನಿಮಾ ನೋಡುವ ಅವಕಾಶ ಇರುತ್ತಿತ್ತು. ಈ ವರ್ಷ ಕಲಾ ಅಕಾಡೆಮಿಯ ತೆರೆ ಮತ್ತು ಐನಾಕ್ಸ್ ಕಾಂಪ್ಲೆಕ್ಸ್ ಒಂದು ಸಣ್ಣ ತೆರೆ ಪ್ರದರ್ಶನಕ್ಕೆ ಲಭ್ಯವಿರಲಿಲ್ಲ. ಬದಲಿಗೆ ಪಣಜಿಯಿಂದ ಹದಿನೈದು ಕಿ.ಮೀ ದೂರದ ಪೂರ್ವರಿಂನ ಐನಾಕ್ಸ್ ಕಾಂಪ್ಲೆಕ್ಸ್‌ನ ಮೂರು ತೆರೆಗಳಲ್ಲಿ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದ್ದರು. ಅಲ್ಲಿಗೆ ಹೋಗಿ ಬರಲು ಬಸ್ ವ್ಯವಸ್ಥೆಯೂ ಇತ್ತು. ಆದರೂ ಚಿತ್ರೋತ್ಸವ ಕೇಂದ್ರೀಕೃತಗೊಂಡಿದ್ದು ಪಣಜಿ ಐನಾಕ್ಸ್‌ನಲ್ಲೇ.



ಆಯಾ ದಿನ ಪ್ರದರ್ಶನವಾಗುವ ಸಿನಿಮಾಗಳ ಹೆಸರು,ವೇಳೆ ಇತ್ಯಾದಿ ವಿವರಗಳಿರುತ್ತಿದ್ದ ಸಣ್ಣ (ಸ್ಕ್ರೀನ್ ಷೆಡ್ಯೂಲ್) ಪುಸ್ತಿಕೆ ಪ್ರಕಟಣೆ ಕೈಬಿಟ್ಟಿದ್ದರು. ಒಂದು ದಿನ ಮುಂಚಿತವಾಗಿ ಪೇಪರ್ ಟಿಕೆಟ್ ಪಡೆಯುವ ವ್ಯವಸ್ಥೆಯೂ ರದ್ದಾಗಿತ್ತು. ಈ ಸೌಲಭ್ಯಗಳನ್ನು ರದ್ದು ಮಾಡಿದ್ದೇಕೆ ಎಂಬ ಪ್ರಶ್ನೆಗೆ ಯಾರೂ ಉತ್ತರ ಹೇಳಲಿಲ್ಲ. ರಾತ್ರಿ ಹನ್ನೆರಡರ ನಂತರ ಆನ್‌ಲೈನ್‌ನಲ್ಲಿ ಟಿಕೆಟ್‌ಗಳನ್ನು ಕಾದಿರಿಸುವ ವ್ಯವಸ್ಥೆ ಇತ್ತು. ಸ್ಮಾರ್ಟ್‌ಫೋನ್ ಇಲ್ಲದವರು ಪರದಾಡಬೇಕಾಯಿತು.

ಚಿತ್ರೋತ್ಸವಕ್ಕೆ ನೋಂದಾಯಿಸಿಕೊಂಡವರು 1800 ರೂಪಾಯಿ ಪ್ರತಿನಿಧಿ ಶುಲ್ಕದ ಜತೆಗೆ ಜಿಎಸ್‌ಟಿ ತೆರಿಗೆ ತೆತ್ತಿದ್ದರು. ಮೊದಲ ಎರಡು ದಿನ ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಪ್ರವೇಶ ಮಿತಿ ಇತ್ತು. ಅದಕ್ಕೆ ಕೋವಿಡ್ ನಿಯಮಾವಳಿ ಪ್ರಕಾರ ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಕಾರಣ ಹೇಳಿದ್ದರು. ಐನಾಕ್ಸ್ ಆವರಣದಲ್ಲಾಗಲಿ, ಪಣಜಿಯಲ್ಲಿ ಎಲ್ಲೇ ಆಗಲಿ ಸಾಮಾಜಿಕ ಅಂತರ ಇರಲಿಲ್ಲ. ಎರಡು ದಿನ ಸಿನಿಮಾ ನೋಡುವ ಅವಕಾಶ ಸಿಗದೆ ಹತಾಶರಾದ ಹಲವು ಪ್ರತಿನಿಧಿಗಳು ಪ್ರತಿಭಟನೆಗೆ ಮುಂದಾದ ಮೇಲೆ ಪ್ರವೇಶ ಮಿತಿ ಸಡಿಲಿಸಿದರು.

ಐನಾಕ್ಸ್ ಆವರಣದಲ್ಲಿ ಲಭ್ಯವಿದ್ದ ತಿನಿಸು, ಪಾನೀಯಗಳ ಬೆಲೆಗಳ ಬಗ್ಗೆ ಹೇಳಬೇಕಿಲ್ಲ. ಬೆಳಗಿನ 10ರಿಂದ ನಡುರಾತ್ರಿವರೆಗೆ ಸಿನಿಮಾ ನೋಡುವವರಿಗೆ ಅವರ ಕೈಗೆಟುಕುವ ಬೆಲೆಯಲ್ಲಿ ಊಟ, ಉಪಹಾರ ಸಿಗಲಿಲ್ಲ. ಐನಾಕ್ಸ್ ಹೊರ ಆವರಣದಲ್ಲಿ ಒಂದು ಬಿಯರ್ ಕೌಂಟರ್ ಇತ್ತು. ಹೊರಗಡೆ 70 ರೂಪಾಯಿಗೆ ಸಿಗುತ್ತಿದ್ದ ಬಾಟಲಿಗೆ ಅಲ್ಲಿ 200 ರೂಪಾಯಿ ತೆರಬೇಕಿತ್ತು.

ಜಗತ್ತಿನ ಹತ್ತು ಪ್ರತಿಷ್ಠಿತ ಅಂತರರಾಷ್ಟ್ರೀಯ ಚಿತ್ರೋತ್ಸವಗಳ ಪೈಕಿ ಪಣಜಿ ಚಿತ್ರೋತ್ಸವವೂ ಒಂದು ಎಂದು ಚಿತ್ರೋತ್ಸವ ನಿರ್ದೇಶನಾಲಯ (ಡಿಎಫ್‌ಎಫ್) ಮತ್ತು ಕೇಂದ್ರ ಸರ್ಕಾರ ಹೇಳಿಕೊಳ್ಳುತ್ತದೆ. ಆದರೆ ಚಿತ್ರೋತ್ಸವ ನಡೆಸುವುದು ಯಾರಿಗಾಗಿ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಪ್ರಯತ್ನವನ್ನು ಮಾಡಿಲ್ಲ. ಪಣಜಿ ಚಿತ್ರೋತ್ಸವಕ್ಕಾಗಿಯೇ ಹತ್ತು ತೆರೆಗಳ ಸುಸಜ್ಜಿತ ಕಾಂಪ್ಲೆಕ್ಸ್ ನಿರ್ಮಿಸುವುದಾಗಿ ಮನೋಹರ ಪರಿಕ್ಕರ್ ಹೇಳುತ್ತಿದ್ದರು. ಚಿತ್ರೋತ್ಸವಕ್ಕೆ ಬರುವ ಪ್ರತಿನಿಧಿಗಳಿಗೆ ಕಡಿಮೆ ವೆಚ್ಚದಲ್ಲಿ ಊಟ, ವಸತಿ ಕಲ್ಪಿಸುವ ಮಾತಾಡಿದ್ದರು. ಅವರ ಕನಸು ಹಾಗೇ ಉಳಿದುಹೋಯಿತು.

ಈ ಸಲ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಗೋವಾದಲ್ಲಿ ಫಿಲಂ ಸಿಟಿ ನಿರ್ಮಿಸುವ ಮಾತು ಆಡಿದರು! ಕೇಂದ್ರದ ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರಂತೂ ಉತ್ತರ ಪ್ರದೇಶದ ನೋಯ್ಡಾ ಬಳಿ ಜಗತ್ತಿನ ಅತಿದೊಡ್ಡ ಫಿಲಂ ಸಿಟಿ ಮತ್ತು ವಿಶ್ವದಲ್ಲೇ ಅತಿ ದೊಡ್ಡದಾದ ವಿಮಾನ ನಿಲ್ದಾಣ ನಿರ್ಮಿಸುವ ಪ್ರಧಾನಿಯವರ ಮಹತ್ವಾಕಾಂಕ್ಷೆಯ ಯೋಜನೆ ಬಗ್ಗೆ ಹೇಳಿಕೊಂಡು ಬೀಗಿದರು. ಪಣಜಿ ಚಿತ್ರೋತ್ಸವದ ಮೂಲಕ ಭಾರತ ಜಗತ್ತಿನ ಗಮನ ಸೆಳೆದಿದೆ ಎಂದು ಹೇಳಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು.


ಪ್ರತಿನಿಧಿಗಳು ಎಂಟು ದಿನ ನೆಮ್ಮದಿಯಾಗಿ ಕುಳಿತು ಸಿನಿಮಾ ನೋಡಲು ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರ ಮತ್ತು ಡಿಎಫ್‌ಎಫ್ ಇನ್ನಾದರೂ ಯೋಚಿಸಬೇಕು. ಪ್ರತಿನಿಧಿಗಳ ಮಾತುಗಳನ್ನು ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರಿಸಬೇಕು. ಪ್ರತಿಷ್ಠೆಗಾಗಿ ಚಿತ್ರೋತ್ಸವ ನಡೆಸುವ ಮನಃಸ್ಥಿತಿ ಬದಲಾಗಬೇಕು.

ಗಮನಸೆಳೆದ ಶೆಮ್ಕೋರ್

ಈ ಸಲದ ಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆ ಆಯ್ಕೆಯಾದ ಸಿನಿಮಾಗಳ ಪೈಕಿ ಹಲವು ಉತ್ತಮವಾಗಿದ್ದವು. ಸತ್ಯಜಿತ್ ರೇ ಶತಮಾತ್ಸವದ ವರ್ಷದ ನೆನಪಿಗಾಗಿ ಅವರ ಕೆಲ ಸಿನಿಮಾಗಳು ಪ್ರದರ್ಶನಗೊಂಡವು.

ಭಾರತೀಯ ಪನೋರಮಾ ವಿಭಾಗದಲ್ಲಿ ಅಸ್ಸಾಮಿನ ದಿಮಾಸ ಬುಡಕಟ್ಟು ಭಾಷೆಯ ಮೊದಲ ಸಿನಿಮಾ ಶೆಮ್ಕೋರ್ (ನಿ: ಅಮಿ ಬರೂವಾ) ಕನ್ನಡದ ಆ್ಯಕ್ಟ್ 1978, ಮರಾಠಿಯ ಮೂರು ತಾಸಿನ ಸಿನಿಮಾ ಮೀ ವಸಂತರಾವ್, ಗೋದಾವರಿ ಹೆಚ್ಚು ಸದ್ದು ಮಾಡಿದವು. ಹಿಂದಿಯ ಧಮಾಕಾ, ಅಂಧಾಧುನ್ ಚಿತ್ರಗಳಿಗೂ ಅವಕಾಶ ಕಲ್ಪಿಸಿದ್ದರು. ತಮಿಳಿನ ಅಸುರನ್ ಬ್ರಿಕ್ಸ್ ದೇಶಗಳ ಚಿತ್ರಗಳ ಸ್ಪರ್ಧೆಯಲ್ಲಿ ಇತ್ತು.

ಪದಬಂಧ 2717



ಮೇಲಿನಿಂದ ಕೆಳಕ್ಕೆ

1. ಸುದ್ದಿ ಸಮಾಚಾರಗಳನ್ನು ಮಂದಿಗೆ ತಲುಪಿಸುವ ವೇದಿಕೆ 5
2. ಜ್ಯೋತಿಷ್ಯದಲ್ಲಿ ಆಂತರ್ಯದ ಆಗುಹೋಗುಗಳನ್ನು ಉಂಟುಮಾಡುವವ 5
4. ಮಳೆ ಬೀಳುವ ಸಮಯ 4
6. ಇಸ್ತ್ರಿಯಾದ ಬಟ್ಟೆ ಮುರಿಯುವ ರೆಕ್ಕೆಯಂತೆ 4
8. ಮುಂಜಾವು ಮತ್ತು ಶುಭ ಮುಹೂರ್ತಗಳಿಗೆ ಸುಶ್ರಾವ್ಯ ಸಂಗೀತ ನಾದ 5
11. ಮತ್ತೆ ಬರುವ ಮತಿಗೆಟ್ಟವ 3
13. ನಿತ್ಯ ಬಳಕೆಯ ಸಾಮಾನು ಸಾಮಗ್ರಿ 3
14. ಪೆದ್ದನಲ್ಲಿ ಕಾಣುವ ಬಹು ದೊಡ್ಡ ಗುಣ 4
15. ಆಕಾರ ಕಳೆದುಕೊಂಡ ಆಂತರ್ಯ 5
16. ತಾವರೆ ಹೂವನ್ನು ಅಪಹರಿಸಿದವ 5
17. ಸಾಹಿತ್ಯ ಕಲೆ ಪ್ರಕಾರಗಳ ಲೋಪಗಳನ್ನು ಎಳೆ ಎಳೆಯಾಗಿ ಬಿಡಿಸಿ ಬರೆಯುವವ 4

ಎಡದಿಂದ ಬಲಕ್ಕೆ

1. ಕೊಡಲಿ ಹಿಡಿದ ಜಮದಗ್ನಿ ಪುತ್ರ 5
3. ಹರ ಹರ ಎನ್ನುತ್ತಾ ಕಣ್ಣು ಹರಿಬಿಡುವ ಇರುಳು 4
5. ಸಿನಿಮಾ ನಾಟಕಗಳ ಕನ್ನಡ ಪ್ರೇಕ್ಷಕ 3
7. ನಾಟಕ ವೇದಿಕೆಯ ಮಹಾಮನೆ 5
9 ವಯಸ್ಸಾದಂತೆ ನಮ್ಮನ್ನು ಅಪ್ಪುವ ಮುದಿತನ 2
10. ಸವತಿಯ ಪುತ್ರ 4
12. ಕರಿಯಲ್ಲಿ ಕಾಣುವ ಈ ಸ್ಥಳ ನರಸಿಂಹ ದೇವಾಲಯಕ್ಕೆ ಖ್ಯಾತಿ 3
14. ಹೂ ಎಸಳಿನಂತಹ ಸೇನಾಪತಿಯ ಉತ್ತರಭಾರತ ಕುಲನಾಮ 3
16. ಕತ್ತರಿಸಿ ಸೇರಿಸುವಾಗ ಆಗುವ ತುಮುಲ 4
18. ಪಡ್ಡೆ ಹುಡುಗರು ಕಾಲಹರಣ ಮಾಡುವ ಜಾಗ 2
19. ಎಲ್ಲವೂ ಸಮಯದ ಕಟ್ಟಳೆಗೆ ಒಳಪಟ್ಟಿದ್ದು 5
20. ಹಿಂದುಮುಂದಾದ ಮೈ ಮನಗಳ ಕೊಳಕು 3
21. ಹರನ ಚಿಂದಿಯಾದ ಬಟ್ಟೆ 4
22. ಒಂಭತ್ತು ಸಮುದ್ರಗಳ ಲವಣ ಕಲಾಯಿಗೆ ಬಳಸುವ ವಸ್ತು 5

ಪದಬಂಧ ಉತ್ತರ -2716

ಮೇಲಿಂದ ಕೆಳಕ್ಕೆ

1. ದತ್ತಾತ್ರೇಯ 3.ತರುವಾಯ 4.ಮಣಿಪುರ 5.ಭಾವಜೀವ 7.ಜಯಕುಮಾರ 8.ಜಗಳಗಂಟಿ 10.ಸಹಗಮನ 11.ನವಪಲ್ಲವ 15.ಸರಸರ 16.ಕಾಡುಕೋತಿ 17.ಜಲಗಜ 18. ರಮ್ಯಗಾನ

ಎಡದಿಂದ ಬಲಕ್ಕೆ


1. ಹೃದಯವಂತ 4.ಮಹಾನುಭಾವ 6.ರುದ್ರಾಣಿ 7.ಜಯವಿಜಯ 9.ರಸಕವನ 12.ಕುರಿಕಾಳಗ 13.ಯಾಗಮಂಟಪ 14.ರಸವಾಟಿಕಾ 17.ಜನಗೌರವ 19.ಕೋಡಗ 20.ಪರಮಗತಿ 21.ಜಗಜ್ಜನನಿ



> ಮಹಾನಗರದ ಗೋಡೆಗಳ ಮೇಲಿನ ಬಿಲ್ ಬೋರ್ಡ್‌ಗಳು, ಹೋರ್ಡಿಂಗ್‌ಗಳ ಅಧ್ಯಯನದ ಮೂಲಕ ನಗರ ಭೂದೃಶ್ಯ ರೂಪಾಂತರವನ್ನು ಈ ಕಲಾಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾರೆ ಕಲಾವಿದ ರವಿ ಕಾಶಿ. ರಾಜಕೀಯ ಘೋಷಣೆಗಳು, ಧಾರ್ಮಿಕ ಚಿಹ್ನೆಗಳು ಮತ್ತು ಜಾಹೀರಾತುಗಳ ತುಣುಕುಗಳು ಇಲ್ಲಿ ಕಲೆಯಾಗಿ ಅರಳಿವೆ...

ರವಿಕುಮಾರ್ ಕಾಶಿ ಅವರ ಕಲಾಕೃತಿಗಳು






ನಗರದ ದೃಶ್ಯ ಸಂಸ್ಕೃತಿಗೊಂದು ಬಣ್ಣ

ಗಿರಿಧರ್ ಖಾಸನೀಸ್

ಆಧುನಿಕ ನಗರವು ತನ್ನದೇ ಆದ ಕಥೆ, ಕುರುಹು ಮತ್ತು ರಹಸ್ಯಗಳನ್ನು ಹೊಂದಿರುತ್ತದೆ. ಅಸ್ತವ್ಯಸ್ತ ಬೀದಿಗಳು, ಮಾರುಕಟ್ಟೆಗಳು, ಅರೆ-ಕತ್ತಲೆ ಮೂಲೆಗಳು ಮತ್ತು ಗೀಚುಬರಹ ತುಂಬಿದ ಗೋಡೆಗಳು ಆಧುನಿಕ ನಗರಗಳ ದೃಶ್ಯಸಂಸ್ಕೃತಿ ಹೇಗೆ ನಿರಂತರವಾಗಿ ಬದಲಾಗುತ್ತಿದೆ ಎಂಬುದನ್ನು ಸಾಬೀತುಪಡಿಸುತ್ತವೆ.

ಪ್ರಪಂಚದಾದ್ಯಂತ ಅನೇಕ ಸಮಕಾಲೀನ ಕಲಾವಿದರು ಆಧುನಿಕ ನಗರವನ್ನು ಪ್ರಮುಖ ಮತ್ತು ಆಸಕ್ತಿದಾಯಕ ವಿಷಯವೆಂದು ಪರಿಗಣಿಸುತ್ತಾರೆ. ಬೆಂಗಳೂರು ಮೂಲದ ಕಲಾವಿದ ರವಿಕುಮಾರ್ ಕಾಶಿ ಅವರು ಹಲವಾರು ವರ್ಷಗಳಿಂದ ನಗರ ಮತ್ತು ದೃಶ್ಯ ಸಂಸ್ಕೃತಿಯ ವೀಕ್ಷಕರಾಗಿದ್ದಾರೆ. ಬೆಂಗಳೂರಿನ ಗೋಡೆಗಳು, ಬಿಲ್ ಬೋರ್ಡ್‌ಗಳು, ಹೋರ್ಡಿಂಗ್‌ಗಳನ್ನು ಶ್ರದ್ಧೆಯಿಂದ ದಾಖಲಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ನಗರ ಭೂದೃಶ್ಯದ ರೂಪಾಂತರವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಅದರ ಮೂಲಕ ನಗರದ ಸಾಮಾಜಿಕ ಇತಿಹಾಸ ಮತ್ತು ರಾಜಕೀಯ ಸನ್ನಿವೇಶದ ಕುರುಹುಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ನಗರದ ನಿರಂತರ ಬದಲಾವಣೆಗಳು ಮತ್ತು ಬದಲಾವಣೆಗಳನ್ನು ಪ್ರಚೋದಿಸುವ ಶಕ್ತಿಗಳ ಸ್ವರೂಪ ಹೇಗಿರಬಹುದು ಎನ್ನುವುವೂ ಅವರ ಪರೀಕ್ಷೆಯ ವಿಷಯವಾಗಿವೆ.



'ನನ್ನ ಸುತ್ತಲಿನ ಜೀವನವನ್ನು ಕುತೂಹಲದಿಂದ ನೋಡುವ ಹಾಗೂ ಅರ್ಥಮಾಡಿಕೊಳ್ಳುವ ಆಸಕ್ತಿಯನ್ನು ದೀರ್ಘಕಾಲದಿಂದ ಉಳಿಸಿಕೊಂಡಿದ್ದೇನೆ' ಎನ್ನುತ್ತಾರೆ ರವಿ ಕಾಶಿ. 'ನನ್ನ ಅನುಭವಗಳು ಮತ್ತು ಅವಲೋಕನಗಳು ಒಂದಲ್ಲ ಒಂದು ರೀತಿಯಲ್ಲಿ ನನ್ನ ಕಲೆಯ ಮೂಲಕ ಹೊರಹೊಮ್ಮುತ್ತವೆ. ಮೊದಮೊದಲು ರೇಖಾಚಿತ್ರಗಳು ಮತ್ತು ಪಠ್ಯಗಳ ಮೂಲಕ ನನಗೆ ಕಂಡ ದೃಶ್ಯಗಳನ್ನು ಡೈರಿಯಲ್ಲಿ ದಾಖಲಿಸುತ್ತಿದ್ದೆ. ಇತ್ತೀಚಿನ ವರ್ಷಗಳಲ್ಲಿ ದೃಶ್ಯ ಚಿತ್ರಣ ಮತ್ತು ಅದಕ್ಕೆ ಸಂಬಂಧಪಟ್ಟ ಗುರುತು ಚಿಹ್ನೆಗಳನ್ನು ಸೆರೆಹಿಡಿಯಲು ಡಿಜಿಟಲ್ ಕ್ಯಾಮೆರಾ ಮತ್ತು ಮೊಬೈಲ್‌ಅನ್ನು ಬಳಸುತ್ತೇನೆ. ನೋಡುವ, ಗ್ರಹಿಸುವ ಹಾಗೂ ದಾಖಲಿಸುವ ನನ್ನ ಪ್ರಕ್ರಿಯೆ ಅನೇಕ ವರ್ಷಗಳಿಂದ ನಿರಂತರವಾಗಿ ನಡೆದುಬಂದಿದೆ. ನಗರದ ಮೂಲೆ ಮೂಲೆಗಳಲ್ಲಿ ಗೋಡೆ ಕಟ್ಟಡಗಳ ಮೇಲೆ ಕಾಣುವ ಸಾವಿರಾರು ಚಿತ್ರಗಳು ನನ್ನ 'ಖಜಾನೆ'ಯಲ್ಲಿ ಇವೆ. ಸಾಮಾನ್ಯವಾಗಿ ಕಂಡರೂ ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳ ಜೋಡಣೆಗಳಲ್ಲಿ ಒಂದು ರೀತಿಯ ಸಂಕೀರ್ಣತೆ ಗೋಚರವಾಗುತ್ತದೆ. ದೃಶ್ಯ ಸಂಸ್ಕೃತಿಯಲ್ಲಿನ ವೈವಿಧ್ಯಮಯ ರಚನೆಗಳು, ಚಿಹ್ನೆಗಳು, ಮಾದರಿಗಳು ಮತ್ತು ಅವುಗಳಲ್ಲಿ ಹುದುಗಿರುವ ಒಳ ಅರ್ಥಗಳು ನನ್ನ ಅನೇಕ ಕಲಾಕೃತಿಗಳಿಗೆ ಸ್ಫೂರ್ತಿಯಾಗಿವೆ' ಎನ್ನುತ್ತಾರೆ ಅವರು.



ರವಿ ಕಾಶಿ

ರವಿಕಾಶಿಯವರ ಇತ್ತೀಚಿನ ಚಿತ್ರಕಲಾ ಪ್ರದರ್ಶನ, 'ದಿ ಅನ್‌ರುಲಿ ಸಿಂಟ್ಯಾಕ್ಸ್' (The Unruly Syntax) ನಮ್ಮ ನಡುವಿನ ದೃಶ್ಯಸಂಸ್ಕೃತಿಯಲ್ಲಿ ಸುಪ್ತವಾದ ಅರ್ಥವನ್ನು ಹುಡುಕುವ ಅವರ ಅನ್ವೇಷಣೆಯ ವಿಸ್ತರಣೆಯಾಗಿದೆ. ಈ ಪ್ರದರ್ಶನದಲ್ಲಿ ತಾವು ದಾಖಲಿಸಿದ ವಿವಿಧ ಚಿತ್ರಗಳನ್ನು ಕಾಶಿ ಅವರು ಕೊಲಾಜ್ (collage) ರೂಪದಲ್ಲಿ ಹರಡಿ, ವಿಶಿಷ್ಟ ರೀತಿಯಲ್ಲಿ ಸಂಯೋಜಿಸಿ, ಕ್ಯಾನ್ವಾಸಿನ ಮೇಲೆ ಮೂಡಿಸಿದ್ದಾರೆ. ಆ ಮೂಲಕ ತೋರಿಕೆಯಲ್ಲಿ ಸಂಪರ್ಕವಿಲ್ಲದ ಚಿತ್ರಗಳು, ರಾಜಕೀಯ ಘೋಷಣೆಗಳು, ಧಾರ್ಮಿಕ ಚಿಹ್ನೆಗಳು ಮತ್ತು ಜಾಹೀರಾತುಗಳ ತುಣುಕುಗಳು ಕಲಾತ್ಮಕವಾಗಿ ಹೇಗೆ ಒಟ್ಟುಗೂಡಬಹುದು ಎನ್ನುವುದನ್ನು ಕಲಾವಿದರು ತೋರಿಸಿಕೊಟ್ಟಿದ್ದಾರೆ.

ರವಿಕಾಶಿಯವರ ವರ್ಣಚಿತ್ರಗಳಲ್ಲಿ ವಿಚಿತ್ರವಾದ ಪಾತ್ರಗಳು ಹಾಗೂ ಸನ್ನಿವೇಶಗಳು ಹುಟ್ಟುಹಾಕಿಕೊಳ್ಳುತ್ತವೆ. ಸಣ್ಣ (ಪೆಟ್ಟಿಗೆ?) ಅಂಗಡಿ ಬಳಿ ಶಸ್ತ್ರಸಜ್ಜಿತ ಯೋಧರು ಕಾಣಸಿಗುತ್ತಾರೆ. ಕೆಂಪು ಕೊಂಬಿನ ಟಗರಿನ ಸಹವಾಸದಲ್ಲಿ ಕಾಮಪ್ರಚೋದಕಿಯ ಮಾದಕ ತುಟಿಗಳು ತೆರೆಯಲಾರಂಭಿಸುತ್ತವೆ. ಬೆರಗು ಕಣ್ಣಿನ ನವಿಲು ಮೊಟ್ಟೆಯೊಡೆಯುವ ಕೋಳಿಯ ನಡುವೆ ಚಲನಚಿತ್ರ ತಾರೆ ತಟಸ್ಥನಾಗಿ ನಿಲ್ಲುತ್ತಾನೆ. ಅಮೂರ್ತ ಗೋಡೆಗಳ ನಡುವೆ ಅನಾಮಧೇಯ ಯುವಕನೊಬ್ಬ ಜಾರಿ ಬೀಳುವ ಅವಸ್ಥೆಯಲ್ಲಿದ್ದಾನೆ.

ಒಂದು ಚಿತ್ರದಲ್ಲಿ ಹುಸಿನಗೆ ಬೀರುವ ಗಾಂಧೀಜಿಯ ಛಿದ್ರಗೊಂಡ ಚಿತ್ರವು ಬೀದಿ ಬದಿಯಲ್ಲಿ ಕಾಣುವ ಐಸ್‌ಕ್ರೀಮ್‌ನ ಜಾಹೀರಾತು ಚಿತ್ರ ಮತ್ತು ಕುಪಿತ ದೇವನ ಚಿಹ್ನೆಗಳ ಮಧ್ಯೆ ಸಿಲುಕಿ ಅಸ್ವಸ್ಥವಾಗಿರುವಂತಿದೆ. ಇವೆಲ್ಲದರ ನಡುವೆ ಹೇಳಹೆಸರಿಲ್ಲದ ಷೋರೂಮ್ ಒಂದರ ಸೂಚನೆಯೂ ಇದೆ. ಈ ದೃಶ್ಯಾಂಶಗಳು ಮೇಲುನೋಟಕ್ಕೆ ಸಂಬಂಧರಹಿತವಾಗಿ ಕಂಡುಬಂದರೂ ಒಂದು ಅಪರಿಚಿತ ಎಳೆಯಿಂದ ಅರ್ಥವತ್ತಾಗಿ ಹೆಣೆದ ಹಾಗನಿಸಿ ಅನಿರೀಕ್ಷಿತ ಅನುಭವ ಸೃಷ್ಟಿಯಾಗುತ್ತದೆ. ಪ್ರದರ್ಶನದಲ್ಲಿನ ಅತ್ಯಂತ ಯಶಸ್ವಿ ಚಿತ್ರಗಳು ಸರಳವಾದ ಸಂಯೋಜನೆಗಳಾಗಿದ್ದರೂ ವೀಕ್ಷಕನ ಕುತೂಹಲವನ್ನು ಕೆರಳಿಸುವುದರಲ್ಲಿ ಸಫಲವಾಗುತ್ತವೆ. ಅಂತಹ ಚಿತ್ರಗಳಲ್ಲಿ ಕಲಾವಿದರು ಉದ್ವೇಗಗಳನ್ನು ಹತ್ತಿಕ್ಕಿ ಸೂಕ್ಷ್ಮತೆಗೆ ಒತ್ತುಕೊಟ್ಟಿರುವುದು ಗೋಚರವಾಗುತ್ತದೆ.

'ದಿ ಅನ್‌ರುಲಿ ಸಿಂಟ್ಯಾಕ್ಸ್' ಚಿತ್ರಕಲಾ ಪ್ರದರ್ಶನ ಗ್ಯಾಲರಿ ಸುಮುಖ, ವಿಲ್ಸನ್ ಗಾರ್ಡನ್‌ನಲ್ಲಿ ಜನವರಿ 22, 2022 ರವರೆಗೆ ನಡೆಯಲಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಿಕ್ಕ ಕೇಶ್ರಿಷ್ಟ ಕಥೆಯ — ಎರಡು ಗಿಳಿಗಳು

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದು ಆಶ್ರಮದಲ್ಲಿ ಗುರುಗಳು ಗಿಳಿಗಳನ್ನು ಸಾಕಿದ್ದರು. ಆಶ್ರಮದ ತುಂಬಾ ಗಿಳಿಗಳದ್ದೇ ಕಲರವ



ಗುರುಗಳು ಒಂದು ಗಿಳಿಯನ್ನು ಸುಸಂಸ್ಕೃತ ವ್ಯಕ್ತಿಗೂ ಇನ್ನೊಂದನ್ನು ಕಟುಕ ವೃತ್ತಿಯವನಿಗೂ ಕೊಟ್ಟು ಸಾಕಲು ಹೇಳುತ್ತಾರೆ



ಸುಸಂಸ್ಕೃತ ವ್ಯಕ್ತಿ ಸಾಕಿದ ಗಿಳಿಯು ಒಳ್ಳೆಯ ನಡತೆ ಕಲಿತು, ಎಲ್ಲರನ್ನೂ ತುಂಬಾ ಗೌರವದಿಂದ ಮಾತನಾಡಿಸುತ್ತದೆ



ಕಟುಕ ಸಾಕಿದ ಗಿಳಿಯು ಬಂದವರಿಗೆಲ್ಲಾ ಹೊಡೆಯಿರಿ, ಬಡಿಯಿರಿ ಎಂದು ಬೈಯ್ಯುತ್ತದೆ. ಕೆಟ್ಟ ಮಾತುಗಳನ್ನೇ ಆಡುತ್ತದೆ



ಕೆಲವು ದಿನಗಳ ಬಳಿಕ ಗುರುಗಳು ಇಬ್ಬರನ್ನೂ ಕರೆದು ಗಿಳಿಗಳಲ್ಲಾದ ಬದಲಾವಣೆ ಬಗ್ಗೆ ಕೇಳಿ ತಿಳಿದುಕೊಳ್ಳುತ್ತಾರೆ



ಕಟುಕ ಶಿಷ್ಯನ ಗಿಳಿಯ ವರ್ತನೆ ತಿಳಿದ ಗುರುಗಳು, ವ್ಯಕ್ತಿಗೆ ಸಂಸ್ಕಾರ ಮುಖ್ಯ ಎಂದು, ಒಳ್ಳೆಯ ನಡತೆ ಬಗ್ಗೆ ಬೋಧಿಸುತ್ತಾರೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಆಲೋಚನೆಗೆ ಆಹಾರ

1. ಹೊಟೇಲೊಂದರಲ್ಲಿ ಗ್ರಾಹಕನೊಬ್ಬ ತನಗಿಷ್ಟವಾದ ತಿಂಡಿಗಳನ್ನು ತಿಂದು ಚಹಾ ಕುಡಿದ. ಮಾಣಿ ಲೆಕ್ಕ ಮಾಡಿ ಅದರ ಬಿಲ್ಲನ್ನು ಕೊಟ್ಟ. ಬಿಲ್ ₹ 81 ಆಗಿತ್ತು. ಗ್ರಾಹಕ, ಮ್ಯಾನೇಜರ್ ಬಳಿ ಬಂದು ₹ 100 ನೋಟು ಕೊಟ್ಟ. ಮ್ಯಾನೇಜರ್ ಬಿಲ್ ನೋಡಿ, ಮರಳಿ ಗಿರಾಕಿಗೆ ₹ 82 ಕೊಟ್ಟ. ಹೀಗಾಗಲು ಏನು ಕಾರಣವಿರಬಹುದು ಯೋಚಿಸಿ.
2. ಹೋಟೆಲೊಂದಕ್ಕೆ 8 ಜನ ಬಂದು (ಎಂಟೇ ಜನ ಇದ್ದರೂ) ಸಿಕ್ಸ್‌ಟೀಟೂ ಕಾಫಿಗೆ ಆರ್ಡರ್ ಮಾಡಿದರು. ಹೀಗೇಕೆ ಇರಬಹುದು? ಯೋಚಿಸಿ.
3. ಗಣಿತ ಒಗಟು:

He is between MAT, his degree is ICS - who is he?

Ans: MAT HE MAT ICS

ಶಬ್ದಗಳೊಡನೆ ಸರಸ ಪದಬದಲಾಟ


ಇಲ್ಲಿ ಕೊಟ್ಟಿರುವ ಮೂಲಾಕ್ಷರ ಪದಗಳಿಗೆ ಮುಂದೆ ಕೊಟ್ಟಿರುವ ಸುಳಿವಿನಂತೆ ಕಾಗುಣಿತ ಸೇರಿಸಿ ಅವೇ ಅಕ್ಷರಗಳ ಬೇರೆ ಪದ ರಚಿಸಿ.
ಉದಾ: ಮರ - (ಒಂದು ಸಂಖ್ಯೆ) = ಮೂರು

1. ಗರಿ = ____ (ಧ್ಯೇಯ)
2. ಮತ = ____ (ಮುಖ)
3. ಗಣ = ____ (ಒಂದು ಪಕ್ಷಿ)
4. ಬಲ = ____ (ಹುಡುಗಿ)
5. ಹರ = ____ (ಒಂದು ತರಕಾರಿ)
6. ಸಲ = ____ (ಪರಾಭವ)
7. ಮನ = ____ (ಮತ್ಸ್ಯ)
8. ದಳ = ____ (ಆಕ್ರಮಣ)
9. ಕರ = ____ (ಹೊಂಡ)
10. ತರ = ____ (ಪರದೆ)

ಪದ - ಹಿಗ್ಗು

1.ಶನಿ 2. ಇಲಿ 3. ಕುತ್ತು 4. ಉಟ್ಟು
5. ಕೊಡು 6. ಕಾಸು 7.ಆತ 8.ಕಡು

1		ರ		5		ದ್ದ	
2		ಘಾ		6		ದ	
3		ಪ್ಪಿ		7		ಕು	
4		ಯಿ		8		ವ	





ಅದಲು ಬದಲು ಕಂಚಿ ಕದಲು

1. ಕಲಾಭವನದ = ____________
2. ರಮಾದೂಡು = ____________
3. ಹಾಲಿನಡಿ = ____________
4. ನರಿಗುಮ್ಮ = ____________

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ವಿಷಯಗಳಿಗೆ ಮುಂದೆ ಕೊಟ್ಟಿರುವ ಸರಿ ತಪ್ಪು ಗುರುತಿಸಿ

ಎ ವಿಭಾಗ		
1	ಸರಳ ಕೋನ 180* ಇರುತ್ತದೆ.	ಸರಿ/ತಪ್ಪು
2	ತ್ರಿಕೋನದ ಮೂರು ಕೋನಗಳ ಮೊತ್ತ 360*	ಸರಿ/ತಪ್ಪು
3	97 ಇದು ಅವಿಭಾಜ್ಯ ಸಂಖ್ಯೆ	ಸರಿ/ತಪ್ಪು
4	ಶ್ರೀನಿವಾಸ ರಾಮಾನುಜನ್ ಒಬ್ಬ ಶ್ರೇಷ್ಠ ಗಣಿತಜ್ಞ	ಸರಿ/ತಪ್ಪು
5	ಪುನಃ ಪುನಃ ಮಾಡುವ ವ್ಯವಕಲನ ಕ್ರಿಯೆಗೆ ಗುಣಾಕಾರ ಎಂದು ಹೆಸರು	ಸರಿ/ ತಪ್ಪು
6	ಒಂದು ಸಂಖ್ಯೆಯನ್ನು ಇಚ್ಛಿತ ಘಾತಕ್ಕೆ ಏರಿಸುವುದಕ್ಕೆ ಘಾತಾಕಾರ ಎಂದು ಹೆಸರು	ಸರಿ/ತಪ್ಪು
7	ಮಾನವ ಕಂಪ್ಯೂಟರ್ ಎಂದು ಹೆಸರಾದವರು ಶಕುಂತಲಾ ದೇವಿಯವರು	ಸರಿ/ ತಪ್ಪು
8	'ಅರಳು ಮರಳು' – ವಿ. ಕೃ. ಗೋಕಾಕರ ಕೃತಿ	ಸರಿ/ತಪ್ಪು
9	ವೈದೇಹಿಯವರ 'ಕ್ರೌಂಚ ಪಕ್ಷಿಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ	ಸರಿ/ತಪ್ಪು
10	ಭಾರತದಲ್ಲಿ ಜೋಗ ಜಲಪಾತ ಅತಿ ಆಳವಾದ ಜಲಪಾತ	ಸರಿ/ ತಪ್ಪು

ಇಲ್ಲಿ ಕೊಟ್ಟಿರುವ ವಿಷಯಕ್ಕೆ ಗಾದೆ ಮಾತು ನೆನಪಿಸಿಕೊಂಡು ಅವುಗಳಿಗೆ ಹೊಂದುವ ಪ್ರಾಣಿಯ ಹೆಸರು ಹೊಂದಿಸಿ

ಬಿ ವಿಭಾಗ		
1	ಯಾವ ಪ್ರಾಣಿ ಇದ್ದರೂ ಸತ್ತರೂ ಸಾವಿರ	A ಗೂಳಿ
2	ಹುಲಿ ಕೂಡ ಆಡಿ ಮೈ ಸುಟ್ಟುಕೊಂಡ ಪ್ರಾಣಿ	B ಮುಂಗುಸಿ
3	ಕಣ್ಣೀರು ಸುರಿಸುವ ಪ್ರಾಣಿ	C ಬೆಕ್ಕು
4	ಎತ್ತು ಏರಿಗೆ ಎಳೆದರೆ ಕೆರೆಗೆ ಎಳೆಯುವ ಪ್ರಾಣಿ	D ಕತ್ತೆ
5	ಯಾವ ಪ್ರಾಣಿ ಬಿದ್ದರೆ ಆಳಿಗೊಂದು ಕಲ್ಲು	E ಆಡು
6	ವೈರಿಗಳನ್ನು ಹೋಲಿಕೆ ಮಾಡುವಾಗ ಹಾವಿನೊಂದಿಗೆ ಹೋಲಿಸುವ ಪ್ರಾಣಿ	F ನಾಯಿ
7	ಯಾವ ಪ್ರಾಣಿಗೆ ಗೊತ್ತಿಲ್ಲ ಹತ್ತಿ ಕಾಳಿನ ರುಚಿ?	G ಮೊಸಳೆ
8	ಇಲಿಗೆ ಪ್ರಾಣ ಸಂಕಟವಾದರೆ ಯಾವ ಪ್ರಾಣಿಗೆ ಚೆಲ್ಲಾಟ	H ನರಿ
9	ಯಾವಾಗಲೂ ಇದರ ಬಾಲ ಡೊಂಕೇ	I ಕೋಣ
10	ಎಲ್ಲ ಗಿಡ ಮುಟ್ಟುವ ಪ್ರಾಣಿ	J ಆನೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಹಿಗ್ಗು: 1. ವಚನ 2. ಹರಿಣಿ 3. ಪವಿತ್ರ 4. ಹೊರಳೆ 5. ಭೂಕಂಪ 6. ಸರಸಿ 7. ಸಂಹಿತೆ 8. ಬಸಳೆ

ಅದಲು ಬದಲು ಕಂಚಿ ಕದಲು: 1. ವಿಜಯನಗರ 2. ರಾಜನಮಗ 3. ಕನ್ನಡದ ಕಬೀರ 4. ಮರದಡಿ

ಶಬ್ದಗಳೊಡನೆ ಸರಸ: I) 1. ಜನನ 2. ಮನನ 3. ಹನನ 4. ಆನನ 5 ಕಾನನ
II) 1. ಜನನ 2. ಜವಾನ 3. ಜಪಾನ 4. ಜಮಾನ 5. ಜತನ

ಟ್ವೆಂಟಿ-20 ಮ್ಯಾಚ್: 1-F, 2-K, 3-I, 4-L, 5-H, 6-M, 7-N, 8-O, 9-Q, 10-P, 11-R, 12-S, 13-G, 14-T, 15-E, 16-J, 17-D, 18-A, 19-C, 20-B

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಪ್ರವೀಣ ವಿ. ಚಿಕ್ಕೋಡಿ
ಬಾಗಲಕೋಟೆ



ಶಿವಲಿಂಗಸ್ವಾಮಿ
ಕೋಣಂದೂರು (ತೀರ್ಥಹಳ್ಳಿ)



ತನ್ಮಯಿ, ಮೈಸೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in